3. ಹೊಸ ನಿಯಮ 67ಎ ಸೇರ್ಪಡೆ.– ಸದರಿ ನಿಯಮಗಳ ನಿಯಮ 67ರ ನಂತರ, ಮುಂದೆ ಅಧಿಸೂಚಿಸುವ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಗಿನ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"67ಎ. **ಕಿರು ಸಂದೇಶ ಸೇವೆಯ (ಎಸ್.ಎಂ.ಎಸ್) ಸೌಲಭ್ಯದ ಮೂಲಕ ರಿಟರ್ನ್ ಅಥವಾ ಹೊರ ಮುಖ ಪೂರೈಕೆಗಳ ವಿವರಗಳನ್ನು ಒದಗಿಸುವ ವಿಧಾನ.**–

ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ನೊಂದಾಯಿತ ವ್ಯಕ್ತಿಗಳು ಒಂದು ತೆರಿಗೆ ಅವಧಿಗೆ ಪ್ರಕರಣ 39 ರಂತೆ ನಮೂನೆ ಜಿಎಸ್‌ಟಿಆರ್–3ಬಿ ಮೂಲಕ ಶೂನ್ಯ ರಿಟರ್ನ್ ಅನ್ನು ಸಲ್ಲಿಸಬೇಕಾದಲ್ಲಿ, ಯಾವುದೇ ಎಲೆಕ್ಟ್ರಾನಿಕ್ ಸಲ್ಲಿಕೆಯ ಉಲ್ಲೇಖವು ಎಸ್‌ಎಮ್‌ಎಸ್ ಸೇವೆಯ ಮುಖಾಂತರ ಸಲ್ಲಿಕೆಯಾದ ಸದರಿ ರಿಟರ್ನ್‌ನ್ನು ನೋಂದಾಯಿತಾ ಮೊಬೈಲ್ ಸಂಖ್ಯೆಗೆ ಏಕ ಕಾಲದ ಸಂಕೇತಪದದ ಮೂಲಕ ಪರಿಶೀಲಿಸಿ ಸಲ್ಲಿಸಬಹುದಾಗಿರುವುದನ್ನು ಒಳಗೊಂಡಿರುತ್ತದೆ.

ವಿವರಣೆ. – ಸದರಿ ನಿಯಮಾವಳಿಗಳ ಉದ್ದೇಶದಂತೆ, ಒಂದು ತೆರಿಗೆ ಅವಧಿಗೆ ಶೂನ್ಯ ರಿಟರ್ನ್ ಎಂದರೆ ಪ್ರಕರಣ 39ರಲ್ಲಿರುವ ರಿಟರ್ನ್‌ನಂತೆ ನಮೂನೆ ಜಿಎಸ್‌ಟಿಆರ್–3ಬಿ ಯಲ್ಲಿನ ಎಲ್ಲಾ ಕೋಷ್ಟಕಗಳಲ್ಲಿ ಶೂನ್ಯ ಅಥವಾ ಖಾಲಿ ಎನ್ನುವುದು.".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಸಂಖ್ಯೆ.ಆಇ05 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 17/06/2020
ಅಧಿಸೂಚನೆ (4–ಸಿಎ/2020)

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (4ನೇ ತಿದ್ದುಪಡಿ) ನಿಯಮಗಳು, 2020, ನಿಯಮ 3ರೊಂದಿಗೆ ಓದಿ, ಕರ್ನಾಟಕ ವಿಶೇಷ ರಾಜ್ಯಪತ್ರಿಕೆ ಭಾಗ–IVA ಸಂಖ್ಯೆ 197 ದಿನಾಂಕ 10ನೇ ಜೂನ್ 2020ರಲ್ಲಿ ಸಂಖ್ಯೆ ಆಇ 05 ಸಿಎಸ್‌ಎಲ್ 2020 ಅಧಿಸೂಚನೆ (4–ಸಿ/2020) ದಿನಾಂಕ 17.06.2020ರಂದು ಪ್ರಕಟವಾದ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳನ್ನು ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಈ ಮೂಲಕ ಮೇಲೆ ಹೇಳಿದ ನಿಯಮಗಳು, 8ನೇ ಜೂನ್, 2020 ರಿಂದ ಜಾರಿಗೆ ಬರುವಂತೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಡಿ/2020)
ಸಂಖ್ಯೆ.ಆಇ 05 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 07/08/2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ, ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗ (ಐದನೇ ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಈ ನಿಯಮಗಳು, 2020 ರ **ಮೇ** 27ನೇ ದಿನದಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. **ನಿಯಮ 7ರ ತಿದ್ದುಪಡಿ.**– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು 2017ರ (ಇವುಗಳನ್ನು ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 7ರಲ್ಲಿರುವ ಕೋಷ್ಟಕದಲ್ಲಿ ದಿನಾಂಕ 1 ನೇ ಏಪ್ರಿಲ್ 2020 ರಿಂದ ಜಾರಿಗೆ ಬರುವಂತೆ ಕೆಳಕಂಡ ಕೋಷ್ಟಕ ಪ್ರತಿಯೋಜಿಸತಕ್ಕದ್ದು, ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	ರಾಜಿ ತೆರಿಗೆ ಹಾಕುವ ಆಯ್ಕೆಯ ಪ್ರಕರಣ	ನೋಂದಾಯಿತ ವ್ಯಕ್ತಿಗಳ ವರ್ಗ	ತೆರಿಗೆಯ ದರ
(1)	(1ಎ)	(2)	(3)
1.	10ನೇ ಪ್ರಕರಣದಲ್ಲಿನ (1) ಮತ್ತು (2) ನೇ ಉಪ ಪ್ರಕರಣಗಳು	ಸರಕುಗಳ ತಯಾರಕರುಗಳನ್ನು ಹೊರತುಪಡಿಸಿ ಸರ್ಕಾರವು ಅಧಿಸೂಚಿಸಬಹುದಾದ ಅಂಥ ತಯಾರಕರು	ರಾಜ್ಯದಲ್ಲಿನ ಒಟ್ಟು ವಹಿವಾಟಿನ ಶೇಕಡ ಅರ್ಧದಷ್ಟು
2.	10ನೇ ಪ್ರಕರಣದಲ್ಲಿನ (1) ಮತ್ತು (2) ನೇ ಉಪ ಪ್ರಕರಣಗಳು	ಅನುಸೂಚಿ 11ರ ಕಂಡಿಕೆ 6 ರ ಖಂಡ(ಬಿ)ದಲ್ಲಿ ಉಲ್ಲೇಖಿಸಿರುವಂತೆ ಪೂರೈಕೆ ಮಾಡುವುದರಲ್ಲಿ ತೊಡಗಿರುವ ಪೂರೈಕೆದಾರರುಗಳು	ರಾಜ್ಯದಲ್ಲಿನ ಒಟ್ಟು ವಹಿವಾಟಿನ ಶೇಕಡ ಎರಡೂವರೆಯಷ್ಟು
3.	10ನೇ ಪ್ರಕರಣದಲ್ಲಿನ (1) ಮತ್ತು (2) ನೇ ಉಪ ಪ್ರಕರಣಗಳು	ಪ್ರಕರಣ 10ರ ಉಪಪ್ರಕರಣ (1) ಮತ್ತು (2) ರಡಿಯಲ್ಲಿ ರಾಜಿ ತೆರಿಗೆ ವಿಧಿಸುವಿಕೆಗೆ ಅರ್ಹರಾದ ಯಾವುದೇ ಇತರ ಪೂರೈಕೆದಾರ	ರಾಜ್ಯದಲ್ಲಿನ ವಿಧಿಸಬಹುದಾದ ಒಟ್ಟು ತೆರಿಗೆ ಪೂರೈಕೆಯಾದ ಸರಕು ಮತ್ತು ಸೇವೆಗಳ ವಹಿವಾಟಿನ ಶೇಕದ ಅರ್ಧದಷ್ಟು.

4.	10ನೇ ಪ್ರಕರಣದಲ್ಲಿನ (2ಎ) ಉಪ ಪ್ರಕರಣ	ನೋಂದಾಯಿತ ವ್ಯಕ್ತಿಗಳು, 10 ನೇ ಪ್ರಕರಣದಲ್ಲಿನ (1) ಮತ್ತು (2) ನೇ ಉಪ ಪ್ರಕರಣಗಳಡಿ ರಾಜಿ ತೆರಿಗೆ ವ್ಯಾಪ್ತಿಗೆ ಒಳಪಡದೆ 10 ನೇ ಪ್ರಕರಣದಲ್ಲಿನ (2ಎ) ಉಪ ಪ್ರಕರಣಗಳಡಿ ಆಯ್ಕೆ ಮಾಡಿಕೊಂಡು ತೆರಿಗೆ ಪಾವತಿಸವವರು	ರಾಜ್ಯದಲ್ಲಿನ ಪೂರೈಕೆಯಾದ ಸರಕು ಮತ್ತು ಸೇವೆಗಳ ಒಟ್ಟು ವಹಿವಾಟಿನ ಶೇಕದ ಮೂರರಷ್ಟು.

2. **ನಿಯಮ 26ರ ತಿದ್ದುಪಡಿ:–** ಸದರಿ ನಿಯಮಗಳ ನಿಯಮ 26 ರಲ್ಲಿನ ಉಪನಿಯಮ (1) ರಲ್ಲಿ ಎರಡನೇ ಪರಂತುಕಗೆ, ಈ ಕೆಳಗಿನಂತೆ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ಕಂಪನಿ ಅಧಿನಿಯಮ 2013ರ (2013ರ ಕೇಂದ್ರ ಅಧಿನಿಯಮ 18) ನಿಬಂಧನೆಗಳಡಿ ನೊಂದಾಯಿತ ವ್ಯಕ್ತಿಗಳು ಪ್ರಕರಣ 39 ರಡಿಯಲ್ಲಿ ನಮೂನೆ ಜಿಎಸ್‌ಟಿಆರ್–3ಬಿಯನ್ನು 21ನೇ ಏಪ್ರಿಲ್ 2020 ರಿಂದ 30ನೇ ಸೆಪ್ಟೆಂಬರ್ 2020 ರ ವರೆಗೆ, ಎಲೆಕ್ಟ್ರಾನಿಕ್ ವೆರಿಫಿಕೇಶನ್ ಕೋಡ್ (ಇವಿಸಿ) ಮೂಲಕ ಪರಿಶೀಲಿಸಿದ ರಿಟರ್ನ್ ಕೂಡ ಸಲ್ಲಿಸಲು ಅನುಮತಿಸಲಾಗಿದೆ.

ಪರಂತು, ಕಂಪನಿ ಅಧಿನಿಯಮ 2013 ರ (2013 ರ ಕೇಂದ್ರ ಅಧಿನಿಯಮ 18) ನಿಬಂಧನೆಗಳಡಿ ನೊಂದಾಯಿತ ವ್ಯಕ್ತಿಗಳು ಪ್ರಕರಣ 39 ರಡಿಯಲ್ಲಿ ನಮೂನೆ ಜಿಎಸ್‌ಟಿಆರ್–1ನ್ನು 27ನೇ ಮೇ 2020 ದಿನದಿಂದ 30ನೇ ಸೆಪ್ಟೆಂಬರ್ 2020 ರ ದಿನದವರೆಗೆ, ಹೊರಮುಖ ಪೂರೈಕೆಗಳನ್ನು ಎಲೆಕ್ಟ್ರಾನಿಕ್ ವೆರಿಫಿಕೇಶನ್ ಕೋಡ್ (ಇವಿಸಿ) ಮೂಲಕ ಪರಿಶೀಲಿಸಿದ ರಿಟರ್ನ್ ಕೂಡ ಸಲ್ಲಿಸಲು ಅನುಮತಿಸಲಾಗಿದೆ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಡಿಸಿ/2019)

ಸಂಖ್ಯೆ.ಆಇ 03 ಸಿಎಸ್‌ಎಲ್ 2020(ಇ), ದಿನಾಂಕ: 30.04.2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ನಿಯಮ 9ರ ಖಂಡ (ಸಿ) ಮತ್ತು ನಿಯಮ 25 ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (5ನೇ ತಿದ್ದುಪಡಿ), ನಿಯಮ, 2019ರೊಂದಿಗೆ ಓದಿ, (ಇವುಗಳನ್ನು ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ಕರ್ನಾಟಕ ವಿಶೇಷ ರಾಜ್ಯಪತ್ರಿಕೆ ಭಾಗ–IVA ಸಂಖ್ಯೆ 647 ದಿನಾಂಕ 26ನೇ ಜೂಲೈ, 2019ರಲ್ಲಿ ಸಂಖ್ಯೆ ಆಇ 47 ಸಿಎಸ್‌ಎಲ್ 2017 ಅಧಿಸೂಚನೆ (4–ಡಿ/2019) ದಿನಾಂಕ 26ನೇ ಜೂಲೈ, 2019ರಂದು ಪ್ರಕಟವಾದ ಈ ಮೂಲಕ ಮೇಲೆ ಹೇಳಿದ ನಿಯಮಗಳನ್ನು ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, 21ನೇ ಎಪ್ರಿಲ್, 2020 ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಇ /2020)
ಸಂಖ್ಯೆ.ಆಇ 05 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 19/08/2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ.ಅಂದರೆ:–

1. **ಶೀರ್ಷಿಕೆ ಮತ್ತು ಪ್ರಾರಂಭ.** – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಆರನೇ ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, 2020 ರ **ಜೂಲೈ 1**ನೇ ದಿನದಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. ನಿಯಮ 67ಎ ಅನ್ನು ಪ್ರತಿಯೋಜನೆ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು 2017 ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 67ಎ ಗೆ ಈ ಕೆಳಕಂಡ ನಿಯಮವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ :–

"67ಎ. ಕಿರು ಸಂದೇಶ ಸೇವೆಯ (ಎಸ್.ಎಂ.ಎಸ್) ಸೌಲಭ್ಯದ ಮೂಲಕ ರಿಟರ್ನ್ ಅಥವಾ ಹೊರ ಮುಖ ಪೂರೈಕೆಗಳ ವಿವರಗಳನ್ನು ಒದಗಿಸುವ ವಿಧಾನ :– ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವುದೇ ತೆರಿಗೆ ಅವಧಿಗೆ ನೋಂದಾಯಿತ ವ್ಯಕ್ತಿಯು ಪ್ರಕರಣ 39 ರಡಿ ನಮೂನೆ ಜಿಎಸ್‌ಟಿಆರ್–3ಬಿ ಯಲ್ಲಿ ಶೂನ್ಯ ರಿಟರ್ನ್ ಅಥವಾ ಪ್ರಕರಣ 37 ರಡಿ ನಮೂನೆ ಜಿಎಸ್‌ಟಿಆರ್–1 ರಲ್ಲಿ ಶೂನ್ಯ ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ, ವಿದ್ಯುನ್ಮಾನದ ಮೂಲಕ ಒದಗಿಸುವ ಪ್ರಕ್ರಿಯೆಯು ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ಬಳಸಿ, ಕಿರು ಸಂದೇಶ ಸೇವೆಯ (ಎಸ್.ಎಂ.ಎಸ್) ಸೌಲಭ್ಯದ ಮೂಲಕ ಒದಗಿಸುವ ಸದರಿ ರಿಟರ್ನ್ ಅಥವಾ ಹೊರ ಮುಖ ಸೇವೆಗಳ ವಿವರಗಳನ್ನು ಒಳಗೊಂಡಿರುತ್ತದೆ ಮತ್ತು ಸದರಿ ರಿಟರ್ನ್ ಅಥವಾ ಹೊರ ಮುಖ ಪೂರೈಕೆಗಳ ವಿವರಗಳನ್ನು ನೋಂದಾಯಿತ ಮೊಬೈಲ್ ಸಂಖ್ಯೆಯ ಮೂಲಕ ಏಕ ಕಾಲದ ಸಂಕೇತಪದದ (ಒ.ಟಿ.ಪಿ) ಆಧಾರದಲ್ಲಿ ಪರಿಶೀಲಿಸಿಸುವ ಸೌಲಭ್ಯವನ್ನು ಒಳಗೊಂಡಿರುತ್ತದೆ.

ವಿವರಣೆ.– ಈ ನಿಯಮದ ಉದ್ದೇಶಕ್ಕಾಗಿ, ಶೂನ್ಯ ರಿಟರ್ನ್ ಅಥವಾ ಶೂನ್ಯ ಹೊರಪೂರೈಕೆಗಳ ವಿವರಗಳು ಎಂದರೆ, ಯಾವುದೇ ತೆರಿಗೆ ಅವಧಿಗೆ ಸಂದರ್ಭಾನುಸಾರ, ಪ್ರಕರಣ 39 ರಡಿಯಲ್ಲಿ ಒದಗಿಸುವ ರಿಟರ್ನ್ ಅಥವಾ ಕಲಂ 37 ರಡಿಯಲ್ಲಿ ಒದಗಿಸುವ ಹೊರಮುಖ ಪೂರೈಕೆಗಳ ವಿವರಗಳು, ನಮೂನೆ ಜಿಎಸ್‌ಟಿಆರ್–3ಬಿ ಅಥವಾ ನಮೂನೆ ಜಿಎಸ್‌ಟಿಆರ್–1ಗಳ ಎಲ್ಲಾ ಕೋಷ್ಟಕಗಳಲ್ಲಿ ಶೂನ್ಯ ಅಥವಾ ಯಾವುದೇ ವಿವರಣೆಗಳು ಇಲ್ಲದಿರುವುದಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–**ಎಫ್**/2020)
ಸಂಖ್ಯೆ.ಆಇ 05 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ:08/09/2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ.ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಏಳನೇ ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, 2020 ರ **ಜೂಲೈ 30**ನೇ ದಿನದಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. **ನಮೂನೆ ಜಿಎಸ್‌ಟಿ ಐಎನ್‌ವಿ–01ರ ಪ್ರತಿಯೋಜನೆ.–** ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, **ನಮೂನೆ** ಜಿಎಸ್‌ಟಿ ಐಎನ್‌ವಿ–01ಕ್ಕಾಗಿ, ಈ ಕೆಳಗಿನ ನಮೂನೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ನಮೂನೆ ಜಿಎಸ್‌ಟಿ ಐಎನ್‌ವಿ–01
(ನಿಯಮ 48ನ್ನು ನೋಡಿ)
ಇ–ಇನ್ವೈಸ್ಸ್ ಗಾಗಿ ಸ್ವರೂಪ/ಸ್ಕೀಮಾ

ಸೂಚನೆ 1: ಕಾರ್ಡಿನಲಿಟಿ ಎಂದರೆ ಐಟಂ (ಗಳ) ವರದಿ ಮಾಡುವುದು ಕಡ್ಡಾಯ ಅಥವಾ ಐಚ್ಛಿಕವೇ ಈ ಕೆಳಗೆ ವಿವರಿಸಿರುವಂತೆ:

0..1: ಅಂದರೆ ಐಟಂ ವರದಿ ಮಾಡುವುದು ಐಚ್ಛಿಕ ಮತ್ತು ವರದಿ ಮಾಡಿದಾಗ, ಅದನ್ನು ಪುನರಾವರ್ತಿಸಲಾಗುವುದಿಲ್ಲ.
1..1: ಇದರರ್ಥ ಐಟಂ ವರದಿ ಮಾಡುವುದು ಕಡ್ಡಾಯ ಆದರೆ ಪುನರಾವರ್ತಿಸಲಾಗುವುದಿಲ್ಲ.

1..n: ಇದರರ್ಥ ಐಟಂ ವರದಿ ಮಾಡುವುದು ಕಡ್ಡಾಯವಾಗಿದೆ ಮತ್ತು ಒಂದಕ್ಕಿಂತ ಹೆಚ್ಚು ಬಾರಿ ಪುನರಾವರ್ತಿಸಬಹುದು.

0..n: ಇದರರ್ಥ ಐಟಂ ವರದಿ ಮಾಡುವುದು ಐಚ್ಛಿಕ ಆದರೆ ವರದಿ ಮಾಡಿದರೆ ಒಂದಕ್ಕಿಂತ ಹೆಚ್ಚು ಬಾರಿ ಪುನರಾವರ್ತಿಸಬಹುದು. ಉದಾಹರಣೆಗೆ, ಹಿಂದಿನ ಬೆಲೆ ಪಟ್ಟಿ ಉಲ್ಲೇಖ ಐಚ್ಛಿಕವಾಗಿರುತ್ತದೆ ಆದರೆ ಅಗತ್ಯವಿದ್ದರೆ ಹಿಂದಿನ ಹಲವು ಬೆಲೆ ಪಟ್ಟಿ ಉಲ್ಲೇಖಗಳನ್ನು ನಮೂದಿಸಬಹುದು.

ಸೂಚನೆ 2: ಕ್ಷೇತ್ರ ವಿವರಣೆಯ ಸಂಖ್ಯೆ (ಗರಿಷ್ಠ ಉದ್ದ: ಎಮ್, ಎನ್) ದಶಮಾಂಶ ಬಿಂದುವಿಗೆ ಮೊದಲು 'ಎಮ್' ಸ್ಥಳಗಳನ್ನು ಮತ್ತು ದಶಮಾಂಶ ಬಿಂದುವಿನ ನಂತರ 'ಎನ್' ಸ್ಥಳಗಳನ್ನು ಸೂಚಿಸುತ್ತದೆ. ಉದಾಹರಣೆಗೆ, ಸಂಖ್ಯೆ (ಗರಿಷ್ಠ ಉದ್ದ: 3,3) 999.999 ಸ್ವರೂಪವನ್ನು ಹೊಂದಿರುತ್ತದೆ.

ಸ್ಕೀಮ (ಆವೃತ್ತಿ 1.1)							
ಕ್ರ.ಸಂ.	ಕ್ಷೇತ್ರದ ತಾಂತ್ರಿಕ ಹೆಸರು	ಕಾರ್ಡಿನಾಲಿಟಿ (0.1/1/1/0.ಎನ್/1.ಎನ್)	ಕ್ಷೇತ್ರದ ಸಂಕ್ಷಿಪ್ತ ವಿವರ	ಕಡ್ಡಾಯವೇ ಅಥವಾ ಐಚ್ಛಿಕವೇ?	ಕ್ಷೇತ್ರದ ತಾಂತ್ರಿಕ ಲಕ್ಷಣ	ಕ್ಷೇತ್ರದ ಮೌಲ್ಯದ ಮಾದರಿ	ವಿವರಣಾತ್ಮಕ ಟಿಪ್ಪಣಿ
1	ಮೂಲ ವಿವರಗಳು	1.1		ಕಡ್ಡಾಯ			ಮೂಲ ವಿವರಗಳ ಶಿರೋನಾಮೆ
1.0	ಆವೃತ್ತಿ	1.1	ಆವೃತ್ತಿ ಸಂಖ್ಯೆ	ಕಡ್ಡಾಯ	ಸ್ಟ್ರಿಂಗ್ (ಗರಿಷ್ಠ ಉದ್ದ:6)	1.1	ಇದು ವಿ–ಬೆಲೆಪಟ್ಟಿಯ ಆವೃತ್ತಿಯ ಸ್ಕೀಮ. ಇದು ಬೆಲೆಪಟ್ಟಿಯ ಲಕ್ಷಣಗಳ ಆವೃತ್ತಿಯ ಜಾಡು ಹಿಡಿಯಲು ಬಳಸಲಾಗುತ್ತದೆ
1.1	ಐಆರ್‌ಎನ್	1.1	ಬೆಲೆಪಟ್ಟಿ ಉಲ್ಲೇಖ ಸಂಖ್ಯೆ	ಕಡ್ಡಾಯ	ಸ್ಟ್ರಿಂಗ್ (ಗರಿಷ್ಠ ಉದ್ದ:64)	ಎ5ಸಿ12ಡಿಸಿಎ80ಇ7433217...ಬಿಎ40137	ಇದು ಬೆಲೆಪಟ್ಟಿಗೆ ವಿಶಿಷ್ಟ ಉಲ್ಲೇಖ ಸಂಖ್ಯೆಯಾಗಿದೆ. **ಆದಾಗ್ಯೂ, ಪೂರೈಕೆದಾರರಿಗೆ ಈ ಕ್ಷೇತ್ರವು ಸೃಜಿಸುವುದಿಲ್ಲ.**

						50ಎಫ್20 46ಎಫ್22 9	ನೋಂದಣಿ ಕೋರಿಕೆಗೆ ಸದರಿ ಕ್ಷೇತ್ರವು ಸೃಜಿಸುವುದಿಲ್ಲ. ಬೆಲೆಪಟ್ಟಿ ನೋಂದಣಿ ಜಾಲತಾಣವು (ಐಆರ್‌ಪಿ) ಈ ಐಆರ್‌ಎನ್‌ನ್ನು ಸೃಜಿಸುವುದು ಮತ್ತು ನೋಂದಣಿ ಕೋರಿಕೆಗೆ ಸ್ಪಂದಿಸುವುದು. ಇ–ಬೆಲೆಪಟ್ಟಿಯು ಐಆರ್‌ಎನ್ ಇದ್ದಾಗ ಮಾತ್ರ ಮಾನ್ಯವಾಗುತ್ತದೆ. ಆದ್ದರಿಂದ, ಈ ಕ್ಷೇತ್ರವು ಕಡ್ಡಾಯವೆಂದು ಗುರುತಿಸಲಾಗಿದೆ.
1.2	ಪೂರೈಕೆ_ವಿಧ_ಸಂಕೇತ	1..1	ಪೂರೈಕೆ ವಿಧದ ಸಂಕೇತ	ಕಡ್ಡಾಯ	ಎಣಿಕೆಯ ಪಟ್ಟಿ	ಬಿ2ಬಿ/ಬಿ2ಸಿ/ಎಸ್‌ಇರೆಖಡ್‌ಪಿ/ಎಸ್‌ಇಝೆಡ್‌ಡಬ್ಲ್ಯೂಓಪಿ/ಇಎಕ್ಸಪಿಡಬ್ಲ್ಯೂಪಿ/ ಇಎಕ್ಸಪಿಡಬ್ಲ್ಯೂಓಪಿ/ ಡಿಇಎಕ್ಸಪಿ	ಪೂರೈಕೆ ವಿಧವನ್ನು ಗುರುತಿಸುವ ಸಂಕೇತವಾಗಿದೆ. **ಬಿ2ಬಿ:**ವ್ಯಾಪಾರಸ್ಥರಿಂದ ವ್ಯಾಪಾರಸ್ಥರಿಗೆ. **ಬಿ2ಸಿ:**ವ್ಯಾಪಾರಸ್ಥರಿಂದ ಗ್ರಾಹಕರಿಗೆ **ಎಸ್‌ಇಝೆಡ್‌ಡಬ್ಲ್ಯೂಪಿ:** ವಿಶೇಷ ಆರ್ಥಿಕ ವಲಯಗಳಿಗೆ ಪಾವತಿಯೊಂದಿಗೆ **ಎಸ್‌ಇಝೆಡ್‌ಡಬ್ಲ್ಯೂಓಪಿ:** ವಿಶೇಷ ಆರ್ಥಿಕ ವಲಯಗಳಿಗೆ ಪಾವತಿಸದೆ **ಇಎಕ್ಸಪಿಡಬ್ಲ್ಯೂಪಿ:** ಪಾವತಿಸಿದ ರಫ್ತು **ಇಎಕ್ಸಪಿಡಬ್ಲ್ಯೂಓಪಿ:** ಪಾವತಿಸದೆ ರಫ್ತು **ಡಿಇಎಕ್ಸಪಿ:** ಪರಿಭಾವಿತ ರಫ್ತು
1.3	ದಾಖಲೆ_ವಿಧ_ಸಂಕೇತ	1..1	ದಾಖಲೆ ವಿಧದ ಸಂಕೇತ	ಕಡ್ಡಾಯ	ಎಣಿಕೆಯ ಪಟ್ಟಿ	ಆಯ್‌ಎನ್‌ವಿ/ಸಿಆರ್‌ಎನ್/ಡಿಬಿಎನ್	ದಾಖಲೆಯ ವಿಧ: **ಐಎನ್‌ವಿ** ಬೆಲೆಪಟ್ಟಿಗೆ, **ಸಿಆರ್‌ಎನ್** ಜಮೆ ಚೀಟಿ, **ಡಿಬಿಎನ್** ಖರ್ಚು ಚೀಟಿ.
1.4	ದಾಖಲೆ_ಸಂಖ್ಯೆ	1..1	ದಾಖಲೆಯ ಸಂಖ್ಯೆ	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:16)	ಎಸ್‌ಎ/1/2019	ಈ ನಿಯಮವು ಸಿಜಿಎಸ್‌ಟಿ/ಎಸ್‌ಜಿಎಸ್‌ಟಿ/ಯುಟಿಜಿಎಸ್‌ಟಿಸಂಬಂಧಿಸಿತ ನಿಯಮಗಳ ಅನುಸಾರದಂತಿದೆ.
1.5	ದಾಖಲೆ_ದಿನಾಂಕ	1..1	ದಾಖಲೆ ದಿನಾಂಕ	ಕಡ್ಡಾಯ	ಸ್ಟ್ರಿಂಗ್(ಡಿಡಿ/ಎಮ್‌ಎಮ್/ವೈ ವೈ ವೈ ವೈ	21/07/2019	ಬೆಲೆಪಟ್ಟಿಯನ್ನು ನೀಡಿದ ದಿನಾಂಕ. ನಮೂನೆ "ಡಿಡಿ/ಎಮ್‌ಎಮ್/ವೈ ವೈ ವೈ ವೈ"
1.6	ಹೆಚ್ಚುವರಿ_	0..	ಹೆಚ್ಚುವರಿ ಕರೆನ್ಸಿ	ಐಚ್ಛಿಕ	ಎಣಿಕೆ ಪಟ್ಟಿ	ಯುಎಸ್‌ಡಿ, ಇಯುಆರ್	ಬೆಲೆಪಟ್ಟಿಯ

	ಕರೆನ್ಸಿ_ಸಂಕೇತ	1	ಸಂಕೇತ				ಮೊತ್ತಗಳೊಂದಿಗೆ ಹೆಚ್ಚುವರಿ ಕರೆನ್ಸಿಯನ್ನು ಸಹ ವರದಿಮಾಡಿಕೊಳ್ಳಲು ಈ ಕ್ಷೇತ್ರವು ಒದಗಿಸುವುದು. ಐಎಸ್ಓ–4217 ಮಾನದಂಡ ಪಟ್ಟಿಯಂತೆ ಅಂತಹ ಒಂದು ಹೆಚ್ಚುವರಿ ಕರೆನ್ಸಿಯನ್ನು ಬೆಲೆಪಟ್ಟಿಯಲ್ಲಿ ಬಳಸಬಹುದು ಈ ಪಟ್ಟಿಯನ್ನು ಸಮಯಕ್ಕನುಸಾರವಾಗಿ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/CUR_ENQ
1.7	ಹಿಮ್ಮುಖ_ವಿಧಿಸುವಿಕೆ	0..1	ಹಿಮ್ಮುಖ ವಿಧಿಸುವಿಕೆ	ಐಚ್ಛಿಕ	ಸ್ಟ್ರಿಂಗ್(ಉದ್ದ: 1)	ಹೌದು	ಪಾವತಿಸುವ ತೆರಿಗೆ ಹಿಮ್ಮುಖ ವಿಧಿಸುವಿಕೆಯನ್ನು ಒಳಗೊಂಡಿದೆಯೇ.
1.8	ಪೂರೈಕೆದಾರು ಹಾಗೂ_ಸ್ವೀಕರಿಸುವವರು_ಒಂದೇ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ_ ಇದ್ದಾಗಿಯೂ ಸಹ_ಏಕೀಕೃತ ತೆರಿಗೆ ಅನ್ವಯಿಸುವುದು		ಪೂರೈಕೆದಾರು ಹಾಗೂ ಸ್ವೀಕರಿಸುವವರು ಒಂದೇ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಇದ್ದಾಗಿಯೂ ಸಹ ಏಕೀಕೃತ ತೆರಿಗೆ ಅನ್ವಯಿಸುವುದು	ಐಚ್ಛಿಕ	ಸ್ಟ್ರಿಂಗ್(ಉದ್ದ: 1)	ಇಲ್ಲ	ಪೂರೈಕೆದಾರು ಹಾಗೂ ಸ್ವೀಕರಿಸುವವರು ಒಂದೇ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಇದ್ದಾಗಿಯೂ ಸಹ ಏಕೀಕೃತ ತೆರಿಗೆ ಅನ್ವಯಿಸುವ ಸನ್ನಿವೇಶಗಳನ್ನು ವರದಿ ಮಾಡುವುದು
2	**ದಾಖಲೆ_ಅವಧಿ**	**0..1**		**ಐಚ್ಛಿಕ**			**ದಾಖಲೆ ಅವಧಿಯ ಶಿರೋನಾಮೆ**
2.1	ದಾಖಲೆ_ಅವಧಿಯ_ಆರಂಭಿಕ_ದಿನಾಂಕ	1..1	ದಾಖಲೆಅವಧಿಯ ಆರಂಭಿಕ ದಿನಾಂಕ	ಕಡ್ಡಾಯ	ಸ್ಟ್ರಿಂಗ್(ಡಿಡಿ/ಎಮ್ ಎಮ್/ವೈ ವೈ ವೈ ವೈ	21/07/2019	ಇದು ದಾಖಲೆ ಅವಧಿಯ ಆರಂಭಿಕ ದಿನಾಂಕ (ಡೆಲಿವರಿ/ಬೆಲೆಪಟ್ಟಿಯ ಅವಧಿ) (ಈ ಭಾಗವನ್ನು ಆಯ್ಕೆ ಮಾಡಿಕೊಂಡಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿದೆ)
2.2	ದಾಖಲೆ_ಅವಧಿಯ	1..1	ದಾಖಲೆಅವಧಿಯ ಅಂತ್ಯ	ಕಡ್ಡಾಯ	ಸ್ಟ್ರಿಂಗ್(ಡಿಡಿ/ಎಮ್	21/07/2019	ಇದು ದಾಖಲೆ ಅವಧಿಯ ಅಂತ್ಯ ದಿನಾಂಕ

	_ ಅಂತ್ಯ_ ದಿನಾಂಕ		ದಿನಾಂಕ		ಎಮ್/ವೈ ವೈ ವೈ ವೈ		(ಡೆಲಿವರಿ/ಬೆಲೆಪಟ್ಟಿಯ ಅವಧಿ) (ಈ ಭಾಗವನ್ನು ಆಯ್ಕೆ ಮಾಡಿಕೊಂಡಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿದೆ)
3	**ಹಿಂದಿನ ದಾಖಲೆ/ ಒಪ್ಪಂದದ ಉಲ್ಲೇಖ**	**0..1**		**ಐಚ್ಛಿಕ**			**ಹಿಂದಿನ ದಾಖಲೆ/ ಒಪ್ಪಂದದ ಉಲ್ಲೇಖದ ಶಿರೋನಾಮೆ**
3.1	**ಹಿಂದಿನ ದಾಖಲೆ/ ಒಪ್ಪಂದದ ಉಲ್ಲೇಖ**	**0..n**		**ಐಚ್ಛಿಕ**			**ಹಿಂದಿನ ದಾಖಲೆ/ ಒಪ್ಪಂದದ ಉಲ್ಲೇಖದ ಉಪಶಿರೋನಾಮೆ**
3.1.1	**ಹಿಂದಿನ ದಾಖಲೆ_ಸಂಖ್ಯೆ**	1..1	**ಹಿಂದಿನ ದಾಖಲೆಸಂಖ್ಯೆ**	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:16)	ಎಸ್ಎ/1/2019	ಒಂದು ವೇಳೆ ಖರ್ಚು ಚೀಟಿ ಅಥವಾ ಜಮೆ ಚೀಟಿಯನ್ನು ನೀಡುವುದಾದರೆ ಮೂಲ ದಾಖಲೆ ಅಥವಾ ಬೆಲೆಪಟ್ಟಿಯ ಉಲ್ಲೇಖಿತ ಸಂಖ್ಯೆಯಾಗಿದೆ. ಬೆಲೆ ಪಟ್ಟಿಗೆ ಸಂಬಂಧಿಸಿದ ಜಮೆ / ಖರ್ಚು ಚೀಟಿಗಳನ್ನು ಸಹ ಉಲ್ಲೇಖಿಸಬಹುದು (ಈ ಭಾಗವನ್ನು ಆಯ್ಕೆ ಮಾಡಿಕೊಂಡಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿದೆ)
3.1.2	ಹಿಂದಿನ ದಾಖಲೆಯ_ದಿನಾಂಕ	1..1	ಹಿಂದಿನ ದಾಖಲೆಯ ದಿನಾಂಕ	ಕಡ್ಡಾಯ	ಸ್ಟ್ರಿಂಗ್(ಡಿಡಿ/ ಎಮ್ ಎಮ್/ವೈ ವೈ ವೈ ವೈ	21/07/2019	ಹಿಂದಿನ ದಾಖಲೆ / ಬೆಲೆಪಟ್ಟಿಯ ದಿನಾಂಕ (ಈ ಭಾಗವನ್ನು ಆಯ್ಕೆ ಮಾಡಿಕೊಂಡಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿದೆ)
3.1.3	ಇತರೆ_ಉಲ್ಲೇಖ	0..1	ಇತರೆ ಉಲ್ಲೇಖ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:20)	KOL01	ಈ ಕ್ಷೇತ್ರವು ಯಾವುದೇ ಹೆಚ್ಚುವರಿ ಉಲ್ಲೇಖವನ್ನು ನೀಡಲು, ಉದಾ: ನಿರ್ಧಿಷ್ಠ ಶಾಖೆ, ಅವರ ಯುಝರ್ ಐಡಿ, ಎಂಪ್ಲಾಯಿ ಐಡಿ, ಮಾರಾಟ ಕೇಂದ್ರ ಉಲ್ಲೇಖ, ಮುಂತಾದವು
3.2	**ಸ್ವೀಕೃತಿ/ಒ**	**0..**		**ಐಚ್ಛಿಕ**			**ಸ್ವೀಕೃತಿ/ಒಪ್ಪಂದ ಉಲ್ಲೇಖದ**

	ಪ್ಪಂದ ಉಲ್ಲೇಖ	n					ಉಪ ಶಿರೋನಾಮೆ
3.2.1	ಸ್ವೀಕೃತಿ_ಸಲಹೆ_ಉಲ್ಲೇಖ	0..1	ಸ್ವೀಕೃತಿ ಸಲಹೆ ಉಲ್ಲೇಖ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:20)	ಜಮೆ30	ಮುಂಗಡಕ್ಕೆ ಪರ್ಯಾಯವಾಗಿ ಬಳಕೆದಾರರು ತಮ್ಮ ಗ್ರಾಹಕರಿಗೆ ಸ್ವೀಕೃತಿ ಸಲಹೆಗಳ ಸಂಖ್ಯೆ ನೀಡಲು ಈ ಉಲ್ಲೇಖವನ್ನು ಇಡಲಾಗಿದೆ
3.2.2	ಸ್ವೀಕೃತಿ_ಸಲಹೆ_ದಿನಾಂಕ	0..1	ಸ್ವೀಕೃತಿ ಸಲಹೆ ದಿನಾಂಕ	**ಐಚ್ಛಿಕ**	ಸ್ಟ್ರಿಂಗ್(ಡಿಡಿ/ಎಮ್ ಎಮ್/ವೈ ವೈ ವೈ ವೈ	21/07/2019	ಮುಂಗಡ ಸ್ವೀಕೃತಿ ಸಲಹಾ ನೀಡಿದ ದಿನಾಂಕ
3.2.3	ಟೆಂಡರ ಅಥವಾ_ಲಾಟ್_ಉಲ್ಲೇಖ	0..1	ಟೆಂಡರ ಅಥವಾಲಾಟ್ ಉಲ್ಲೇಖ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:20)	ಟೆಂಡರ ಜನೇವರಿ 2020	ಲಾಟ ಅಥವಾ ಟೆಂಡರನ ಅಡಿಯಲ್ಲಿ ಪೂರೈಕೆ ಮಾಡಿದಲ್ಲಿ ಅಂತಹ ಲಾಟ್ ಅಥವಾ ಟೆಂಡರ್ ಸಂಖ್ಯೆ, ವಿವರಗಳನ್ನು ನಮೂದಿಸಲು ಈ ಉಲ್ಲೇಖ ಇಡಲಾಗಿದೆ.
3.2.4	ಒಪ್ಪಂದ_ಉಲ್ಲೇಖ	0..1	ಒಪ್ಪಂದದ ಉಲ್ಲೇಖ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:20)	ಸಿಓಎನ್‌ಟಿ 23072019	ನಿರ್ಧಿಷ್ಠ ಒಪ್ಪಂದದಡಿಯಲ್ಲಿ ಪೂರೈಕೆಯಾಗಿದಲ್ಲಿ, ಒಪ್ಪಂದ ಸಂಖ್ಯೆ ನಮೂದಿಸಲು ಈ ಉಲ್ಲೇಖ ಇಡಲಾಗಿದೆ.
3.2.5	ಬಾಹ್ಯ–ಉಲ್ಲೇಖ	0..1	ಬಾಹ್ಯ ಉಲ್ಲೇಖ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:20)	ಇಎಕ್ಸಟಿ23222	ಪೂರೈಕೆಯ ಯಾವುದೇ ಹೆಚ್ಚುವರಿ/ಬಾಹ್ಯ ಉಲ್ಲೇಖ ಸಂಖ್ಯೆಯನ್ನು ನಮೂದಿಸಲು ಈ ಹೆಚ್ಚುವರಿ ಕ್ಷೇತ್ರವನ್ನು ಅನುವು ಮಾಡಲಾಗಿದೆ.
3.2.6	ಯೋಜನೆ –ಉಲ್ಲೇಖ	0..1	ಯೋಜನೆ ಉಲ್ಲೇಖ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:20)	ಪಿಜೆಟಿಸಿಓ ಡಿಇ01	ಯಾವುದಾದರು ನಿರ್ಧಿಷ್ಠ ಯೋಜನೆ ಅಡಿಯಲ್ಲಿ ಪೂರೈಕೆ ಮಾಡಿದಲ್ಲಿ ಅಂತಹ ಯೋಜನೆ ಸಂಖ್ಯೆಯನ್ನು ನಮೂದಿಸಲು ಈ ಉಲ್ಲೇಖ ಇಡಲಾಗಿದೆ.
3.2.7	ಪಿಓ_ಉಲ್ಲೇಖ_ಸಂಖ್ಯೆ	0..1	ಪಿಓ ಉಲ್ಲೇಖಸಂಖ್ಯೆ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:16)	ಮಾರಾಟಗಾರ ಪಿಓ/1	ಇದು ಖರೀದಿ ಆದೇಶದ ಉಲ್ಲೇಖ ಸಂಖ್ಯೆಯಾಗಿದೆ.
3.2.8	ಪಿಓ_ಉಲ್ಲೇಖ_ದಿನಾಂಕ	0..1	ಪಿಓ ಉಲ್ಲೇಖ ದಿನಾಂಕ	**ಐಚ್ಛಿಕ**	ಸ್ಟ್ರಿಂಗ್(ಡಿಡಿ/ಎಮ್ ಎಮ್/ವೈ ವೈ ವೈ ವೈ	21/07/2019	ಇದು ಖರೀದಿ ಆದೇಶದ ದಿನಾಂಕವಾಗಿದೆ.
4.	**ಪೂರೈಕೆದಾರರ ಮಾಹಿತಿ**	**1..1**		**ಕಡ್ಡಾಯ**			**ಪೂರೈಕೆದಾರರ ಮಾಹಿತಿ ಶಿರೋನಾಮೆ**
4.1	ಪೂರೈಕೆದಾರ_ಕಾನೂನಾತ್ಮಕ_ಹೆಸರು	1..1	ಪೂರೈಕೆದಾರ ಕಾನೂನಾತ್ಮಕ ಹೆಸರು	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:100)	ಎಕ್ಸವೈಝಡ್ ಲಿಮಿಟೆಡ್	ಪ್ಯಾನ ಕಾರ್ಡನಲ್ಲಿರುವಂತೆ ಪೂರೈಕೆದಾರರ ಕಾನೂನಾತ್ಮಕ ಹೆಸರು.
4.2	ಪೂರೈಕೆದಾರ_ವ್ಯವಹಾರ_	0..1	ಪೂರೈಕೆದಾರ ವ್ಯವಹಾರದ ಹೆಸರು	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:100)	ಎಬಿಸಿ ವ್ಯಾಪಾರಸ್ಥರು	ಕಾನೂನಾತ್ಮಕ ಹೆಸರನ್ನು ಹೊರತುಪಡಿಸಿ ಪೂರ್ಯಕೆದಾರರನ್ನು

	ಹೆಸರು						ಗುರುತಿಸಬಹುದಾಂತಹ ವ್ಯವಹಾರದ ಹೆಸರು.
4.3	ಪೂರೈಕೆದಾರ_ಜಿಎಸ್ಟಿಎನ್	1..1	ಪೂರೈಕೆದಾರರ ಜಿಎಸ್ಟಿಎನ್	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:15)	29AADFV7589C1ZX	ಪೂರೈಕೆದಾರರ ಜಿಎಸ್ಟಿಎನ್.
4.4	ಪೂರೈಕೆದಾರ_ವಿಳಾಸ 1	1..1	ಪೂರೈಕೆದಾರರ ವಿಳಾಸ 1	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ್, ಎಂಜಿ ರೋಡ, ವಸಂತ ನಗರ	ಪೂರೈಕೆದಾರರ ಮೊದಲನೆಯ ವಿಳಾಸ (ಕಟ್ಟಡ, ಪ್ಲಾಟ ಸಂಖ್ಯೆ, ರಸ್ತೆ/ಬೀದಿ, ಸ್ಥಳ ಇತರೆ)
4.5	ಪೂರೈಕೆದಾರ_ವಿಳಾಸ 2	0..1	ಪೂರೈಕೆದಾರ ವಿಳಾಸ 2	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ್, ಎಂಜಿ ರೋಡ, ವಸಂತ ನಗರ	ಪೂರೈಕೆದಾರರ ಎರಡನೆಯ ವಿಳಾಸ (ಕಟ್ಟಡ, ಪ್ಲಾಟ ಸಂಖ್ಯೆ, ರಸ್ತೆ/ಬೀದಿ, ಸ್ಥಳ ಇತರೆ)
4.6	ಪೂರೈಕೆದಾರ_ಸ್ಥಳ	1..1	ಪೂರೈಕೆದಾರ_ಸ್ಥಳ	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:50)	ಬೆಂಗಳೂರು	ಪೂರೈಕೆದಾರನ ನೆಲೆ/ಸ್ಥಳ (ನಗರ/ಪಟ್ಟನ/ಹಳ್ಳಿ)
4.7	ಪೂರೈಕೆದಾರ_ರಾಜ್ಯ_ಸಂಕೇತ	1..1	ಪೂರೈಕೆದಾರರ ರಾಜ್ಯದ ಸಂಕೇತ	ಕಡ್ಡಾಯ	ಎಣಿಕೆ ಪಟ್ಟಿ	29	ಜಿಎಸ್ಟಿ ವ್ಯವಸ್ಥೆಯಲ್ಲಿರುವಂತೆ ಪೂರೈಕೆದಾರನ ರಾಜ್ಯದ ಸಂಕೇತ. ಈ ಪಟ್ಟಿಯನ್ನು ಸಮಯಕ್ಕನುಸಾರವಾಗಿ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/STATEINQ
4.8	ಪೂರೈಕೆದಾರ_ಪಿನ್‌ಕೋಡ	1..1	ಪೂರೈಕೆದಾರ ಪಿನ್‌ಕೋಡ	ಕಡ್ಡಾಯ	ಸಂಖ್ಯೆ(ಉದ್ದ: 6)	560087	ಪೂರೈಕೆದಾರರ ಸ್ಥಳದ ಪಿನ್‌ಕೋಡ.
4.9	ಪೂರೈಕೆದಾರ_ದೂರವಾನಿ	0..1	ಪೂರೈಕೆದಾರರ ದೂರವಾನಿ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:12)	9999999999	ಪೂರೈಕೆದಾರರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ.
4.10	ಪೂರೈಕೆದಾರ_ಮಿಂಚಂಚೆ	0..1	ಪೂರೈಕೆದಾರರ ಮಿಂಚಂಚೆ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:100)	supplier@abc.com	ಆರ್‌ಇಜಿಇಎಕ್ಸ್ (ರೆಗ್ಯುಲರ ಎಕ್ಸಪ್ರೆಷನ್ಸ್) ಮಾದರಿ ಪ್ರಕಾರ ಪೂರೈಕೆದಾರರ ಮಿಂಚಂಚೆ

5	**ಸ್ವೀಕೃತದಾರನ ಮಾಹಿತಿ**	**1..1**		**ಕಡ್ಡಾಯ**			**ಸ್ವೀಕೃತದಾರನ ಮಾಹಿತಿ ಶಿರೋನಾಮೆ**
5.1	**ಸ್ವೀಕೃತದಾರನ_** ಕಾನೂನಾತ್ಮಕ_ ಹೆಸರು	1..1	**ಸ್ವೀಕೃತದಾರನ** ಕಾನೂನಾತ್ಮಕ ಹೆಸರು	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:100)	ಪಿಕ್ಯೂಆರ್ ಪ್ರೈ ಲಿಮಿಟೆಡ್	ಪ್ಯಾನ ಕಾರ್ಡನಲ್ಲಿರುವಂತೆ **ಸ್ವೀಕೃತದಾರನ** ಕಾನೂನಾತ್ಮಕ ಹೆಸರು.
5.2	**ಸ್ವೀಕೃತದಾರನ_** ವ್ಯವಹಾರ_ ಹೆಸರು	0..1	**ಸ್ವೀಕೃತದಾರನ** ವ್ಯವಹಾರದ ಹೆಸರು	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:100)	ಆದರ್ಶ	**ಸ್ವೀಕೃತದಾರನ** ವ್ಯವಹಾರಿಕ ಹೆಸರು, ಲಭ್ಯವಿದ್ದಲ್ಲಿ.
5.3	**ಸ್ವೀಕೃತದಾರನ** _ಜಿಎಸ್‌ಟಿಎನ್	1..1	**ಸ್ವೀಕೃತದಾರನ** ಜಿಎಸ್‌ಟಿಎನ್	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:15)	29ABCCR1832C1ZX,URP	**ಸ್ವೀಕೃತದಾರನ** ಜಿಎಸ್‌ಟಿಎನ್, ಲಭ್ಯವಿದ್ದಲ್ಲಿ. ಯುಆರ್‌ಪಿ: ರಫ್ತು ಅಥವಾ ಅನೋಂದಾಯಿತ ವ್ಯಕ್ತಿಗೆ ಪೂರೈಕೆಯಾಗಿದ್ದರೆ.
5.4	ಪೂರೈಕೆ ಸ್ಥಳ _ರಾಜ್ಯ_ಸಂಕೇತ	1..1	ಪೂರೈಕೆ ಸ್ಥಳ (ರಾಜ್ಯದ ಸಂಕೇತ)	ಕಡ್ಡಾಯ	ಎಣಿಕೆ ಪಟ್ಟಿ	29, 96	ಜಿಎಸ್‌ಟಿ ವ್ಯವಸ್ಥೆಯಲ್ಲಿರುವಂತೆ ಪೂರೈಕೆ ಸ್ಥಳದ ಸಂಕೇತ/ರಾಜ್ಯದ ಸಂಕೇತ. ಈ ಪಟ್ಟಿಯನ್ನು ಸಮಯಕ್ಕನುಸಾರವಾಗಿ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/STATEINQ
5.5	**ಸ್ವೀಕೃತದಾರನ** _ವಿಳಾಸ 1	1..1	**ಸ್ವೀಕೃತದಾರನ** ವಿಳಾಸ 1	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ್, ಎಂಜಿ ರೋಡ, ವಸಂತ ನಗರ	**ಸ್ವೀಕೃತದಾರನ** ಮೊದಲನೆಯ ವಿಳಾಸ (ಕಟ್ಟಡ, ಪ್ಲಾಟ ಸಂಖ್ಯೆ, ರಸ್ತೆ/ಬೀದಿ, ಸ್ಥಳ ಇತರೆ)
5.6	**ಸ್ವೀಕೃತದಾರನ** _ವಿಳಾಸ 2	0..1	**ಸ್ವೀಕೃತದಾರನ** ವಿಳಾಸ 2	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ್, ಎಂಜಿ ರೋಡ, ವಸಂತ ನಗರ	**ಸ್ವೀಕೃತದಾರನ** ಎರಡನೆಯ ವಿಳಾಸ ಇದ್ದಲ್ಲಿ (ಕಟ್ಟಡ, ಪ್ಲಾಟ ಸಂಖ್ಯೆ, ರಸ್ತೆ/ಬೀದಿ, ಸ್ಥಳ ಇತರೆ)

5.7	**ಸ್ವೀಕೃತದಾರನ_ಸ್ಥಳ**	**1..1**	**ಸ್ವೀಕೃತದಾರನ ಸ್ಥಳ**	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:100)	**ಮೈಸೂರು**	**ಸ್ವೀಕೃತದಾರನ** ನೆಲೆ/ಸ್ಥಳ (ನಗರ/ಪಟ್ಟನ/ಹಳ್ಳಿ)
5.8	**ಸ್ವೀಕೃತದಾರನ – ರಾಜ್ಯ_ಸಂಕೇತ**	**1..1**	**ಸ್ವೀಕೃತದಾರನ ರಾಜ್ಯ_ಸಂಕೇತ**	ಕಡ್ಡಾಯ	ಎಣಿಕೆ ಪಟ್ಟಿ	29	**ಸ್ವೀಕೃತದಾರನ** ಸ್ಥಳದ ಸಂಕೇತ/ರಾಜ್ಯದ ಸಂಕೇತ. ಈ ಪಟ್ಟಿಯನ್ನು ಸಮಯಕ್ಕನುಸಾರವಾಗಿ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/STATE_ENQ
5.9	**ಸ್ವೀಕೃತದಾರನ _** ಪಿನ್‌ಕೋಡ	0..1	**ಸ್ವೀಕೃತದಾರನ** ಪಿನ್‌ಕೋಡ	**ಐಚ್ಛಿಕ**	ಸಂಖ್ಯೆ(ಉದ್ದ: 6)	560002	**ಸ್ವೀಕೃತದಾರನ** ಸ್ಥಳದ ಪಿನ್‌ಕೋಡ. ಒಂದು ವೇಳೆ ರಫ್ತಾಗಿದಲ್ಲಿ ಪಿನಕೋಡನ್ನು ನಮೂದಿಸುವ ಅಗತ್ಯವಿಲ್ಲ.
5.10	**ರಫ್ತು _ ದೇಶದ ಸಂಕೇತ**	**0..1**	**ರಫ್ತು ದೇಶದ ಸಂಕೇತ**	**ಐಚ್ಛಿಕ**	**ಎಣಿಕೆ ಪಟ್ಟಿ**	AN	ISO 3166-1 alpha-2/ **ಭಾರತಿಯ ಕಸ್ಟಮ್ಸ ಈಡಿಆಯ್ ವ್ಯವಸ್ಥೆ ಪ್ರಕಾರ ರಫ್ತು ದೇಶದ ಸಂಕೇತ.** ಈ ಪಟ್ಟಿಯನ್ನು ಕಾಲಕಾಲಕ್ಕೆ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/COUNTRY_ENQ
5.11	ಸ್ವೀಕೃತದಾರನ _ ದೂರವಾಣಿ	0..1	ಸ್ವೀಕೃತದಾರನ ದೂರವಾಣಿ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:12)	080223233	ಸ್ವೀಕೃತದಾರನ ಸಂಪರ್ಕಿಸುವ ದೂರವಾಣಿ ಸಂಖ್ಯೆ.
5.12	ಸ್ವೀಕೃತದಾರನ _ ಮಿಂಚಂಚೆ	0..1	ಸ್ವೀಕೃತದಾರನ ಮಿಂಚಂಚೆ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:100)	billing@abc.com	ಆರ್‌ಇಜಿಇಎಕ್ಸ (ರೆಗ್ಯುಲರ ಎಕ್ಸಪ್ರೆಷನ್ಸ) ಮಾದರಿ ಪ್ರಕಾರ ಸ್ವೀಕೃತದಾರನ ಮಿಂಚಂಚೆ
6	**ಪೇಯೀಯ ಮಾಹಿತಿ**	**0..1**		**ಐಚ್ಛಿಕ**			**ಪೇಯೀ ಮಾಹಿತಿ ಶಿರೋನಾಮೆ**
6.1	ಪೇಯೀ _ಹೆಸರು	0..1	ಪೇಯೀ ಹೆಸರು	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:100)	ರಮೇಶ ಕೆ	ಪೇಯೀ ಹೆಸರು
6.2	ಪೇಯೀ _ಬ್ಯಾಂಕ ಖಾತೆ ಸಂಖ್ಯೆ	0..1	ಪೇಯೀ ಬ್ಯಾಂಕ ಖಾತೆ ಸಂಖ್ಯೆ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:18)	158963587456	ಪೇಯೀ ಬ್ಯಾಂಕ ಖಾತೆ ಸಂಖ್ಯೆ
6.3	ಪಾವತಿಸುವ_ ವಿಧಾನ	0..1	ಪಾವತಿಸುವ ವಿಧಾನ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:18)	ನೇರ ವರ್ಗಾವಣೆ	ಪಾವತಿ ವಿಧಾನ : ನಗದು/ಜಮೆ/ನೇರ ವರ್ಗಾವಣೆ, ಇತ್ಯಾದಿ
6.4	ಬ್ಯಾಂಕ	0..	ಬ್ಯಾಂಕ ಶಾಖೆ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ	SBI9876	ಪೇಯೀ ಬ್ಯಾಂಕ ಶಾಖೆಯ

	ಶಾಖೆ _ಸಂಕೇತ	1	ಸಂಕೇತ		ಉದ್ದ:11)	543	ಭಾರತೀಯ ಆರ್ಥಿಕ ವ್ಯವಸ್ಥೆ ಸಂಕೇತ (IFSC).
6.5	ಪಾವತಿಸುವ_ ನಿಯಮಗಳು	0..1	ಪಾವತಿಸುವ_ ನಿಯಮಗಳು	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:12)	ಪಠ್ಯ	ಸ್ವೀಕೃತಿದಾರನೊಂದಿಗೆ ಯಾವುದಾದರು ಪಾವತಿಯ ನಿಭಂದನೆಗಳು ಇದ್ದಲ್ಲಿ ಅಂತಹ ಮಾಹಿತಿ ನೀಡುವುದು.
6.6	ಪಾವತಿಸುವ_ ಸೂಚನೆಗಳು	0..1	ಪಾವತಿಸುವ_ ಸೂಚನೆಗಳು	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:100)	ಪಠ್ಯ	ಪಾವತಿಯ ಸೂಚನೆ ಯಾವುದಾದರು ಇದ್ದಲ್ಲಿ ಅಂತಹ ಮಾಹಿತಿ ನೀಡುವುದು.
6.7	ಜಮೆ – ವರ್ಗಾವಣೆಯ_ ನಿಯಮಗಳು	0..1	ಜಮೆ – ವರ್ಗಾವಣೆಯ_ ನಿಯಮಗಳು	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:12)	ಪಠ್ಯ	ಜಮೆ ವರ್ಗಾವಣೆಯ ಪಾವತಿಗೆ ಸಂಬಂಧಿಸಿದಂತೆ ನಿಭಂದನೆಗಳನ್ನು ನಿರ್ಧಿಷ್ಠಿಸುವುದು.
6.8	ನೇರ_ಡೆಬೀಟ – ನಿಮಯಗಳು	0..1	ನೇರ_ಡೆಬೀಟ –ನಿಮಯಗಳು	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:100)	ಪಠ್ಯ	ನೇರ ಖರ್ಚಿನ ನಿಭಂದನೆಗಳಿದ್ದಲ್ಲಿ ನಿರ್ಧಿಷ್ಠಿಸುವುದು.
6.9	ಜಮೆ_ ದಿನಗಳು _ _	0..1	ಜಮೆ ದಿನಗಳು	ಐಚ್ಛಿಕ	ಸಂಖ್ಯೆ (ಗರಿಷ್ಠ ಉದ್ದ:4)	30	ಪಾವತಿ ಬಾಕಿ ಇರುವ ದಿನಗಳ ಸಂಖ್ಯೆ.
7.	**ವಿತರಣೆಯ ಮಾಹಿತಿ**	**0..1**		**ಐಚ್ಛಿಕ**			**ವಿತರಣೆಯ ಮಾಹಿತಿ ಶಿರೋನಾಮೆ**
7.1	**ಶಿಪ್_ ಟು_ ವಿವರಗಳು**	**0..1**	**ಶಿಪ್ ಟು ವಿವರಗಳು**	**ಐಚ್ಛಿಕ**		A 1.0 ನೋಡಿ	**ಪೂರೈಕೆ ವಿತರಣೆ ಸ್ಥಳದ ವಿವರಗಳು**
7.2	**ರವಾನಿಸಿರುವ_ ವಿವರಗಳು**	**0..1**	**ರವಾನಿಸಿರುವ ವಿವರಗಳು**	**ಐಚ್ಛಿಕ**		A 1.0 ನೋಡಿ	**ರವಾನಿಸಬೇಕಾದ ಪೂರೈಕೆಯ ಸ್ಥಳದ ವಿವರಗಳು**
8	**ಬೆಲೆಪಟ್ಟಿಯ_ಐಟಮ್ _ವಿವರಗಳು**	**1..n**	**ಬೆಲೆಪಟ್ಟಿಯ ಐಟಮ್ ವಿವರಗಳು**	**ಕಡ್ಡಾಯ**			**ಬೆಲೆಪಟ್ಟಿಯ ಐಟಮ್ ವಿವರಗಳು ಶಿರೋನಾಮೆ**
8.1	**ಐಟಮ್_ ಪಟ್ಟಿ**	**1..n**	**ಐಟಮ್ ಪಟ್ಟಿ**	**ಕಡ್ಡಾಯ**		A 1.2 ನೋಡಿ	**ಬೆಲೆಪಟ್ಟಿಗೆ ಒಳಪಟ್ಟ ಸರಕು ಮತ್ತು ಸೇವೆಗಳ ಮಾಹಿತಿಯನ್ನು ನೀಡುವುದು.**
9.	**ಒಟ್ಟು_ ದಾಖಲೆ**	**1..1**	**ಒಟ್ಟು ದಾಖಲೆ**	**ಕಡ್ಡಾಯ**			**ಒಟ್ಟು ದಾಖಲೆ ಶಿರೋನಾಮೆ**
9.1	**ಒಟ್ಟು_ ದಾಖಲೆಯ _ವಿವರಗಳು**	**1..1**	**ಒಟ್ಟು ದಾಖಲೆಯ ವಿವರಗಳು**	**ಕಡ್ಡಾಯ**		A 1.3 ನೋಡಿ	**ತೆರಿಗೆಯನ್ನು ಒಳಗೊಂಡ ದಾಖಲೆಯ ಒಟ್ಟು ವಿವರಗಳು**
10.	**ಇತರೆ ಮಾಹಿತಿ**	**0..1**		**ಐಚ್ಛಿಕ**			**ಇತರೆ ಮಾಹಿತಿಯ ಶೀರ್ಷಿಕೆ**
10.1	ತೆರಿಗೆ	1..	ತೆರಿಗೆ ಸ್ಕೀಮ್	**ಕಡ್ಡಾಯ**	ಸ್ಟ್ರಿಂಗ್(ಗರಿಷ್ಠ	ಜಿಎಸ್‌ಟಿ	ತೆರಿಗೆ/ಭಾಧ್ಯತೆವಿದ್ದಲ್ಲಿ

	ಸ್ಕೀಮ್	1			ಉದ್ದ:10)		ನಿರ್ಧಿಷ್ಟಸುವುದು– ಜಿಎಸ್‌ಟಿ (ಕ್ಷೇತ್ರವನ್ನು ಆಯ್ಕೆ ಮಾಡಿದಲ್ಲಿ ಕಡ್ಡಾಯ)
10.2	ಷರಾ	0..1	ಷರಾ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:100)	ಹೊಸ ಬ್ಯಾಚನ ಐಟಮಗಳನ್ನು ಸಲ್ಲಿಸಿದೆ.	ಪೂರ್ಣ ಬೆಲೆಪಟ್ಟಿಗೆ ಸಂಬಂಧಿಸಿದಂತೆ ಅವರ್ಗಿಕರಿಸಿದ ಮಾಹಿತಿಯ ಪಠ್ಯದ ಟಿಪ್ಪಣಿ ಉದಾಹರಣೆ ಬೆಲೆಪಟ್ಟಿ ತಿದ್ದುಪಡಿ ಮುಂತಾದ ಸಂದರ್ಭದಲ್ಲಿ ತಿದ್ದುಪಡಿಗೆ ಕಾರಣ ಅಥವಾ ಅಸೈನಮೆಂಟ ಟಿಪ್ಪಣಿ
10.3	ಪೋರ್ಟ_ಕೋಡ	0..1	ಪೋರ್ಟ ಕೋಡ	**ಐಚ್ಛಿಕ**	ಎಣಿಕೆ ಪಟ್ಟಿ	ಅಲ್ಫಾ ನ್ಯೂಮರಿಕ (ಅಕ್ಷರಾಂಕೀಯ)	ರಫ್ತು/ಎಸ್‌ಇಝಡ್‌ಗೆ ಪೂರೈಕೆ ಮಾಡಿದಲ್ಲಿ ಭಾರತೀಯ ಸುಂಕ ಈಡಿಆಯ್ ಸಿಸ್ಟಮ್ (ICES) ನಲ್ಲಿ ಇರುವಂತೆ ಪೋರ್ಟ ಕೋಡ ಸೂಚಿಸುವುದು. ಇದು ಅನ್ವಯಿಸಿದ್ದಲ್ಲಿ ಮತ್ತು ವಿ –ಬೆಲೆಪಟ್ಟಿ ಸೃಜಿಸುವ ಸಂದರ್ಭದಲ್ಲಿ ಲಭ್ಯವಿದ್ದು. ಇಡಿಆಯ್ ಪೋರ್ಟ ಸಂಕೇತ: https://www.icegate.gov.in/Webapp1/LOCATION_ENQ ನಾನ್–ಇಡಿಆಯ್ ಪೋರ್ಟ ಸಂಕೇತ: https://www.icegate.gov.in/Webapp1/nonlocation_detail.jsp
10.4	ಶಿಪ್ಪಿಂಗ್_ಬಿಲ್_ಸಂಖ್ಯೆ	0..1	ಶಿಪ್ಪಿಂಗ್‌ಬಿಲ್ ಸಂಖ್ಯೆ	**ಐಚ್ಛಿಕ**	ಸ್ಟ್ರಿಂಗ್(ಗರಿಷ್ಠ ಉದ್ದ:20)	ಅಲ್ಫಾ ನ್ಯೂಮರಿಕ (ಅಕ್ಷರಾಂಕೀಯ)	ರಫ್ತು/ಎಸ್‌ಇಝಡ್‌ಗೆ ಪೂರೈಕೆ ಮಾಡಿದಲ್ಲಿ ಭಾರತೀಯ ಸುಂಕ ಈಡಿಆಯ್ ಸಿಸ್ಟಮ್ (ICES) ನಲ್ಲಿ ಇರುವಂತೆ ಶಿಪ್ಪಿಂಗ್ ಬಿಲ್ ಸೂಚಿಸುವುದು. ಇದು ಅನ್ವಯಿಸಿದ್ದಲ್ಲಿ ಮತ್ತು ವಿ –ಬೆಲೆಪಟ್ಟಿ ಸೃಜಿಸುವ ಸಂದರ್ಭದಲ್ಲಿ ಲಭ್ಯವಿದ್ದು
10.5	ಶಿಪ್ಪಿಂಗ್_ಬಿಲ್_ದಿನಾಂಕ	0..1	ಶಿಪ್ಪಿಂಗ್‌ಬಿಲ್ ದಿನಾಂಕ	**ಐಚ್ಛಿಕ**	ಸ್ಟ್ರಿಂಗ್(ಡಿಡಿ/ಎಮ್ ಎಮ್/ವೈ ವೈ ವೈ ವೈ	03/12/2020	ಭಾರತೀಯ ಸುಂಕ ಈಡಿಆಯ್ ಸಿಸ್ಟಮ್ (ICES) ನಲ್ಲಿ ಇರುವಂತೆ ಶಿಪ್ಪಿಂಗ್ ಬಿಲ್ ದಿನಾಂಕ

							ಸೂಚಿಸುವುದು.
10.6	**ರಫ್ತು_ತೆರಿಗೆಯ_ಮೊತ್ತ**	**0..1**	**ರಫ್ತು ತೆರಿಗೆಯಮೊತ್ತ**	**ಐಚ್ಛಿಕ**	**ಸಂಖ್ಯೆ (ಗರಿಷ್ಠ ಉದ್ದ:12,2)**	**1200000.50**	**ರಫ್ತು ತೆರಿಗೆಯ ಮೊತ್ತ ಭಾರತಿಯ ರೂಪಾಯಿಗಳಲ್ಲಿ(ಒಂದು ವೇಳೆ ಬೆಲೆ ಪಟ್ಟಿ ರಫ್ತಿಗೆ ಆದರೆ) ಯಾವುದಾದರೂ ಇದ್ದಲ್ಲಿ ಅನ್ವಯಿಸಿದಲ್ಲಿ)**
10.7	**ಪೂರೈಕೆದಾರರು_ಮರುಪಾವತಿ_ಕೋರಬಹುದು**	**0..1**	**ಪೂರೈಕೆದಾರರುವ ಮರುಪಾವತಿ ಕೋರಬಹುದು**	**ಐಚ್ಛಿಕ**	ಸ್ಟ್ರಿಂಗ್(ಉದ್ದ: 1)	**ಹೌ/ಇ**	**ಪರಿಭಾವಿತ ರಫ್ತು ಪೂರೈಕೆವಿದ್ದಲ್ಲಿ, ಈ ಕ್ಷೇತ್ರವು ಪೂರೈಕೆದಾರನು ಮರುಪಾವತಿ ಕೋರಬಹುದೇ ಇಲ್ಲವೇ ಎಂಬ ಐಚ್ಛಿಕ ವ್ಯಕ್ತಪಡಿಸಲು.**
10.8	ವಿ–ವಾಣಿಜ್ಯ_ಜಿಎಸ್‌ಟಿಆಯ್‌ಎನ್	0..1	ವಿ–ವಾಣಿಜ್ಯ ನಿರ್ವಾಹಕನ ಜಿಎಸ್‌ಟಿಆಯ್‌ಎನ್	ಐಚ್ಛಿಕ	ಸ್ಟ್ರಿಂಗ್(ಉದ್ದ: 15)	29ABCCR1832C1ZX	ವಿ–ವಾಣಿಜ್ಯ ನಿರ್ವಾಹಕನಿಂದ ಪೂರೈಕೆ ಮಾಡಿದ್ದಲ್ಲಿ ಅವರ ಜಿಎಸ್‌ಟಿಆಯ್‌ಎನ್
11	**ಹೆಚ್ಚುವರಿ_ಸಂಬಂಧಿಸಿದ_ದಾಖಲೆ**	**0..n**	**ಹೆಚ್ಚುವರಿ ಸಂಬಂಧಿಸಿದ ದಾಖಲೆಯ**	**ಐಚ್ಛಿಕ**			**ಹೆಚ್ಚುವರಿ ಸಂಬಂಧಿಸಿದ ದಾಖಲೆಯ ಶೀರ್ಷಿಕೆ**
11.1	**ಹೆಚ್ಚುವರಿ_ಸಂಬಂಧಿಸಿದ_ದಾಖಲೆಯ_ಯುಆರ್‌ಎಲ್**	**0..1**	**ಹೆಚ್ಚುವರಿ ಸಂಬಂಧಿಸಿದ ದಾಖಲೆಯ ಯುಆರ್‌ಎಲ್**	**ಐಚ್ಛಿಕ**	ಸ್ಟ್ರಿಂಗ್(ಉದ್ದ: 100)	https://www.xyz.com/abc	**ಹೆಚ್ಚುವರಿ ಸಂಬಂಧಿಸಿದ ದಾಖಲೆಯ ಇದ್ದಲ್ಲಿ, ಉಲ್ಲೇಖದ ಯುಆರ್‌ಎಲ್ ನಮೂದಿಸುವುದು**
11.2	**ಹೆಚ್ಚುವರಿ_ಸಂಬಂಧಿಸಿದ_ದಾಖಲೆಯ_ಬೇಸ 64**	**0..1**	**ಹೆಚ್ಚುವರಿಸಂಬಂಧಿಸಿದ ದಾಖಲೆಯ ಬೇಸ 64**	**ಐಚ್ಛಿಕ**	ಸ್ಟ್ರಿಂಗ್(ಉದ್ದ: 1000)	**ಬೇಸ 64 ಎನ್‌ಕೋಡೆಡ್ ದಾಖಲೆ**	**ಪಿಡಿಎಫ್/ಮೈಕ್ರೋಸಾಫ್ಟ ವರ್ಡ ಬೇಸ 64 ಎನ್‌ಕೋಡೆಡ್ ವಿನ್ಯಾಸದಲ್ಲಿ ಯಾವುದಾದರೂ ಹೆಚ್ಚುವರಿ ದಾಖಲೆಗಳನ್ನು ಸೇರ್ಪಡಿಸಲು**
11.3	ಇತರೆ_ಮಾಹಿತಿ	0..1	ಇತರೆ ಮಾಹಿತಿ	ಐಚ್ಛಿಕ	ಸ್ಟ್ರಿಂಗ್(ಉದ್ದ: 1000)	ಷರಾ, ಪಠ್ಯ	ಪೂರೈಕೆದಾರನ–ಸ್ವೀಕೃತದಾರನಿಗೆ ಸಂಬಂಧಿಸಿದ ಯಾವುದಾದರು ಹೆಚ್ಚುವರಿ ಮಾಹಿತಿ, ಹೆಸರು, ಸಂಖ್ಯೆ, ದತ್ತಾಂಶ ಮುಂತಾದವುಗಳು. ಉದಾಹರಣೆ, ಸಿ ಆಯ್ ಎನ್, ವ್ಯಾಪಾರ ಸಂಬಂಧಿಸಿದ ಮಾಹಿತಿ, ಡ್ರಗ್ ಸರಹದ್ದು , ನೋಂದಣಿ ಸಂಖ್ಯೆ, ಎಫ್ ಓ ಬಿ/ಸಿ ಆಯ್ ಎಫ್ ಇತ್ಯಾದಿ
12	**ಈ–ವೇ ಬಿಲ್_ವಿವರಗಳು**	**0..1**	**ಈ–ವೇ ಬಿಲ್ ವಿವರಗಳು**	**ಐಚ್ಛಿಕ**			**ಈ–ವೇ ಬಿಲ್ ವಿವರಗಳ ಶೀರ್ಷಿಕೆ**

12.1	ಸರಕು ಸಾಗಣೆಕೆದಾರರ_ಐಡಿ	0..1	ಸರಕು ಸಾಗಣೆಕೆದಾರರಐಡಿ	ಐಚ್ಛಿಕ	ಸ್ಟ್ರಿಂಗ್(ಉದ್ದ: 15)	29ABCCR1832C1ZX	ಸರಕು ಸಾಗಣೆಕೆದಾರರ ನೋಂದಣಿ /ದಾಖಲಾತಿ ಸಂಖ್ಯೆ (ಈ–ವೇ ಬಿಲ್‌ನ ಭಾಗ–ಎ ಸೃಜಿಸಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)
12.2	**ಟ್ರಾನಸ್_ಮೋಡ್**	**0..1**	**ಟ್ರಾನಸ್‌ಮೋಡ್**	ಐಚ್ಛಿಕ	ಎಣಿಕೆ ಪಟ್ಟಿ	**1/2/3/4**	**ಈ– ವೇ ಬಿಲ್ನ ಪೋರ್ಟಲ್‌ನಲ್ಲಿ ಸಾಗಣೆಕೆಯ ವಿಧಾನದ ಲಭ್ಯತೆಯ ಮೇರೆಗೆ ಆಯ್ಕೆಗಳನ್ನು ಕೊಡುವುದು** **1. ರಸ್ತೆಯ ಮೂಲಕ:** **2. ರೈಲಿನ ಮೂಲಕ:** **3. ವಿಮಾನದ ಮೂಲಕ:** **4. ಹಡಗಿನ ಮೂಲಕ** **(ಈ–ವೇ ಬಿಲ್‌ನ ಭಾಗ–ಬಿ ಸೃಜಿಸಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
12.3	**ಟ್ರಾನಸ್_ಡಿಸ್ಟೆನ್ಸ್**	**0..1**	**ಟ್ರಾನಸ್‌ಡಿಸ್ಟೆನ್ಸ್**	**ಕಡ್ಡಾಯ**	**ಸಂಖ್ಯೆ (ಗರಿಷ್ಠ ಉದ್ದ:4)**	**200**	**ಸಾಗಾಣಿಕೆಯ ದೂರ (ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
12.4	**ಸರಕು ಸಾಗಣೆಕೆದಾರರ_ಹೆಸರು**	**0..1**	**ಸರಕು ಸಾಗಣೆಕೆದಾರರ ಹೆಸರು**	ಐಚ್ಛಿಕ	ಸ್ಟ್ರಿಂಗ್(ಉದ್ದ: 100)	**ಸ್ಫೂರ್ತಿ ಟ್ರಾನ್ಸಪೋರ್ಟರ್ಸ್**	**ಸರಕು ಸಾಗಾಣಿಕೆದಾರರ ಹೆಸರು**
12.5	**ಟ್ರಾನಸ್_ಡಾಕ್_ನಂ**	**0..1**	**ಟ್ರಾನಸ್‌ಡಾಕ್ ನಂ**	ಐಚ್ಛಿಕ	ಸ್ಟ್ರಿಂಗ್(ಉದ್ದ: 15)	As/34/746	**ಸರಕು ಸಾಗಾಣಿಕೆಯ ದಾಖಲಾತಿ ಸಂಖ್ಯೆ (ಸರಕು ಸಾಗಾಣಿಕೆಯ ವಿಧಾನವು ರೈಲು ಅಥವಾ ವಿಮಾನ ಅಥವಾ ಹಡಗು ಆಗಿದ್ದಲ್ಲಿ ಈ ಕ್ಷೇತ್ರವು ಕಡ್ಡಾಯ)**
12.6	**ಟ್ರಾನಸ್_ಡಾಕ್_ದಿನಾಂಕ**	**0..1**	**ಟ್ರಾನಸ್‌ಡಾಕ್ ದಿನಾಂಕ**	ಐಚ್ಛಿಕ	ಸ್ಟ್ರಿಂಗ್(ಡಿಡಿ/ಎಮ್ ಎಮ್/ವೈ ವೈ ವೈ ವೈ	**21/07/2019**	**ಸರಕು ಸಾಗಾಣಿಕೆಯ ದಾಖಲಾತಿ ದಿನಾಂಕ (ಸರಕು ಸಾಗಾಣಿಕೆಯ ವಿಧಾನವು ರೈಲು ಅಥವಾ ವಿಮಾನ ಅಥವಾ ಹಡಗು ಆಗಿದ್ದಲ್ಲಿ ಈ ಕ್ಷೇತ್ರವು ಕಡ್ಡಾಯ)**
12.7	**ವಾಹನ_ನಂ**	**0..1**	**ವಾಹನ ನಂ**	ಐಚ್ಛಿಕ	ಸ್ಟ್ರಿಂಗ್(ಡಿಡಿ/ಎಮ್ ಎಮ್/ವೈ ವೈ ವೈ ವೈ	KA12K1234 OR KA123456	**ವಾಹನ ನೋಂದಣಿ ಸಂಖ್ಯೆ (ಸರಕು ಸಾಗಾಣಿಕೆಯ ವಿಧಾನವು ರಸ್ತೆ ಆಗಿದ್ದಲ್ಲಿ ಈ ಕ್ಷೇತ್ರವು ಕಡ್ಡಾಯ)**
12.8	ವಾಹನ_ವಿಧ	0..1	ವಾಹನ ವಿಧ	ಐಚ್ಛಿಕ	ಎಣಿಕೆ ಪಟ್ಟಿ	O/R	ವಾಹನದ ಮಾದರಿ ಸೂಚಿಸಲು: O-ಹೆಚ್ಚು ಆಕೃತಿಯ ಕಾರ್ಗೊ R- ಸಾಮಾನ್ಯ (ಈ–ವೇ ಬಿಲ್‌ನ ಭಾಗ–ಬಿ ಸೃಜಿಸಿದಲ್ಲಿ ಈ ಕ್ಷೇತ್ರವು

							ಕಡ್ಡಾಯವಾಗಿರುತ್ತದೆ.)
ಎ1.0	ಶಿಪ್‌ಟು_ವಿವರ	0..1		ಕಡ್ಡಾಯ			**ಅನುಬಂಧ ಎ.1.0 ಶಿರೋನಾಮ: ಶಿಪ್–ಟು ವಿವರಗಳು**
ಕ್ರ.ಸಂ	**ನಿಯತಾಂಕದ ಹೆಸರು**	**ಕಾಡಿನಾಲಿಟಿ**	**ವಿವರಣೆ**	ಐಚ್ಛಿಕ ಅಥವಾ **ಕಡ್ಡಾಯ** /	ಕ್ಷೇತ್ರ ನೀರ್ಧಿಷ್ಟಣೆಗಳು	**ಮಾದರಿ ಮೌಲ್ಯ**	**ವಿವರಣಾತ್ಮಕ ಸೂಚನೆಗಳು**
ಎ.1.0.1	**ಶಿಪ್‌ಟು_ಕಾನೂನಾತ್ಮಕ ಹೆಸರು**	**1..1**	**ಶಿಪ್‌ಟು ಕಾನೂನಾತ್ಮಕ ಹೆಸರು**	**ಕಡ್ಡಾಯ**	ಸ್ಟ್ರಿಂಗ್(ಉದ್ದ: 100)	**ಎಬಿಸಿ–1 ಲಿಮಿಟೆಡ್**	**ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ಕಾನೂನಾತ್ಮಕ ಹೆಸರು (ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ.1.0.2	**ಶಿಪ್‌ಟು_ವ್ಯವಹಾರಿಕ ಹೆಸರು**	**0..1**	**ಶಿಪ್‌ಟುವ್ಯವಹಾರಿಕ ಹೆಸರು**	ಐಚ್ಛಿಕ	ಸ್ಟ್ರಿಂಗ್(ಉದ್ದ: 100)	**ಎಕ್ಸವಾಯ್ ಝಡ್–1**	**ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ವ್ಯವಹಾರಿಕ ಹೆಸರು**
ಎ.1.0.3	**ಶಿಪ್‌ಟು_ಶಿಪ್‌ಟು_ಜಿಎಸ್ಟಿಎನ್**	**0..1**	**ಶಿಪ್‌ಟುಶಿಪ್‌ಟು ಜಿಎಸ್ಟಿಎನ್**	ಐಚ್ಛಿಕ	ಸ್ಟ್ರಿಂಗ್(ಉದ್ದ: 15)	36ABCCR1832C1ZX	**ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ಜಿ ಎಸ್ ಟಿ ಆಯ್ ಎನ್**
ಎ.1.0.4	**ಶಿಪ್‌ಟು_ವಿಳಾಸ1**	**1..1**	**ಶಿಪ್‌ಟುವಿಳಾಸ1**	**ಕಡ್ಡಾಯ**	ಸ್ಟ್ರಿಂಗ್(ಉದ್ದ: 100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ್, ಎಂಜಿ ರೋಡ, ಶ್ರೀನಿವಾಸ ನಗರ	ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ಮೊದಲನೆಯ ವಿಳಾಸ **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ.1.0.5	**ಶಿಪ್‌ಟು_ವಿಳಾಸ2**	**0..1**	**ಶಿಪ್‌ಟು ವಿಳಾಸ2**	ಐಚ್ಛಿಕ	ಸ್ಟ್ರಿಂಗ್(ಉದ್ದ: 100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ್, ಎಂಜಿ ರೋಡ, ಶ್ರೀನಿವಾಸ ನಗರ	ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ಎರಡನೆಯ ವಿಳಾಸವಿದ್ದಲ್ಲಿ
ಎ.1.0.6	**ಶಿಪ್‌ಟು_ಸ್ಥಳ**	**1..1**	**ಶಿಪ್‌ಟುಸ್ಥಳ**	**ಕಡ್ಡಾಯ**	ಸ್ಟ್ರಿಂಗ್(ಉದ್ದ: 100)	**ಬೆಂಗಳೂರು**	ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ಸ್ಥಳ (ನಗರ/ಪಟ್ಟಣ/ಹಳ್ಳಿ) **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು**

							ಕಡ್ಡಾಯವಾಗಿರುತ್ತದೆ.)
ಎ.1.0.7	**ಶಿಪ್‌ಟು_ಪಿನ್ ಕೋಡ್**	**1..1**	**ಶಿಪ್‌ಟುಪಿನ್ ಕೋಡ್**	**ಕಡ್ಡಾಯ**	ಸಂಖ್ಯೆ(ಉದ್ದ: 6)	**560001**	ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ಸ್ಥಳದ ಪಿನಕೋಡ **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ.1.0.8	**ಶಿಪ್‌ಟು_ರಾಜ್ಯದ ಸಂಕೇತ**	**1..1**	**ಶಿಪ್‌ಟುರಾಜ್ಯದ ಸಂಕೇತ**	**ಕಡ್ಡಾಯ**	ಎಣಿಕೆ ಪಟ್ಟಿ	**29**	ಪೂರೈಕೆ ರವಾನಿಸಬೇಕಾದ ಸ್ವೀಕೃತಿದಾರನ ಸಂಕೇತ/ರಾಜ್ಯದ ಸಂಕೇತ ಜಿಎಸ್‌ಟಿ ವ್ಯವಸ್ಥೆಯಲ್ಲಿರುವಂತೆ ಪೂರೈಕೆ ಸ್ಥಳದ ಸಂಕೇತ/ರಾಜ್ಯದ ಸಂಕೇತ. ಈ ಪಟ್ಟಿಯನ್ನು ಸಮಯಕ್ಕನುಸಾರವಾಗಿ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/STATE_ENQ **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ1.1	**ವಿತರಣೆಯ ವಿವರಗಳು**	**0..1**		ಐಚ್ಛಿಕ			**ಅನುಬಂಧ ಎ 1.1: ವಿತರಣೆಯ ವಿವರಗಳ ಶಿರೋನಾಮೆ**
ಕ್ರ.ಸಂ.	**ನಿಯತಾಂಕದ ಹೆಸರು**	**ಕಾಡಿನಾಲಿಟಿ**	**ವಿವರಣೆ**	ಐಚ್ಛಿಕ ಅಥವಾ **ಕಡ್ಡಾಯ** /	ಕ್ಷೇತ್ರ ನಿರ್ಧಿಷ್ಟಣೆಗಳು	**ಮಾದರಿ ಮೌಲ್ಯ**	**ವಿವರಣಾತ್ಮಕ ಸೂಚನೆಗಳು**
ಎ.1.1.1	**ರವಾನಿಸಿರುವವರ_ಹೆಸರು**	**1..1**	**ರವಾನಿಸಿರುವವರ ಹೆಸರು**	**ಕಡ್ಡಾಯ**	ಸ್ಟ್ರಿಂಗ್(ಉದ್ದ: 100)	**ಎಕ್ಸವಾಯ್ ಝಡ್–2**	**ಸರಕುಗಳನ್ನು ರವಾನಿಸಲಾದ ಘಟಕದ ಹೆಸರು** **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ.1.1.2	**ರವಾನಿಸಿರುವವರ_ವಿಳಾಸ–1**	**1..1**	**ರವಾನಿಸಿರುವವರ ವಿಳಾಸ 1**	**ಕಡ್ಡಾಯ**	ಸ್ಟ್ರಿಂಗ್(ಉದ್ದ: 100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ,	**ಸರಕುಗಳನ್ನು ರವಾನಿಸಲಾದ ಘಟಕದ ಮೊದಲನೆಯ ವಿಳಾಸ** **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು**

						ಎಂಜಿ ರೋಡ, ವಸಂತ ನಗರ	**ಕಡ್ಡಾಯವಾಗಿರುತ್ತದೆ.)**
ಎ.1.1.3	**ರವಾನಿಸಿರುವವರ_ವಿಳಾಸ–2**	**0..1**	**ರವಾನಿಸಿರುವವರ ವಿಳಾಸ 2**	ಐಚ್ಛಿಕ	ಸ್ಟ್ರಿಂಗ್(ಉದ್ದ: 100)	#1-23-120, ಫ್ಲಾಟನಂ.3, ನಳಂದ ಅಪಾರ್ಟಮೆಂಟ್ಸ್, ಎಂಜಿ ರೋಡ, ವಸಂತ ನಗರ	**ಸರಕುಗಳನ್ನು ರವಾನಿಸಲಾದ ಘಟಕದ ಎರಡನೆಯ ವಿಳಾಸ**
ಎ.1.1.4	**ರವಾನಿಸಿರುವವರ _ ಸ್ಥಳ**	**1..1**	**ರವಾನಿಸಿರುವವರ ಸ್ಥಳ**	**ಕಡ್ಡಾಯ**	ಸ್ಟ್ರಿಂಗ್(ಉದ್ದ: 100)	**ಬೆಂಗಳೂರು**	ಪೂರೈಸುವವರ ಸ್ಥಳ (ನಗರ/ ಪಟ್ಟಣ/ಹಳ್ಳಿ) **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ.1.1.5	**ರವಾನಿಸಿರುವವರ –ರಾಜ್ಯ ಸಂಕೇತ**	**1..1**	**ರವಾನಿಸಿರುವವರ ರಾಜ್ಯ ಸಂಕೇತ**	**ಕಡ್ಡಾಯ**	**ಎಣಿಕೆ ಪಟ್ಟಿ**	**29**	ರವಾನಿಸಿರುವವರ ಸಂಕೇತ/ರಾಜ್ಯದ ಸಂಕೇತ (ಜಿಎಸ್‌ಟಿ ವ್ಯವಸ್ಥೆಯಲ್ಲಿರುವಂತೆ) ಈ ಪಟ್ಟಿಯನ್ನು ಸಮಯಕ್ಕನುಸಾರವಾಗಿ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/STATE_ENQ **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ.1.1.6	**ರವಾನಿಸಿರುವವರ – ಪಿನಕೋಡ**	**1..1**	**ರವಾನಿಸಿರುವವರ ಪಿನಕೋಡ**	**ಕಡ್ಡಾಯ**	ಸಂಖ್ಯೆ(ಉದ್ದ: 6)	**560087**	ಸರಕುಗಳನ್ನು ರವಾನಿಸಿರುವವರ ಸ್ಥಳೀಯ ಪಿನಕೋಡ **(ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)**
ಎ 1.2	**ಐಟಿಮ್ _ವಿವರಗಳು**	**1..n**		**ಕಡ್ಡಾಯ**			**ಅನುಬಂಧ ಎ 1.2: ಐಟಮ್ ವಿವರಗಳ ಶಿರೋನಾಮೆ**
ಕ್ರ.ಸಂ.	**ನಿಯತಾಂಕದ ಹೆಸರು**	**ಕಾಡಿ**	**ವಿವರಣೆ**	ಐಚ್ಛಿಕ ಅಥವಾ **ಕಡ್ಡಾಯ**	ಕ್ಷೇತ್ರ ನಿರ್ಧಿಷ್ಟಣೆಗಳು	**ಮಾದರಿ ಮೌಲ್ಯ**	**ವಿವರಣಾತ್ಮಕ ಸೂಚನೆಗಳು**

		ನಾಲಿಟಿ		/			
ಎ.1.2.1	ಕ್ರ.ಸಂಖ್ಯೆ	1..1	ಕ್ರಮ. ಸಂಖ್ಯೆ	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:6)	1,2,3	ಐಟಂನ ಕ್ರಮ ಸಂಖ್ಯೆ
ಎ.1.2.2	ಐಟಂನ_ವಿವರಣೆ	0..1	ಐಟಂನ ವಿವರಣೆ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:300)	ಮೊಬೈಲ್	ಐಟಂನ ವಿವರಣೆ
ಎ.1.2.3	ಸೇವೆಯೇ	1..1	ಸೇವೆ	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:1)	ಹೌ/ಇ	ಪೂರೈಕೆ ಮಾಡಿರುವುದು ಸೇವೆ ಅಥವಾ ಅಲ್ಲವೆಂದು ನಿರ್ಧಿಷ್ಟಪಡಿಸುವುದು
ಎ.1.2.4	ಎಚ್ ಎಸ್ ಎನ್_ಸಂಕೇತ	1..1	ಎಚ್ ಎಸ್ ಎನ್ ಸಂಕೇತ	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ:8)	1122	ಅನ್ವಯಿಸುವ ಸರಕು ಅಥವಾ ಸೇವೆಯ ಎಚ್ಎಸ್ಎನ್/ ಎಸ್ಎಸಿ ಸಂಕೇತವನ್ನು ನಮೂದಿಸುವುದು
ಎ.1.2.5	ಬ್ಯಾಚನ_ಮಾಹಿತಿ	0..1		ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:100)	ಎ.1.4 ನೋಡಿ	ಕೆಲ ಉತ್ಪಾದಕರು ಬ್ಯಾಚನ ಮಾಹಿತಿಗಳನ್ನು ಉಲ್ಲೇಖಿಸಬಹುದು. (ವಿಭಾಗ ಎ1.4 ರಲ್ಲಿ)
ಎ.1.2.6	ಬಾರಕೋಡ	0..1	ಬಾರಕೋಡ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:30)	ಬಿ123	ಯಾವುದಾದರು ವಸ್ತುವಿಗೆ ಬಾರಕೋಡ ಇದ್ದಲ್ಲಿ
ಎ.1.2.7	ಪ್ರಮಾಣ	0..1	ಪ್ರಮಾಣ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:10,3)	10	ಬೆಲೆಪಟ್ಟಿಯಲ್ಲಿ ನಮೂದಿಸಲಾದ ವಸ್ತುಗಳ ಪ್ರಮಾಣ ಇದು ಸರಕುಗಳಾಗಿದ್ದಲ್ಲಿ ಮಾತ್ರ ಕಡ್ಡಾಯವಾಗಿರುತ್ತದೆ.
ಎ.1.2.8	ಉಚಿತ_ಪ್ರಮಾಣ	0..1	ಉಚಿತ ಪ್ರಮಾಣ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:10,3)	99	ಉಚಿತವಾಗಿ ನೀಡಲ್ಪಟ್ಟ ವಸ್ತುಗಳ ಪ್ರಮಾಣ (ಎಫ್ಓಸಿ) ಇದ್ದಲ್ಲಿ
ಎ.1.2.9	ಪ್ರಮಾಣದ _ ಮಾಪನ	0..1	ಪ್ರಮಾಣದ ಮಾಪನ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:8)	ಬಾಕ್ಸ	ಅನ್ವಯಿಸುವ ಸರಕುಗಳ ಬೆಲೆಪಟ್ಟಿ ಇದ್ದಲ್ಲಿ ಪ್ರಮಾಣದ ಮಾಪನ
ಎ.1.2.10	ವಸ್ತುವಿನ_ಬೆಲೆ	1..1	ವಸ್ತುವಿನಬೆಲೆ	ಕಡ್ಡಾಯ	ಸಂಖ್ಯೆ(ಗರಿಷ್ಠ ಉದ್ದ:12,3)	500.5	ಪ್ರತಿ ವಸ್ತುವಿನ ಪ್ರಮಾಣದ ಬೆಲೆ
ಎ.1.2.11	ಒಟ್ಟು_ಮೊತ್ತ	1..1	ಒಟ್ಟು ಮೊತ್ತ	ಕಡ್ಡಾಯ	ಸಂಖ್ಯೆ(ಗರಿಷ್ಠ ಉದ್ದ:12,2)	5000	ತೆರಿಗೆಯನ್ನೊಳಪಡದಂತೆ ವಸ್ತುವಿನ ಒಟ್ಟು ಮೊತ್ತ
ಎ.1.2.12	ವಸ್ತು_ರಿಯಾಯಿತಿ ಮೊತ್ತ	0..1	ವಸ್ತುವಿನರಿಯಾಯಿತಿ ಮೊತ್ತ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	10.25	ಯಾವುದೇ ವಸ್ತುವಿನ ರಿಯಾಯಿತ ಮೊತ್ತ ಇದ್ದಲ್ಲಿ
ಎ.1.2.13	ತೆರಿಗೆ ಹಾಕುವ_ಮುಂಚಿತ_ಮೌಲ್ಯ	0..1	ತೆರಿಗೆ ಹಾಕುವಮುಂಚಿತ ಮೌಲ್ಯ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	99.00	ತೆರಿಗೆ ಹಾಕುವಮುಂಚಿತ ಮೌಲ್ಯವು ತೆರಿಗೆ ಹಾಕುವ ಮೌಲ್ಯಕ್ಕಿಂತ ಭಿನ್ನವಾಗಿದ್ದರೆ ತೆರಿಗೆ ಹಾಕುವಮುಂಚಿತ ಮೌಲ್ಯವನ್ನು ಹಾಗೂ ತೆರಿಗೆ ಹಾಕುವ ಮೌಲ್ಯವನ್ನು ನಮೂದಿಸಬೇಕು

							ಕೆಲವೊಂದು ಪ್ರಕರಣಗಳಲ್ಲಿ ತೆರಿಗೆ ಹಾಕುವ ಮುಂಚಿತ ಮೌಲ್ಯವು ತೆರಿಗೆ ಹಾಕುವ ಮೌಲ್ಯಕ್ಕಿಂತ ಭಿನ್ನವಾಗಿರುತ್ತದೆ. ಉದಾಹರಣೆಗೆ: ಹಳೆಯ ಸರಕುಗಳನ್ನು ಹೊಸ ಸರಕುಗಳಿಗೆ ವಿನಿಮಯ ಮಾಡಿಕೊಳ್ಳುವುದು (ಉದಾ: ಹೊಸ ದೂರವಾಣಿಯನ್ನು ಹಳೆಯ ದೂರವಾಣಿಗೆ 20,000 ರೂಪಾಯಿಗಳಿಗೆ ವಿನಿಮಯ ಮಾಡುವುದು ತದನಂತರ ತೆರಿಗೆ ಹಾಕುವ ಮುಂಚಿತ ಮೌಲ್ಯವು 24,000 ಆಗಿರುತ್ತದೆ. ಹಳೆಯ ದೂರವಾಣಿಯ ವಿನಿಮಯವಾದ ಮೊತ್ತವು 4000 ಎಂದು ಊಳಿಸಲ್ಪಡುತ್ತದೆ. ತೆರಿಗೆ ಹಾಕುವ ಮೌಲ್ಯವು 20,000 ಆಗಿರುತ್ತದೆ. ಮತ್ತೊಂದು ಉದಾಹರಣೆ ಎಂದರೆ ರಿಯಲ್ ಎಸ್ಟೇಟ್ ಪ್ರಕರಣಗಳಲ್ಲಿ ತೆರಿಗೆ ಹಾಕುವ ಮುಂಚಿತ ಮೌಲ್ಯವು ತೆರಿಗೆ ಹಾಕುವ ಮೌಲ್ಯಕ್ಕಿಂತ ಭಿನ್ನವಾಗಿರುತ್ತದೆ
ಎ.1.2.14	ಐಟಂ_ತೆರಿಗೆಯ ಮೌಲ್ಯ	1..1	ಐಟಂನ ತೆರಿಗೆಯ ಮೌಲ್ಯ	ಕಡ್ಡಾಯ	ಸಂಖ್ಯೆ(ಗರಿಷ್ಠ ಉದ್ದ:12,2)	5000	ಈ ಮೊತ್ತಕ್ಕೆ ತೆರಿಗೆಯನ್ನು ಲೆಕ್ಕಹಾಕಲಾಗಿದೆ. ಈ ಮೌಲ್ಯವು ನಕಾರಾತ್ಮಕವಾಗಿರಲು ಸಾಧ್ಯವಿಲ್ಲ
ಎ.1.2.15	ಜಿ ಎಸ್ ಟಿ_ದರ	1..1	ಜಿ ಎಸ್ ಟಿ ದರ	ಕಡ್ಡಾಯ	ಸಂಖ್ಯೆ(ಗರಿಷ್ಠ ಉದ್ದ:3,3)	5	ಜಿಎಸ್‌ಟಿ ದರವು ಪ್ರತಿಶತ ನಿರೂಪಿಸುವ ಬೆಲೆಪಟ್ಟಿಯ ವಸ್ತುವಿಗೆ ಅನ್ವಯಿಸುತ್ತದೆ. ಇವು ಏಕೀಕೃತ ತೆರಿಗೆಯ ದರ ಅಥವಾ ಸಿ ಜಿ ಎಸ್ ಟಿ ಮತ್ತು ಎಸ್ ಜಿ ಎಸ್ ಟಿ ಯ ಒಟ್ಟು ದರಗಳು.
ಎ.1.2.16	ಏಕೀಕೃತ ತೆರಿಗೆ_ಮೊತ್ತ	0..1	ಏಕೀಕೃತ ತೆರಿಗೆ ಮೊತ್ತ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	999.45	ಪ್ರತಿ ವಸ್ತುವಿಗೆ ಪಾವತಿಸಬೇಕಾದ ಏಕೀಕೃತ ಮೊತ್ತ (ಎರಡು ದಶಾಂಶಗಳಿಗೆ ನಿಲ್ಲಿಸುವುದು) ಏಕೀಕತ ತೆರಿಗೆ ವರದಿಮಾಡಿಕೊಂಡಲ್ಲಿ ಸಿಜಿಎಸ್‌ಟಿ ಹಾಗೂ ಎಸ್‌ಜಿಎಸ್‌ಟಿ/ಯು ಟಿ ಜಿ

							ಎಸ್ ಟಿ ಖಾಲಿ ಇರುವುದು ಉದಾಹರಣೆಗೆ ಪೂರೈಕೆಯನ್ನು ಆಯ್‌ಜಿಎಸ್‌ಟಿ ಅಥವಾ ಸಿಜಿಎಸ್‌ಟಿ ಹಾಗೂ ಎಸ್‌ಜಿಎಸ್‌ಟಿ/ಯು ಟಿ ಜಿ ಎಸ್ ಟಿ ವರದಿ ಮಾಡಿಕೊಳ್ಳುವುದು.
ಎ.1.2.17	ಸಿ ಜಿ ಎಸ್ ಟಿ_ಮೊತ್ತ	0..1	ಸಿ ಜಿ ಎಸ್ ಟಿ ಮೊತ್ತ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	650.00	ಪಾವತಿಸಬೇಕಾದ ಪ್ರತಿ ವಸ್ತುವಿನ ಸಿಜಿಎಸ್‌ಟಿ ಮೊತ್ತ (ಎರಡು ದಶಾಂಶಗಳಿಗೆ ನಿಲ್ಲಿಸುವುದು) ಸಿಜಿಎಸ್‌ಟಿ ವರದಿಮಾಡಿದ್ದಲ್ಲಿ ಎಸ್‌ಜಿಎಸ್‌ಟಿ/ಯು ಟಿ ಜಿ ಎಸ್ ಟಿ ವರದಿ ಮಾಡತಕ್ಕದ್ದು ಆಯ್‌ಜಿಎಸ್‌ಟಿ ಖಾಲಿ ಇರುವುದು
ಎ.1.2.18	ಎಸ್‌ಜಿ ಎಸ್ ಟಿ_ಯು ಟಿ ಜಿ ಎಸ್ ಟಿ ಮೊತ್ತ	0..1	ಎಸ್ ಜಿ ಎಸ್ ಟಿ ಯು ಟಿ ಜಿ ಎಸ್ ಟಿ ಮೊತ್ತ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	650.00	ಪಾವತಿಸಬೇಕಾದ ಪ್ರತಿ ವಸ್ತುವಿನ ಎಸ್‌ಜಿಎಸ್‌ಟಿ/ಯು ಟಿ ಜಿ ಎಸ್ ಟಿ ಮೊತ್ತ (ಎರಡು ದಶಾಂಶಗಳಿಗೆ ನಿಲ್ಲಿಸುವುದು) ಎಸ್‌ಜಿಎಸ್‌ಟಿ/ಯುಟಿಜಿಎಸ್ ಟಿ ವರದಿಮಾಡಿದ್ದಲ್ಲಿ ಸಿಜಿಎಸ್‌ಟಿ ವರದಿ ಮಾಡತಕ್ಕದ್ದು ಆಯ್‌ಜಿಎಸ್‌ಟಿ ಖಾಲಿ ಇರುವುದು
ಎ.1.2.19	ಪರಿಹಾರ_ಉಪಕರ_ದರ_ಆ್ಯಡ್_ವೇಲೋರೆಮ್	0..1	ಪರಿಹಾರಉಪಕರ ದರ, ಆ್ಯಡ್_ವೇಲೋರೆಮ್	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:3,3)	2.5%	ಜಿ ಎಸ್ ಟಿ ಪರಿಹಾರ ಉಪಕರದ ಆ್ಯಡ್_ವೇಲೋರೆಮ್ ದರ ಇದ್ದಲ್ಲಿ ಅನ್ವಯಿಸುವುದು
ಎ.1.2.20	ಪರಿಹಾರ_ಉಪಕರ_ಮೊತ್ತ_ಆ್ಯಡ್_ವೇಲೋರೆಮ್	0..1	ಉಪಕರ ಮೊತ್ತದ ಮೇಲಿನ ಪರಿಹಾರ , ಆ್ಯಡ್ ವೇಲೋರೆಮ್	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	56.00	ಜಿ ಎಸ್ ಟಿ ಪರಿಹಾರ ಉಪಕರದ ಮೊತ್ತ, ಆ್ಯಡ್_ವೇಲೋರೆಮ್ (ಎರಡು ದಶಾಂಶಗಳಿಗೆ ನಿಲ್ಲಿಸುವುದು) (ವಸ್ತುವಿನ ಮೌಲ್ಯದ ಮೊತ್ತವನ್ನು ಆಧರಿಸಿದೆ)
ಎ.1.2.21	ಪರಿಹಾರ_ಉಪಕರ_ಮೊತ್ತ_ನಾನ್_ಆ್ಯಡ್_	0..1	ಉಪಕರ ಮೊತ್ತದ ಮೇಲಿನ ಪರಿಹಾರ , ನಾನ್ ಆ್ಯಡ್ ವೇಲೋರೆಮ್	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	23.00	ಜಿ ಎಸ್ ಟಿ ಪರಿಹಾರ ಉಪಕರದ ಮೊತ್ತವನ್ನು, ಹೊರತುಪಡಿಸಿದ ವಸ್ತುವಿನ ಮೌಲ್ಯ ಆಧಾರದ

	ವೇಲೋರೆಮ್						ಮೇಲೆ ಲೆಕ್ಕಾಚಾರ ಮಾಡಲಾಗುತ್ತದೆ.
ಎ.1.2.22	ರಾಜ್ಯ_ಉಪಕರ_ದರ_ ಆ್ಯಡ್_ವೇಲೋರೆಮ್	0..1	ರಾಜ್ಯ ಉಪಕರ ದರ, ಆ್ಯಡ್_ವೇಲೋರೆಮ್	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:3,3)	1.5%	ರಾಜ್ಯ ಅಥವಾ ಕೇಂದ್ರಾಡಳಿತ ಉಪಕರದ ಆ್ಯಡ್_ವೇಲೋರೆಮ್ ದರ ಇದ್ದಲ್ಲಿ ಅನ್ವಯಿಸುತ್ತದೆ.
ಎ.1.2.23	ರಾಜ್ಯ_ಉಪಕರ_ದರ_ ಆ್ಯಡ್_ವೇಲೋರೆಮ್	0..1	ರಾಜ್ಯ ಉಪಕರ ದರ, ಆ್ಯಡ್_ವೇಲೋರೆಮ್	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	43.00	ರಾಜ್ಯ ಅಥವಾ ಕೇಂದ್ರಾಡಳಿತ ಉಪಕರದ ಮೊತ್ತ, ಆ್ಯಡ್_ವೇಲೋರೆಮ್ (ವಸ್ತು ಮೊತ್ತದ ಮೌಲ್ಯವನ್ನು ಆಧರಿಸಿದೆ)
ಎ.1.2.24	ರಾಜ್ಯ_ಉಪಕರ_ಮೊತ್ತ_ ನಾನ್ ಆ್ಯಡ್_ವೇಲೋರೆಮ್	0..1	ರಾಜ್ಯ ದ ಉಪಕರ ಮೊತ್ತ ನಾನ್ ಆ್ಯಡ್_ವೇಲೋರೆಮ್	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	12.00	ರಾಜ್ಯ/ಕೇಂದ್ರಾಡಳಿತ ಉಪಕರ ಮೊತ್ತವನ್ನು ವಸ್ತುವಿನ ಮೌಲ್ಯವನ್ನು ಹೊರತುಪಡಿಸಿ ಈ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ (ನಿರ್ದಿಷ್ಟ ಉಪಕರ ಮೊತ್ತವನ್ನು ಪ್ರಮಾಣ, ಸಂಖ್ಯೆ ಆಧಾರದ ಮೇಲೆ ಲೆಕ್ಕಿಸುವುದು)
ಎ.1.2.25	ಇತರೆ ಶುಲ್ಕಗಳು _ಐಟಂ ಮಟ್ಟ	0..1	ಇತರೆ ಶುಲ್ಕಗಳು (ಐಟಂ ಮಟ್ಟ)	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:12,2)	874.95	ವಸ್ತುವಿನ ಮಟ್ಟಕ್ಕೆ ಅನ್ವಯಿಸುವ ಇತರೆ ದರಗಳು ಇವು ತೆರಿಗೆ ಹಾಕುವ ಮೌಲ್ಯದಲ್ಲಿ ಒಳಗೊಂಡಿರುವುದಿಲ್ಲ. ಉದಾಹರಣೆ: ದಲ್ಲಾಳಿಯ ಪ್ರಕರಣದಲ್ಲಿ ವೆಚ್ಚ ಮರುಪಾವತಿಸುವಿಕೆ
ಎ.1.2.26	ಖರೀದಿ ಆದೇಶ_ಪಂಕ್ತಿ_ ಉಲ್ಲೇಖ	0..1	ಖರೀದಿ ಆದೇಶದ ಪಂಕ್ತಿ ಉಲ್ಲೇಖ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:50)	746/ಎಬಿಸಿ/01	ಖರೀದಿ ಆದೇಶದ ಪಂಕ್ತಿಯ ಉಲ್ಲೇಖ
ಎ.1.2.27	ವಸ್ತುವಿನ _ಒಟ್ಟು_ವೆಚ್ಚ	1..1	ವಸ್ತುವಿನ ಒಟ್ಟು ಮೊತ್ತ	ಕಡ್ಡಾಯ	ಸಂಖ್ಯೆ(ಗರಿಷ್ಠ ಉದ್ದ:12,2)	5000	ವಸ್ತುವಿನ ಒಟ್ಟು ಮೌಲ್ಯವು ಎಲ್ಲಾ ತೆರಿಗೆಗಳು, ಉಪಕರಗಳು ಹಾಗೂ ಇತರೆ ದರಗಳನ್ನು ಒಳಗೊಂಡಿರುತ್ತದೆ. ಅದಾಗಿಯೂ, ಈ ಮೌಲ್ಯವು ಯಾವುದಾದರೂ ರಿಯಾಯಿತಿ ಇದ್ದಲ್ಲಿ ಒಳಗೊಂಡಿರುವುದಿಲ್ಲ.
ಎ.1.2.28	ಮೂಲ_ದೇಶ _ಸಂಕೇತ	0..1	ಮೂಲ ದೇಶದ ಸಂಕೇತ	ಐಚ್ಛಿಕ	ಎಣಿಕೆ ಪಟ್ಟಿ	DZ	ಇದು ವಸ್ತುವಿನ ಮೂಲ ದೇಶವನ್ನು ನಿರ್ಧಿಷ್ಟಪಡಿಸಲು,ಉದಾಹರಣೆ: ಬೇರೆ ದೇಶದಲ್ಲಿ ಉತ್ಪಾದಿಸಲಾದ ಮೊಬೈಲ್‌ಫೋನನ್ನು ಭಾರತದಲ್ಲಿಯೇ ಮಾರುವುದು. ISO 3166-1 alpha-2 ಪ್ರಕಾರ ದೇಶದ ರಫ್ತುವಿನ

							ಸಂಕೇತ/ Indian Customs EDI System (ICES) ಈ ಪಟ್ಟಿಯನ್ನು ಸಮಯಕ್ಕನುಸಾರವಾಗಿ ನವೀಕರಿಸಿ ಈ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ. https://www.icegate.gov.in/Webapp1/COUNTRY_ENQ
ಎ.1.2.29	**ವಿಶಿಷ್ಟ_ಸರಣಿ_ಸಂಖ್ಯೆ**	**0..1**	**ವಿಶಿಷ್ಟ ಸರಣಿ ಸಂಖ್ಯೆ**	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ:20)	**553**	**ಪ್ರತಿ ವಸ್ತು ವಿಶಿಷ್ಟ ಸರಣಿ ಸಂಖ್ಯೆಯನ್ನು ಹೊಂದಿರುವಂತಹ ಸರಣಿಯ ಸಂಖ್ಯೆ**
ಎ.1.2.30	**ಉತ್ಪನ್ನ_ಗುಣಲಕ್ಷಣ_ವಿರ**	**0..ಎನ್**		ಐಚ್ಛಿಕ		**ಎ.1.5 ನೋಡಿ**	
ಎ 1.3	**ದಾಖಲೆ_ಒಟ್ಟು ವಿವರಗಳು**	**1..1**	**ದಾಖಲೆಒಟ್ಟು ವಿವರಗಳು**	**ಕಡ್ಡಾಯ**			**ಅನುಬಂಧ ಎ1.3 ಗೆ ಶಿರೋನಾಮೆ: ಒಟ್ಟು ದಾಖಲೆಯ ವಿವರಗಳು**
ಕ್ರ.ಸಂ.	**ನಿಯತಾಂಕದ ಹೆಸರು**	**ಕಾಡಿನಾಲಿಟಿ**	**ವಿವರಣೆ**	ಐಚ್ಛಿಕ ಅಥವಾ **ಕಡ್ಡಾಯ**	ಕ್ಷೇತ್ರ ನೀರ್ಧಿಷ್ಟಣೆಗಳು	**ಮಾದರಿ ಮೌಲ್ಯ**	**ವಿವರಣಾತ್ಮಕ ಟಿಪ್ಪಣಿಗಳು**
ಎ.1.3.1	**ತೆರಿಗೆಯ_ಮೌಲ್ಯ_ಒಟ್ಟು**	**1..1**	**ಒಟ್ಟು ತೆರಿಗೆಯ ಮೌಲ್ಯ**	**ಕಡ್ಡಾಯ**	ಸಂಖ್ಯೆ(ಗರಿಷ್ಠ ಉದ್ದ:14,2)	**768439.35**	**ಈ ದಾಖಲೆ ಎಲ್ಲಾ ವಸ್ತುಗಳ ತೆರಿಗೆ ಮೌಲ್ಯದ ಮೊತ್ತವನ್ನು ಹೊಂದಿರುತ್ತದೆ.**
ಎ.1.3.2	**ಆಯ್ ಜಿ ಎಸ್ ಟಿ_ಮೊತ್ತ_ಒಟ್ಟು**	**0..1**	**ಒಟ್ಟು ಆಯ್ ಜಿ ಎಸ್ ಟಿ ಮೊತ್ತ ಒಟ್ಟು**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	**265.50**	**ಬೆಲೆಪಟ್ಟಿಯ ಒಟ್ಟು ಏಕೀಕೃತ ತೆರಿಗೆ ಮೊತ್ತ.** **ನಿಯಮದ ಪ್ರಕಾರ ನಿರ್ಧಿಷ್ಠ ತೆರಿಗೆಗಳು ಅನ್ವಯಿಸುತ್ತದೆ.** **ಉದಾಹರಣೆ:ಸಿ ಜಿ ಎಸ್ ಟಿ ಮತ್ತು ಎಸ್‌ಜಿಎಸ್‌ಟಿ/ಯು ಟಿ ಜಿ ಎಸ್ ಟಿ ಅಥವಾ ಆಯ್ ಜಿ ಎಸ್ ಟಿ ಕಡ್ಡಾಯವಾಗಿರುತ್ತದೆ.** **ಆದರೆ, ಇದು ಷರತ್ತುಬದ್ಧ ಕಡ್ಡಾಯ, ಇದನ್ನು 'ಐಚ್ಛಿಕ'** ಎಂದು ಗುರುತಿಸಲಾಗಿದೆ.
ಎ.1.3.3	**ಸಿ ಜಿ ಎಸ್ ಟಿ_ಮೊತ್ತ_ಒಟ್ಟು**	**0..1**	**ಒಟ್ಟು ಸಿ ಜಿ ಎಸ್ ಟಿ ಮೊತ್ತ ಒಟ್ಟು**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	**65.45**	**ಬೆಲೆಪಟ್ಟಿಯ ಒಟ್ಟು :ಸಿ ಜಿ ಎಸ್ ಟಿ ತೆರಿಗೆ ಮೊತ್ತ.** **ನಿಯಮದ ಪ್ರಕಾರ ನಿರ್ಧಿಷ್ಠ ತೆರಿಗೆಗಳು ಅನ್ವಯಿಸುತ್ತದೆ.**

							ಉದಾಹರಣೆ:ಸಿ ಜಿ ಎಸ್ ಟಿ ಮತ್ತು ಎಸ್‌ಜಿಎಸ್‌ಟಿ/ಯು ಟಿ ಜಿ ಎಸ್ ಟಿ ಅಥವಾ ಆಯ್ ಜಿ ಎಸ್ ಟಿ ಕಡ್ಡಾಯವಾಗಿರುತ್ತದೆ. **ಆದರೆ, ಇದು ಷರತ್ತುಬದ್ಧ ಕಡ್ಡಾಯ, ಇದನ್ನು 'ಐಚ್ಛಿಕ'** ಎಂದು ಗುರುತಿಸಲಾಗಿದೆ.
ಎ.1.3.4	**ಎಸ್ ಜಿ ಎಸ್ ಟಿ_ಯುಟಿ ಜಿ ಎಸ್ ಟಿ_ಮೊತ್ತ_ಒಟ್ಟು**	**0..1**	**ಒಟ್ಟು ಎಸ್ ಜಿ ಎಸ್ ಟಿ ಯುಟಿ ಜಿ ಎಸ್ ಟಿ ಮೊತ್ತ ಒಟ್ಟು**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	**65.45**	**ಬೆಲೆಪಟ್ಟಿಯ ಒಟ್ಟು :ಎಸ್ ಜಿ ಎಸ್ ಟಿ/ ಯು ಟಿ ಜಿ ಎಸ್ ಟಿ ತೆರಿಗೆ ಮೊತ್ತ.** **ನಿಯಮದ ಪ್ರಕಾರ ನಿರ್ಧಿಷ್ಠ ತೆರಿಗೆಗಳು ಅನ್ವಯಿಸುತ್ತದೆ.** **ಉದಾಹರಣೆ:ಸಿ ಜಿ ಎಸ್ ಟಿ ಮತ್ತು ಎಸ್‌ಜಿಎಸ್‌ಟಿ/ಯು ಟಿ ಜಿ ಎಸ್ ಟಿ ಅಥವಾ ಆಯ್ ಜಿ ಎಸ್ ಟಿ ಕಡ್ಡಾಯವಾಗಿರುತ್ತದೆ.** **ಆದರೆ, ಇದು ಷರತ್ತುಬದ್ಧ ಕಡ್ಡಾಯ, ಇದನ್ನು 'ಐಚ್ಛಿಕ'** ಎಂದು ಗುರುತಿಸಲಾಗಿದೆ.
ಎ.1.3.5	**ಪರಿಹಾರ_ಉಪಕರ_ಮೊತ್ತ_ಒಟ್ಟು**	**0..1**	**ಉಪಕರದ ಒಟ್ಟು ಪರಿಹಾರ ಮೊತ್ತ**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	**24.95**	**ಬೆಲೆಪಟ್ಟಿಯ ಜಿಎಸ್‌ಟಿ ಉಪಕರದ ಒಟ್ಟು ಪರಿಹಾರ ಮೊತ್ತ** **(ಆ್ಯಡ್_ ವೇಲೋರೆಮ್ ಮತ್ತು ನಾನ್–ಆ್ಯಡ್_ ವೇಲೋರೆಮ್)**
ಎ.1.3.6	**ರಾಜ್ಯದ_ಒಟ್ಟು_ಉಪಕರ_ಮೊತ್ತ_**	**0..1**	**ರಾಜ್ಯದ ಒಟ್ಟು ಉಪಕರಮೊತ್ತ**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	**5.45**	**ಬೆಲೆಪಟ್ಟಿಯ ರಾಜ್ಯದ ಒಟ್ಟು ಉಪಕರಮೊತ್ತ** **(ಆ್ಯಡ್_ ವೇಲೋರೆಮ್ ಮತ್ತು ನಾನ್–ಆ್ಯಡ್_ ವೇಲೋರೆಮ್)**
ಎ.1.3.7	**ರಿಯಾಯಿತಿ_ಮೊತ್ತ_ಬೆಲೆಪಟ್ಟಿ_ಮಟ್ಟ**	**0..1**	**ಬೆಲೆಪಟ್ಟಿಮಟ್ಟದ ರಿಯಾಯಿತಿ ಮೊತ್ತ**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	**100.00**	**ಒಟ್ಟು ಬೆಲೆ ಪಟ್ಟಿಯ ಮೌಲ್ಯದ ಮೇಲೆ ಯಾವುದಾದರೂ ರಿಯಾಯಿತಿ ಮೊತ್ತ ಇದ್ದಲ್ಲಿ ಇದು ಅನ್ವಯಿಸುವುದು**
ಎ.1.3.8	**ಇತರೆ_ಶುಲ್ಕಗಳು_ಬೆಲೆಪಟ್ಟಿ_ಮಟ್ಟ**	**0..1**	**ಇತರೆ ಶುಲ್ಕಗಳು (ಬೆಲೆಪಟ್ಟಿ ಮಟ್ಟ)**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	**200.00**	**ಒಟ್ಟು ಬೆಲೆ ಪಟ್ಟಿಯ ಮೌಲ್ಯದ ಮೇಲೆ ಯಾವುದಾದರೂ ಇತರೆ ಶುಲ್ಕಗಳಿದ್ದಲ್ಲಿ ಇದ್ದಲ್ಲಿ ಅನ್ವಯಿಸುವುದು**
ಎ.1.3.9	**ಪೂರ್ಣಾಂಕಕ್ಕೆ ತರುವ**	**0..1**	**ಪೂರ್ಣಾಂಕಕ್ಕೆ ತರುವ ಮೊತ್ತ**	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:2,2)	**31.21**	**ಒಟ್ಟು ಬೆಲೆಪಟ್ಟಿ ಮೌಲ್ಯದ ಒಟ್ಟು ನಿಲ್ಲಿಸುವ ಮೊತ್ತವಾಗಿದೆ.**

	ಮೊತ್ತ						
ಎ.1.3.10	ಒಟ್ಟು_ಬೆಲೆಪಟ್ಟಿ ಮೊತ್ತದ_ರೂಪಾಯಿಗಳಲ್ಲಿ	1..1	ಒಟ್ಟು ಬೆಲೆಪಟ್ಟಿ ಮೊತ್ತದ ರೂಪಾಯಿಗಳಲ್ಲಿ	ಕಡ್ಡಾಯ	ಸಂಖ್ಯೆ(ಗರಿಷ್ಠ ಉದ್ದ:14,2)	1589632574.50	ತೆರಿಗೆ / ಜಿ ಎಸ್ ಟಿಯನ್ನು ಒಳಗೊಂಡತೆ ಒಟ್ಟು ಬೆಲೆಪಟ್ಟಿಯ ಮೌಲ್ಯ ಗರಿಷ್ಠ ಎರಡು ದಶಾಂಶಗಳಿಗೆ ನಿಲ್ಲಿಸುವದು.
ಎ.1.3.11	ಒಟ್ಟು_ಬೆಲೆಪಟ್ಟಿ_ಮೌಲ್ಯ_ಎಫ್ ಸಿ ಎನ್ ಆರ್	0..1	ಒಟ್ಟು ಬೆಲೆಪಟ್ಟಿಮೌಲ್ಯ ಎಫ್ ಸಿ ಎನ್ ಆರ್	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	$5729.65	ಒಟ್ಟು ಬೆಲೆಪಟ್ಟಿ ಮೌಲ್ಯವು ಹೆಚ್ಚುವರಿ ಕರೆನ್ಸಿಯಲ್ಲಿ.
ಎ.1.3.12	ಪಾವತಿಸಿದ ಮೊತ್ತ	0..1	ಪಾವತಿಸಿದ ಮೊತ್ತ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	8463.50	ಮುಂಗಡವಾಗಿ ಪಾವತಿಸಿದ ಯಾವುದಾದರೂ ಮೊತ್ತವಿದ್ದಲ್ಲಿ ಇದನ್ನು ಗರಿಷ್ಠ ಎರಡು ದಶಾಂಶಗಳಿಗೆ ನಿಲ್ಲಿಸುವುದು
ಎ.1.3.13	ಬಾಕಿ ಇರುವ ಮೊತ್ತ	0..1	ಬಾಕಿ ಇರುವ ಮೊತ್ತ	ಐಚ್ಛಿಕ	ಸಂಖ್ಯೆ(ಗರಿಷ್ಠ ಉದ್ದ:14,2)	98789.50	ಪಾವತಿಗೆ ಬಾಕಿ ಇರುವ ಮೊತ್ತ ಇದನ್ನು ಗರಿಷ್ಠ ಎರಡು ದಶಾಂಶಗಳಿಗೆ ನಿಲ್ಲಿಸುವುದು
ಎ 1.4	ಬ್ಯಾಚ ವಿವರಗಳು	0..1		ಐಚ್ಛಿಕ			ಅನುಬಂಧ ಎ 1.4 ಶಿರೋನಾಮೆ: ಬ್ಯಾಚ ವಿವರಗಳ
ಕ್ರ.ಸಂ.	ನಿಯತಾಂಕದ ಹೆಸರು	ಕಾಡಿನಾಲಿಟಿ	ವಿವರಣೆ	ಐಚ್ಛಿಕ ಅಥವಾ ಕಡ್ಡಾಯ	ಕ್ಷೇತ್ರ ನೀರ್ಧಿಷ್ಠಣೆಗಳು	ಮಾದರಿ ಮೌಲ್ಯ	ವಿವರಣಾತ್ಮಕ ಟಿಪ್ಪಣಿಗಳು
ಎ.1.4.1	ಬ್ಯಾಚ ಸಂಖ್ಯೆ	1..1	ಬ್ಯಾಚ ಸಂಖ್ಯೆ	ಕಡ್ಡಾಯ	ಸ್ಟ್ರಿಂಗ್(ಗರಿಷ್ಠ ಉದ್ದ: 20)	673927	ಕೆಲವು ಉತ್ಪಾದಕರ ಗುಂಪು ಬ್ಯಾಚಿನ ಸಂಖ್ಯೆಯ ಮಾಹಿತಿಯನ್ನು ನಮೂದಿಸಬಹುದು (ಈ ಭಾಗವನ್ನು ಆಯ್ಕೆ ಮಾಡಿದಲ್ಲಿ ಈ ಕ್ಷೇತ್ರವು ಕಡ್ಡಾಯವಾಗಿರುತ್ತದೆ.)
ಎ.1.4.2	ಬ್ಯಾಚನ ಅವಧಿ ಮೀರಿದ ದಿನಾಂಕ	0..1	ಬ್ಯಾಚನ ಅವಧಿ ಮೀರಿದ ದಿನಾಂಕ	ಐಚ್ಛಿಕ	ಸ್ಟ್ರಿಂಗ್(ಡಿಡಿ/ ಎಮ್ ಎಮ್/ವೈ ವೈ ವೈ ವೈ	21/11/2019	ಬ್ಯಾಚಿನ ಅವಧಿ ಮುಗಿದ ದಿನಾಂಕ ಇದ್ದಲ್ಲಿ,
ಎ.1.4.3	ವಾರಂಟಿ ದಿನಾಂಕ	0..1	ವಾರಂಟಿ ದಿನಾಂಕ	ಐಚ್ಛಿಕ	ಸ್ಟ್ರಿಂಗ್(ಡಿಡಿ/ ಎಮ್ ಎಮ್/ವೈ ವೈ ವೈ ವೈ	21/11/2019	ಬ್ಯಾಚಿನ ವಾರಂಟಿ ದಿನಾಂಕ ಇದ್ದಲ್ಲಿ,
ಎ 1.5	ಗುಣಲಕ್ಷಣ_ವಸ್ತುವಿನ_ವಿವರಗಳು	0..ಎನ್		ಐಚ್ಛಿಕ			ಅನುಬಂಧ ಎ1.5 ಯ ಶಿರೋನಾಮೆ: ವಸ್ತುವಿನ ಗುಣಲಕ್ಷಣ ವಿವರಗಳು
ಕ್ರ.ಸ	ನಿಯತಾಂಕ	ಕಾ	ವಿವರಣೆ	ಐಚ್ಛಿಕ	ಕ್ಷೇತ್ರ	ಮಾದರಿ	ವಿವರಣಾತ್ಮಕ ಟಿಪ್ಪಣಿಗಳು

ಂ.	ದ ಹೆಸರು	ಡಿ ನಾ ಲಿ ಟಿ		ಅಥವಾ ಕಡ್ಡಾಯ	ನೀರ್ಧಿಷ್ಟಣೆಗ ಳು	ಮೌಲ್ಯ	
ಎ.1. 5.1	ಗುಣಲಕ್ಷಣ _ಹೆಸರು	0.. 1	ಗುಣಲಕ್ಷಣ ಹೆಸರು	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ: 100)	ಬಣ್ಣ	ವಸ್ತುವಿನ ಗುಣಲಕ್ಷಣದ ಹೆಸರು
ಎ.1. 5.2	ಗುಣಲಕ್ಷಣ _ಮೌಲ್ಯ	0.. 1	ಗುಣಲಕ್ಷಣದ ಮೌಲ್ಯ	ಐಚ್ಛಿಕ	ಸ್ಟ್ರಿಂಗ್(ಗರಿಷ್ಠ ಉದ್ದ: 100)	ಕೆಂಪು, ಹಸಿರು ಇತ್ಯಾದಿ	ವಸ್ತುವಿನ ಗುಣಲಕ್ಷಣದ ಮೌಲ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಜಿ/2020)
ಸಂಖ್ಯೆ.ಆಇ 05 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ:05/10/2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ. ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎಂಟನೇ ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಈ ನಿಯಮಗಳು, 2020 ರ ಆಗಸ್ಟ್ 20ನೇ ದಿನದಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. ನಿಯಮ 8 ರ ತಿದ್ದುಪಡಿ :– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 8 ರಲ್ಲಿ, ಉಪನಿಯಮ (4ಎ) ಗೆ, ಈ ಕೆಳಗಿನ ಉಪನಿಯಮ 2020 ಏಪ್ರಿಲ್ 01ರಿಂದ ಅನ್ವಯವಾಗುವಂತೆ ಪ್ರತಿಯೋಜಿಸತಕ್ಕದ್ದು, ಅಂದರೆ:–

"(4ಎ) ಪ್ರಕರಣ 25ರ ಉಪಪ್ರಕರಣ (6ಡಿ) ಅಡಿಯಲ್ಲಿ ಅಧಿಸೂಚಿತ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಯಾವುದೇ ಅರ್ಜಿದಾರನು ಆಧಾರ್ ಸಂಖ್ಯೆಯ ಅಧಿದೃಢೀಕರಣಕ್ಕೆ ಆಯ್ಕೆ ಮಾಡಿಕೊಂಡಿದ್ದರೆ, ಅಂತಹವನು

ಉಪನಿಯಮ (4) ರಡಿಯಲ್ಲಿ ಅರ್ಜಿಯನ್ನು ಸಲ್ಲಿಸುವಾಗ, 2020 ಆಗಸ್ಟ್ 21 ರಿಂದ ಅನ್ವಯಿಸುವಂತೆ ಆಧಾರ ಸಂಖ್ಯೆಯ ಅಧಿದೃಢೀಕರಣಕ್ಕೆ ಒಳಪಡತಕ್ಕದ್ದು ಮತ್ತು ಅಂತಹ ಪ್ರಕರಣಗಳಲ್ಲಿ ಅರ್ಜಿಯನ್ನು ಸಲ್ಲಿಸುವ ದಿನಾಂಕವು, ಆಧಾರ ಸಂಖ್ಯೆಯ ಅಧಿದೃಢೀಕರಣದ ದಿನಾಂಕ ಅಥವಾ ಉಪ ನಿಯಮ (4) ರಡಿಯಲ್ಲಿ ನಮೂನೆ ಜಿಎಸ್‌ಟಿ ಆರ್‌ಇಜಿ–01 ನ ಭಾಗ ಬಿ ಯಲ್ಲಿ ಅರ್ಜಿ ಸಲ್ಲಿಸಿದಾಗಿನಿಂದ ಹದಿನೈದು ದಿನಗಳು; ಇವುಗಳಲ್ಲಿ ಯಾವುದು ಮೊದಲೋ ಅದು"

3. **ನಿಯಮ 9ರ ತಿದ್ದುಪಡಿ.**– ಸದರಿ ನಿಯಮಗಳ, ನಿಯಮ 9 ರಲ್ಲಿ, 2020ರ ಆಗಸ್ಟ್ 21ನೇ ದಿನದಿಂದ ಜಾರಿಗೊಳುವಂತೆ,–

(i) ಉಪ ನಿಯಮ (1) ರಲ್ಲಿನ ಪರಂತುಕಕ್ಕೆ ಈ ಕೆಳಗಿನ ಪರಂತುಕಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪರಂತು ಅಧಿನಿಯಮ 25 ರ ಉಪ ಅಧಿನಿಯಮ (6ಡಿ) ಅಡಿಯಲ್ಲಿ ಅಧಿಸೂಚಿತ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಯಾವುದೇ ವ್ಯಕ್ತಿಯು ನಿಯಮ 8ರ ಉಪ ನಿಯಮ (4ಎ) ರಡಿಯಲ್ಲಿ ನಿಗದಿಪಡಿಸಿರುವಂತೆ ಆಧಾರ್ ಸಂಖ್ಯೆಯ ಅಧಿದೃಢೀಕರಣದಲ್ಲಿ ವಿಫಲವಾದರೆ ಅಥವಾ ಆಧಾರ ಸಂಖ್ಯೆಯ ಅಧಿದೃಢೀಕರಣಕ್ಕೆ ಆಯ್ಕೆ ಮಾಡಿಕೊಳ್ಳದ್ದಿದ್ದಲ್ಲಿ, ನಿಯಮ 25 ರಡಿಯಲ್ಲಿ ನಿಗದಿಪಡಿಸಿರುವಂತೆ ನೋಂದಣಿಯನ್ನು ಸದರಿ ವ್ಯಕ್ತಿಯ ಸಮ್ಮುಖದಲ್ಲಿ ವ್ಯಾಪಾರ ಸ್ಥಳದ ಭೌತಿಕ ಪರಿಶೀಲನೆ ಮಾಡಿದ ನಂತರವೇ ನೀಡತಕ್ಕದ್ದು;

ಮತ್ತು ಪರಂತು, ಯುಕ್ತ ಅಧಿಕಾರಿಯು ಲಿಖಿತವಾಗಿ ದಾಖಲಿಸಬಹುದಾದ ಕಾರಣಗಳಿಗಾಗಿ ಮತ್ತು ಜಂಟಿ ಆಯುಕ್ತರ ಶ್ರೇಣಿಗಿಂತ ಕಡಿಮೆ ಇಲ್ಲದ ಅಧಿಕಾರಿಯವರ ಅನುಮೋದನೆಯೊಂದಿಗೆ, ವ್ಯಾಪಾರ ಸ್ಥಳದ ಭೌತಿಕ ಪರಿಶೀಲನೆಗೆ ಬದಲಾಗಿ ಸೂಕ್ತವೆನಿಸಿದ ದಸ್ತಾವೇಜುಗಳನ್ನು ಪರಿಶೀಲಿಸಬಹುದು."

(ii) ಉಪ ನಿಯಮ 2 ರಲ್ಲಿ ವಿವರಣೆಗಿಂತ ಮುಂಚಿತವಾಗಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು ಅಂದರೆ:–

"ಪರಂತು ಪ್ರಕರಣ 25 ರ ಉಪಪ್ರಕರಣ (6ಡಿ) ಅಡಿಯಲ್ಲಿ ಅಧಿಸೂಚಿತ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಯಾವುದೇ ವ್ಯಕ್ತಿಯು ನಿಯಮ 8 ರ ಉಪ ನಿಯಮ (4ಎ) ರಡಿಯಲ್ಲಿ ನಿಗದಿಪಡಿಸಿರುವಂತೆ ಆಧಾರ್ ಸಂಖ್ಯೆಯ ಅಧಿದೃಢೀಕರಣದಲ್ಲಿ ವಿಫಲವಾದರೆ ಅಥವಾ ಆಧಾರ ಸಂಖ್ಯೆಯ ಅಧಿದೃಢೀಕರಣಕ್ಕೆ ಆಯ್ಕೆ ಮಾಡಿಕೊಳ್ಳದ್ದಿದ್ದಲ್ಲಿ, ನಮೂನೆ ಜಿಎಸ್‌ಟಿ ಆರ್‌ಇಜಿ–03 ಯಲ್ಲಿ ನೋಟೀಸ್ ಅನ್ನು ಅರ್ಜಿ ಸಲ್ಲಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳಿಗೆ ಮೀರದಂತೆ ನೀಡಬಹುದು".

(iii) ಉಪ ನಿಯಮ (4) ರಲ್ಲಿ "ಸಲ್ಲಿಸತಕ್ಕದ್ದು" ಎಂಬ ಪದಕ್ಕೆ ಬದಲಾಗಿ "ಸಲ್ಲಿಸಬಹುದು" ಎಂಬ ಪದವನ್ನು ಪ್ರತಿಯೋಜಿಸತಕ್ಕದು:

(iv) ಉಪ ನಿಯಮ (5) ಕ್ಕೆ, ಈ ಕೆಳಗಿನ ಉಪನಿಯಮವನ್ನು ಪ್ರತಿಯೋಜಿಸತಕ್ಕದ್ದು ಅಂದರೆ :–

"(5) ಯುಕ್ತ ಅಧಿಕಾರಿಯು ಯಾವ ರೀತಿಯ ಕ್ರಮಕೈಗೊಳ್ಳಲು ವಿಫಲವಾದಲ್ಲಿ,–

(ಎ) ವ್ಯಕ್ತಿಯ ಆಧಾರ್ ಸಂಖ್ಯೆ ಯಶಸ್ವಿಯಾಗಿ ಅಧಿದೃಢೀಕರಣಗೊಂಡ ಪ್ರಕರಣಗಳಲ್ಲಿ ಅರ್ಜಿ ಸಲ್ಲಿಸಿದ ಮೂರು ಕೆಲಸದ ದಿನಗಳೊಳಗೆ ಅಥವಾ ಪ್ರಕರಣ 25 ರ ಉಪಪ್ರಕರಣ (6ಡಿ) ರಡಿಯಲ್ಲಿ ಅಧಿಸೂಚಿಸಿದಂತೆ; ಅಥವಾ

(ಬಿ) ಯಾವುದೇ ವ್ಯಕ್ತಿಯು, ಅಧಿನಿಯಮ 25 ರ ಉಪಪ್ರಕರಣ (6ಡಿ) ಅಡಿಯಲ್ಲಿ ಅಧಿಸೂಚಿತ ವ್ಯಕ್ತಿಯನ್ನು ಹೊರತುಪಡಿಸಿದಂತೆ, ನಿಯಮ 8 ರ ಉಪ ನಿಯಮ (4ಎ) ರಡಿಯಲ್ಲಿ ನಿಗದಿಪಡಿಸಿರುವಂತೆ ಆಧಾರ್

ಸಂಖ್ಯೆಯ ಅಧಿದೃಢೀಕರಣದಲ್ಲಿ ವಿಫಲವಾದರೆ, ಉಪನಿಯಮ (2)ರ ಪರಂತುಕದಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ; ಅಥವಾ

(ಸಿ) ಅರ್ಜಿ ಸಲ್ಲಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗೆ ಯಾವುದೇ ವ್ಯಕ್ತಿಯು ಆಧಾರ್ ಸಂಖ್ಯೆಯ ಅಧಿದೃಢೀಕರಣಕ್ಕೆ ಆಯ್ಕೆ ಮಾಡಿಕೊಳ್ಳದ್ದಿದ್ದ ಪ್ರಕರಣಗಳಲ್ಲಿ;

(ಡಿ) ಉಪ ನಿಯಮ (2) ರಡಿಯಲ್ಲಿ ಅರ್ಜಿದಾರನಿಂದ ಸ್ಪಷ್ಟೀಕರಣ, ಮಾಹಿತಿ ಅಥವಾ ದಾಖಲೆಗಳನ್ನು ಅರ್ಜಿದಾರನು ಸ್ಪಷ್ಟೀಕರಣಕ್ಕೆ ಸಲ್ಲಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳೊಳಗೆ,

ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ವಿಫಲನಾದಲ್ಲಿ, ನೋಂದಣಿಯ ಮಂಜೂರಾತಿಯ ಅರ್ಜಿಯನ್ನು ಅನುಮೋದನೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು."

4. **ನಿಯಮ 25 ರ ತಿದ್ದುಪಡಿ.**– ಸದರಿ ನಿಯಮಗಳ, ನಿಯಮ 25 ರಲ್ಲಿ 2020 ಆಗಸ್ಟ್ 21 ರಿಂದ ಅನ್ವಯಿಸುವಂತೆ "ಆಧಾರ್ ಅಧಿದೃಢೀಕರಣದ ವಿಫಲತೆ" ಎಂಬ ಪದಗಳ ನಂತರ "ಅಥವಾ ಆಧಾರ್ ಅಧಿದೃಢೀಕರಣಕ್ಕೆ ಆಯ್ಕೆ ಮಾಡಿಕೊಳ್ಳದಿದ್ದಕ್ಕಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–**ಹೆಚ್**/2020)
ಸಂಖ್ಯೆ.ಆಇ 05 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 11/11/2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ.ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.** – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಒಂಬತ್ತನೇ ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಈ ನಿಯಮಗಳು, 2020 ರ ಸೆಪ್ಟೆಂಬರ್ 30ನೇ ದಿನದಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. **ನಿಯಮ 46ರ ತಿದ್ದುಪಡಿ.**– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 46ರಲ್ಲಿನ ಖಂಡ (ಕ್ಯೂ)ನ ನಂತರ, ಈ ಕೆಳಕಂಡಂತೆ ಸೇರಿಸತಕ್ಕದ್ದು, ಅಂದರೆ:–

"(ಆರ್) ನಿಯಮ 48ರ ಉಪನಿಯಮ (4)ರಲ್ಲಿ ನಿಗದಿಪಡಿಸಿದಂತೆ ಬೆಲೆಪಟ್ಟಿಯನ್ನು ನೀಡಲಾಗುತ್ತಿದ್ದಲ್ಲಿ, ಬೆಲೆಪಟ್ಟಿ ಉಲ್ಲೇಖ ಸಂಖ್ಯೆ (ಐಆರ್ಎನ್) ಹೊಂದಿದ ಕ್ಷಿಪ್ರ ಪ್ರತಿಕ್ರಿಯೆ ಕೋಡ್ ಇರತಕ್ಕದ್ದು."

3. ನಿಯಮ 48ರ ತಿದ್ದುಪಡಿ– ಸದರಿ ನಿಯಮದ ನಿಯಮ 48ರಲ್ಲಿ ಉಪನಿಯಮ (4)ರ ನಂತರ ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಆಯುಕ್ತರವರು ಪರಿಷತ್ತಿನ ಶಿಫಾರಸ್ಸಿನ ಮೇರೆಗೆ ಅಧಿಸೂಚನೆ ಮೂಲಕ ಅಧಿಸೂಚನೆಯಲ್ಲಿ ತಿಳಿಸಿದ ಷರತ್ತು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಈ ಉಪನಿಯಮದಡಿ ನಿಗಧಿತ ಅವಧಿಗೆ ಬೆಲೆಪಟ್ಟಿಯನ್ನು ನೀಡುವುದರಿಂದ ಯಾವುದೇ ವ್ಯಕ್ತಿ ಅಥವಾ ನೋಂದಾಯಿತ ವ್ಯಕ್ತಿಗಳ ವರ್ಗದವರಿಗೆ ವಿನಾಯಿತಿ ನೀಡಬಹುದಾಗಿದೆ."

4. ನಿಯಮ 138(ಎ)ಗೆ ತಿದ್ದುಪಡಿ.–ಸದರಿ ನಿಯಮದ ನಿಯಮ 138(ಎ)ರ ಉಪನಿಯಮ (2)ನ್ನು ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು:–

"(2) ಒಂದು ವೇಳೆ, ನಿಯಮ 48ರ ಉಪನಿಯಮ (4)ರಲ್ಲಿ ನಿಗದಿಪಡಿಸಿದಂತೆ ಬೆಲೆಪಟ್ಟಿಯನ್ನು ನೀಡಲಾಗುತ್ತಿದ್ದಲ್ಲಿ, ಬೆಲೆಪಟ್ಟಿ ಉಲ್ಲೇಖ ಸಂಖ್ಯೆ (ಐಆರ್ಎನ್) ಹೊಂದಿದ ಕ್ಷಿಪ್ರ ಪ್ರತಿಕ್ರಿಯೆ ಕೋಡ್ ಅದರಲ್ಲಿ ಇದ್ದು, ಅಂತಹ ಬೆಲೆಪಟ್ಟಿಯ ಭೌತಿಕ ನಕಲನ್ನು ವಿದ್ಯುನ್ಮಾನದ ಮೂಲಕ ಯುಕ್ತ ಅಧಿಕಾರಿಯವರಿಗೆ ಪರಿಶೀಲನೆಗಾಗಿ ಒದಗಿಸಬಹುದಾಗಿದೆ."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

ಕೆ. ಸಾವಿತ್ರಮ್ಮ,

ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ [ವಾ.ತೆ–1]

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಐ/2020)
ಸಂಖ್ಯೆ.ಆಇ 05 ಸಿಎಸ್ಎಲ್ 2020, ಬೆಂಗಳೂರು,ದಿನಾಂಕ:27/11/2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ.ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.** – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಹತ್ತನೇ ತಿದ್ದುಪಡಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಈ ನಿಯಮಗಳು, 2020 ರ ಅಕ್ಟೋಬರ್ 15ನೇ ದಿನದಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. **ನಿಯಮ 46ರ ತಿದ್ದುಪಡಿ.–** ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ನಿಯಮ 46ರಲ್ಲಿ ಮೊದಲನೇ ಪರಂತುಕಕ್ಕೆ, ಕೆಳಕಂಡ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪರಂತು, ಆಯುಕ್ತರು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಅಧಿಸೂಚನೆ ಮೂಲಕ ಕೆಳಕಂಡವುಗಳನ್ನು ನಿರ್ದಿಷ್ಟಪಡಿಸಬಹುದು–

(i) ನೋಂದಾಯಿತ ವ್ಯಕ್ತಿಗಳ ಒಂದು ವರ್ಗವು, ಸರಕು ಅಥವಾ ಸೇವೆಗಳಿಗಾಗಿ ನಮೂದಿಸುವುದು ಅಗತ್ಯವಿರತಕ್ಕ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್‌ನ ಅಂಕಿಗಳ ಸಂಖ್ಯೆ; ಅಥವಾ

(ii) ಎಲ್ಲಾ ನೋಂದಾಯಿತ ತೆರಿಗೆಸಂದಾಯದಾರರಿಂದ, ನಿರ್ದಿಷ್ಟಪಡಿಸಿದ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್‌ನ ಅಂಕಿಗಳ ಸಂಖ್ಯೆ ನಮೂದಿಸುವುದು ಅಗತ್ಯವಿರತಕ್ಕ ಸರಕು ಅಥವಾ ಸೇವೆಗಳ ಪೂರೈಕೆಯ ಒಂದು ವರ್ಗ; ಮತ್ತು

(iii) ಸರಕು ಅಥವಾ ಸೇವೆಗಳಿಗಾಗಿ ಹಾರ್ಮೊನೈಸಡ್ ಸಿಸ್ಟಂ ಆಫ್ ನೋಮಿನಕ್ಲೇಚರ್ ಕೋಡ್‌ನ ಡಿಜಿಟ್‌ಗಳ ಸಂಖ್ಯೆಯನ್ನು ನಮೂದಿಸುವುದು ಅಗತ್ಯವಿರದ ನೋಂದಾಯಿತ ವ್ಯಕ್ತಿಗಳ ಒಂದು ವರ್ಗ:"

3. **ನಿಯಮ 67ಎ ರ ಪ್ರತಿಯೋಜನೆ.–** ಸದರಿ ನಿಯಮಗಳ 67ಎ ಗಾಗಿ, ಈ ಕೆಳಕಂಡ ನಿಯಮವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"**67ಎ. ಕಿರು ಸಂದೇಶ ಸೇವೆಯ (ಎಸ್.ಎಂ.ಎಸ್) ಸೌಲಭ್ಯದ ಮೂಲಕ ರಿಟರ್ನ್ ಅಥವಾ ಹೊರ ಮುಖ ಪೂರೈಕೆಗಳ ವಿವರಗಳನ್ನು ಒದಗಿಸುವ ವಿಧಾನ.–** ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಂದು ತೆರಿಗೆ ಅವಧಿಗಾಗಿ **ನಮೂನೆ ಜಿಎಸ್‌ಟಿಆರ್–3ಬಿಯ**ಲ್ಲಿ ಪ್ರಕರಣ 39ರ ಅಡಿಯಲ್ಲಿ ಶೂನ್ಯ ರಿಟರ್ನನ್ನು ಸಲ್ಲಿಸುವುದು ಅಥವಾ **ನಮೂನೆ ಜಿಎಸ್‌ಟಿಆರ್–1ರ**ಲ್ಲಿ ಪ್ರಕರಣ 37ರ ಅಡಿಯಲ್ಲಿ ಹೊರಮುಖ ಪೂರೈಕೆಗಳ ಶೂನ್ಯ ವಿವರಗಳನ್ನು ಅಥವಾ **ನಮೂನೆ ಜಿಎಸ್‌ಟಿ ಸಿಎಂಪಿ–08ರ**ಲ್ಲಿ ಶೂನ್ಯ ವಿವರಪತ್ರವನ್ನು ಸಲ್ಲಿಸುವುದು ಅಗತ್ಯವಿರತಕ್ಕ ಒಬ್ಬ ನೋಂದಾಯಿತ ವ್ಯಕ್ತಿಗೆ, ವಿದ್ಯುನ್ಮಾನ ಸಲ್ಲಿಸುವಿಕೆಗಾಗಿ ಯಾವುದೇ ಉಲ್ಲೇಖವು, ನೋಂದಾಯಿತ ಮೊಬೈಲ್ ಸಂಖ್ಯೆಯ ಬಳಕೆಯಿಂದ ಶೀಘ್ರ ಸಂದೇಶ ಸೇವೆಯ ಮೂಲಕ ಸದರಿ ರಿಟರ್ನು ಅಥವಾ ಹೊರಮುಖ ಪೂರೈಕೆಗಳ ವಿವರಗಳು ಅಥವಾ ವಿವರಪತ್ರದ ಸಲ್ಲಿಕೆಯನ್ನು ಒಳಗೊಳ್ಳತಕ್ಕದ್ದು ಮತ್ತು ಸದರಿ ರಿಟರ್ನು ಅಥವಾ ಹೊರಮುಖ ಪೂರೈಕೆಗಳ ವಿವರಗಳು ಅಥವಾ ವಿವರಪತ್ರವನ್ನು ನೋಂದಾಯಿತ ಮೊಬೈಲ್ ಸಂಖ್ಯೆಯಾಧಾರಿತ ಏಕ ಕಾಲದ ಸಂಕೇತಪದದ ಸೌಲಭ್ಯದ ಮೂಲಕ ಪರಿಶೀಲಿಸತಕ್ಕದ್ದು.

ವಿವರಣೆ.– ಈ ನಿಯಮದ ಉದ್ದೇಶಕ್ಕಾಗಿ, ಒಂದು ತೆರಿಗೆ ಅವಧಿಗಾಗಿ ಒಂದು ಶೂನ್ಯ ರಿಟರ್ನು ಅಥವಾ ಹೊರಮುಖ ಪೂರೈಕೆಗಳ ಶೂನ್ಯ ವಿವರ ಅಥವಾ ಶೂನ್ಯ ವಿವರಪತ್ರ ಎನ್ನತಕ್ಕದ್ದು ಪ್ರಕರಣ 39ರ ಅಡಿಯಲ್ಲಿ ಒಂದು ರಿಟರ್ನು ಅಥವಾ ಪ್ರಕರಣ 37ರ ಅಡಿಯಲ್ಲಿ ಹೊರಮುಖ ಪೂರೈಕೆಗಳ ಶೂನ್ಯ ವಿವರಗಳು ಅಥವಾ ಪ್ರಕರಣ 62ರ ಅಡಿಯಲ್ಲಿ ವಿವರಪತ್ರವಾಗಿರತಕ್ಕದ್ದು ಹಾಗೂ ಅದು ಸಂದರ್ಭಾನುಸಾರ, **ನಮೂನೆ ಜಿಎಸ್‌ಟಿಆರ್–3ಬಿ ಅಥವಾ ನಮೂನೆ ಜಿಎಸ್‌ಟಿಆರ್–1 ಅಥವಾ ನಮೂನೆ ಜಿಎಸ್‌ಟಿ ಸಿಎಂಪಿ–08** ಯಲ್ಲಿನ ಎಲ್ಲ ಕೋಷ್ಠಕಗಳಲ್ಲಿ ಶೂನ್ಯ ಅಥವಾ ಯಾವುದೇ ನಮೂದುಗಳಿಲ್ಲದಿರುವುದನ್ನು ಒಳಗೊಂಡಿರುವುದಾಗಿರತಕ್ಕದ್ದು.

4. **ನಿಯಮ 80ರ ತಿದ್ದುಪಡಿ.–** ಸದರಿ ನಿಯಮಗಳ 80ರಲ್ಲಿ, ಉಪ ನಿಯಮ (3)ರಲ್ಲಿನ ಪರಂತುಕಕ್ಕೆ, ಈ ಕೆಳಕಂಡ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪರಂತು 2018–2019 ಮತ್ತು 2019–2020ನೇ ಹಣಕಾಸು ವರ್ಷಕ್ಕಾಗಿ, ಆತನ ಸಮಗ್ರ ವಹಿವಾಟು ಐದು ಕೋಟಿ ರೂಪಾಯಿಗಳನ್ನು ಮೀರಿರುವ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಆತನ ಲೆಕ್ಕಪತ್ರಗಳನ್ನು, ಪ್ರಕರಣ 35ರ ಉಪಪ್ರಕರಣ (5)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಲೆಕ್ಕಪರಿಶೋಧಿಸಿಕೊಳ್ಳತಕ್ಕದ್ದು ಮತ್ತು ಅವನು, ಲೆಕ್ಕಪರಿಶೋಧಿತ ವಾರ್ಷಿಕ

ಲೆಕ್ಕಪತ್ರಗಳ ಮತ್ತು ಸರಿಹೊಂದಿಕೆಯ ವಿವರಪತ್ರದ ಒಂದು ಯುಕ್ತ ಧೃಢೀಕೃತ ಪ್ರತಿಯನ್ನು, **ನಮೂನೆ ಜಿಎಸ್‌ಟಿಆರ್–9ಸಿ** ಯಲ್ಲಿ ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ವಿದ್ಯುನ್ಮಾನ ರೀತಿಯಲ್ಲಿ ಒದಗಿಸತಕ್ಕದ್ದು."

5. ನಿಯಮ 138ಇ ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 138ಇ ರಲ್ಲಿ, ಮೂರನೇ ಪರಂತುಕದ ನಂತರ, 2020ನೇ ಮಾರ್ಚ್ 20ನೇ ದಿನದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

ಬಿ) ಹೂಡುವಳಿ ತೆರಿಗೆ ಜಮೆ ಈ ಕೆಳಗಿನ ಸನ್ನಿವೇಶಗಳಲ್ಲಿ ಲಭ್ಯವಿಲ್ಲವೆಂದು ಸೂಚಿಸಲಾಗುತ್ತದೆ:

i) ಸರಕು ಅಥವಾ ಸೇವೆಗಳ ಪೂರೈಕೆಗಾಗಿ ಸರಕು ಪಟ್ಟಿ ಅಥವಾ ಖರ್ಚು ಚೀಟಿ ಅಥವಾ ಕೆಜಿಎಸ್‌ಟಿ ಕಾಯ್ದೆ, 2017ರ ಪ್ರಕರಣ 16ರ ಉಪಪ್ರಕರಣ 4ರ ನಿಬಂಧನೆಗಳ ಪ್ರಕಾರ ಸ್ವೀಕರಿಸುವವರಿಗೆ ಹೂಡುವಳಿ ತೆರಿಗೆ ಜಮೆಗೆ ಅರ್ಹತೆಯಿಲ್ಲ.

ii) ಸರಕು ಪಟ್ಟಿ ಅಥವಾ ಖರ್ಚು ಚೀಟಿ ಸರಬರಾಜುದಾರರ(ಜಿಎಸ್‌ಟಿಎನ್)ಮತ್ತು ಸರಬರಾಜು ಮಾಡುವ ಸ್ಥಳ ಒಂದೇ ರಾಜ್ಯದಲ್ಲಿರುವಾಗ ಸ್ವೀಕರಿಸುವವರು ಮತ್ತೊಂದು ರಾಜ್ಯದಲ್ಲಿದ್ದರೆ.

ಆದಾಗ್ಯೂ, ತೆರಿಗೆ ಪಾವತಿದಾರರಿಗೆ ಹೂಡುವಳಿ ತೆರಿಗೆ ಜಮೆ ಲಭ್ಯವಿಲ್ಲದಿರುವ ಇತರೆ ಸನ್ನಿವೇಶಗಳು ಇರಬಹುದು ಮತ್ತು ಅದೇ ವ್ಯವಸ್ಥೆಯಿಂದ ಉತ್ಪತ್ತಿಯಾಗುವುದಿಲ್ಲ. ತೆರಿಗೆದಾರರು ತಮ್ಮ **ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ** ಅಂತಹ ಜಮೆಯನ್ನು ಸ್ವಯಂ ಮೌಲ್ಯಮಾಪನ ಮಾಡಬೇಕು ಮತ್ತು ಹಿಂದಿರುಗಿಸಬೇಕು.

ಬಿ) ಬಿ ಇಂದ ಬಿಗೆ–ವ್ಯವಹಾರದಿಂದ ವ್ಯವಹಾರಕ್ಕೆ

ಸಿ) ಐಎಸ್‌ಡಿ–ಹೂಡುವಳಿ ಸೇವಾ ವಿತರಕ

ಡಿ) ಐಎಮ್‌ಪಿಜಿ–ಸರಕುಗಳ ಆಮದು

ಇ) ಐಎಮ್‌ಪಿಜಿಎಸ್‌ಇಜೆಡ್– ಎಸ್‌ಇಜೆಡ್ ನಿಂದ ಸರಕುಗಳ ಆಮದು

3. **ನಮೂನೆ ಜಿಎಸ್‌ಟಿಆರ್–2ಬಿ**ಯು ಪೂರೈಕೆದಾರರು ಸಲ್ಲಿಸುವ ಎಲ್ಲಾ **ನಮೂನೆ ಜಿಎಸ್‌ಟಿಆರ್–1s,5s ಮತ್ತು 6s** ಗಳನ್ನು ಒಳಗೊಂಡಿರುತ್ತದೆ ಎಂದು ಗಮನಿಸಬಹುದು, ಸಾಮಾನ್ಯವಾಗಿ ಎರಡು ಪರಿಣಾಮಕಾರಿ **ಜಿಎಸ್‌ಟಿಆರ್–1ಅನ್ನು** ಸಲ್ಲಿಸುವ ದಿನಾಂಕಗಳ ನಡುವೆ ಅಥವಾ ಐಎಫ್‌ಎಫ್‌ಗಳನ್ನು ಸಜ್ಜುಗೊಳಿಸುವ ದಿನಾಂಕಗಳ ನಡುವೆ ಅನುಗುಣವಾದ ಸರಬರಾಜುದಾರರು ಆಯ್ಕೆ ಮಾಡಿದಂತೆ ಫೈಲಿಂಗ್ ಆಯ್ಕೆ(ಮಾಸಿಕ ಅಥವಾ ತೈಮಾಸಿಕ) ಸಂಬಂಧಿಸಿದ ಡೇಟಾವನ್ನು ಹೊರತೆಗೆಯಲಾದ ದಿನಾಂಕಗಳನ್ನು ಕೆಜಿಎಸ್ಟಿ ನಿಯಮಗಳಲ್ಲಿ ನಿರ್ದಿಷ್ಟ ಪಡಿಸಲಾಗಿದೆ ಮತ್ತು ಆನ್‌ಲೈನ್ ಪೋರ್ಟಲ್‌ನಲ್ಲಿನ "ವಿಕ್ಷಣ ಸಲಹಾ" ಟ್ಯಾಬ್ ಅಡಿಯಲ್ಲಿ ಸಹ ಲಭ್ಯವಿದೆ. ಉದಾಹರಣೆಗೆ, ಫೆಬ್ರವರಿ ತಿಂಗಳಿನ ನಮೂನೆ ಜಿಎಸ್‌ಟಿಆರ್–2ಬಿ ಫೆಬ್ರವರಿ 12ರಂದು 00:00 ಗಂಟೆಯಿಂದ ಮಾರ್ಚ್11ರ 23:59 ಗಂಟೆಗಳವರೆಗೆ ತಮ್ಮ ಜಿಎಸ್‌ಟಿಆರ್–1ಅನ್ನು ಮಾಸಿಕವಾಗಿ ಸಲ್ಲಿಸಲು ಆಯ್ಕೆ ಮಾಡುವ ಸರಬರಾಜುದಾರರು ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಒಳಗೊಂಡಿರುತ್ತದೆ.

4) ಇದು ವಿಶೇಷ ಆರ್ಥಿಕ ವಲಯಗಳ ಘಟಕಗಳು/ಡೆವಲಪರ್‌ಗಳಿಂದ ಆಮದಿನ ಡೇಟಾವನ್ನು ಒಳಗೊಂಡಂತೆ ಐಸ್ ಗೇಟ್ ವ್ಯವಸ್ತೆಯಿಂದ ಸರಕುಗಳ ಆಮದಿನ ಮಾಹಿತಿಯನ್ನು ಸಹ ಒಳಗೊಂಡಿದೆ.

5) ಸೇವೆಗಳ ಆಮದಿನ ಮೇಲೆ ಹಿಮ್ಮುಖ ವಿಧಿಸುವಿಕೆಯ ಜಮೆ ಈ ಹೇಳಿಕೆ ಭಾಗವಲ್ಲ ಮತ್ತು ತೆರಿಗೆದಾರರಿಂದ **ನಮೂನೆ ಜಿಎಸ್‌ಟಿಆರ್–3ಬಿ ಯ** ಕೋಷ್ಟಕದ 4(ಎ) (2) ನಲ್ಲಿ ನಮೂದಿಸುವುದನ್ನು ಮುಂದುವರಿಸಲಾಗುವುದು ಎಂದು ಗಮನಿಸಬಹುದು.

6) **ನಮೂನೆ ಜಿಎಸ್‌ಟಿಆರ್–2ಬಿ** ಸೃಜಿಸಿದ ದಿನಾಂಕದಂದು ಲಭ್ಯವಿರುವ ಐಟಿಸಿಯ ಸಾರಾಂಶವನ್ನು ಕೋಷ್ಟಕ 3 ಸೆರೆಹಿಡಿಯುತ್ತದೆ. ಇದನ್ನು ಈ ಕೆಳಕಂಡ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ:

ಎ) ಭಾಗ–ಎ **ನಮೂನೆ ಜಿಎಸ್‌ಟಿಆರ್–3ಬಿಯ** ಸಂಬಂಧಿತ ಕೋಷ್ಟಕಗಳಲ್ಲಿ ಪಡೆಯಬಹುದಾದ ಜಮೆ ಸಾರಾಂಶವನ್ನು ಸೆರೆಹಿಡಿಯುತ್ತದೆ.

ಬಿ) ಭಾಗ–ಬಿ, **ನಮೂನೆ ಜಿಎಸ್‌ಟಿಆರ್–3ಬಿಯ** ಸಂಬಂಧಿತ ಕೋಷ್ಟಕಗಳಲ್ಲಿ ಹಿಂದಿರುಗಿಸಬಹುದಾದ ಜಮೆ ಸಾರಾಂಶವನ್ನು ಸೆರೆಹಿಡಿಯುತ್ತದೆ.

7) **ನಮೂನೆ ಜಿಎಸ್‌ಟಿಆರ್–2ಬಿ** ಸೃಜಿಸಿದ ದಿನಾಂಕದಂತೆ ಲಭ್ಯವಿಲ್ಲದ ಐಟಿಸಿಯ ಸಾರಾಂಶವನ್ನು ಕೋಷ್ಟಕ 4ರಲ್ಲಿ ಸೆರೆಹಿಡಿಯುತ್ತದೆ. ಈ ಕೋಷ್ಟಕದಲ್ಲಿ ಲಭ್ಯವಿರುವ ಜಮೆಯನ್ನು **ನಮೂನೆ ಜಿಎಸ್‌ಟಿಆರ್–3ಬಿ** ಯಲ್ಲಿ ಜಮೆ ಆಗಿ ಪಡೆಯಲಾಗುವುದಿಲ್ಲ.ಆದಾಗ್ಯೂ ಹಿಮ್ಮುಖ ವಿಧಿಸುವಿಕೆ ಆಧಾರದ ಮೇಲೆ ತೆರಿಗೆ ಪಾವತಿಸುವ ಹೊಣೆಗಾರಿಕೆ ಮತ್ತು ಜಮೆ ಚೀಟಿಗಳನ್ನು ಸ್ವೀಕರಿಸಿದ ಮೇಲೆ ಜಮೆ ಹಿಂದಿರುಗಿಸುವ ಹೊಣೆಗಾರಿಕೆ ಅಂತಹ ಸರಬರಾಜುಗಳಿಗೆ ಮುಂದುವರಿಯುತ್ತದೆ.

8) ತೆರಿಗೆದಾರರು **ನಮೂನೆ ಜಿಎಸ್‌ಟಿಆರ್–2ಬಿ** ಯಲ್ಲಿ ಸೃಜಿಸುವ ದತ್ತಾಂಶವನ್ನು ತಮ್ಮದೇ ಆದ ದಾಖಲೆಗಳು ಮತ್ತು ಖಾತೆಗಳ ಪುಸ್ತಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ತೆರಿಗೆ ಪಾವತಿದಾರರು ಈ ಕೆಳಗಿನಂತೆ ಖಚಿತ ಪಡಿಸಿಕೊಳ್ಳಬೇಕು.

ಎ) ಯಾವುದೇ ಸಂದರ್ಭಗಳಲ್ಲಿ ಯಾವುದೇ ದಾಖಲೆಗೆ ಎರಡು ಬಾರಿ ಯಾವುದೇ ಜಮೆ ತೆಗೆದುಕೊಳ್ಳುವಂತಿಲ್ಲ.

ಬಿ) ಅಗತ್ಯವಿರುವ ಕಡೆಗಳಲ್ಲಿ ಜಮೆಯನ್ನು ಹಿಂದಿರುಗಿಸುವುದು

ಸಿ) ಹಿಮ್ಮುಖ ವಿಧಿಸುವಿಕೆ ಆಧಾರದ ಮೇಲೆ ತೆರಿಗೆ ಪಾವತಿಸುವುದು.

9) ಬೆಲೆಪಟ್ಟಿಗಳು, ಜಮೆ ಚೀಟಿಗಳು ಮತ್ತು ಖರ್ಚು ಚೀಟಿಗಳು, ಬಿಲ್ ಆಫ್ ಎಂಟ್ರಿಗಳು ಇತ್ಯಾದಿಗಳ ವಿವರಗಳನ್ನು ಸಹಾ ಆನ್ ಲೈನ್ ಮತ್ತು ಡೌನ್‌ಲೋಡ್ ಸೌಲಭ್ಯದ ಮೂಲಕ ಲಭ್ಯವಾಗುವಂತೆ ಮಾಡಲಾಗುತ್ತದೆ.

10) ಅನ್ವಯವಾಗುವ ತೆರಿಗೆದರದ ಶೇಕಡವಾರು ಪ್ರಮಾಣವನ್ನು ಸರ್ಕಾರವು ತಿಳಿಸುವಂತಹ ಸನ್ನಿವೇಶಗಳು ಇರಬಹುದು.ಅಂಥಹ ದರ ಅನ್ವಯವಾಗುವ ಬೆಲೆಪಟ್ಟಿಗಳು/ದಾಖಲೆಗಳಿಗಾಗಿ ಪ್ರತ್ಯೇಕ ಕಾಲಮ್ ಒದಗಿಸಲಾಗುವುದು.

11) ಕೋಷ್ಠಕವಾರು ಸೂಚನೆಗಳು:

ಕೋಷ್ಠಕ ಸಂಖ್ಯೆ. ಮತ್ತು ಶಿರೋನಾಮೆ	ಸೂಚನೆಗಳು
ಕೋಷ್ಠಕ 3 ಭಾಗ–ಎ ವಿಭಾಗ–1 ಇತರೆ ಎಲ್ಲಾ ಹೂಡುವಳಿ ತೆರಿಗೆ ಜಮೆ– ಇತರೆ ಎಲ್ಲಾ ಹೂಡುವಳಿ ತೆರಿಗೆ ಜಮೆ –ಹಿಮ್ಮುಖವಿಧಿಸುವಿಕೆಯನ್ನು ಆಕರ್ಷಿಸುವ ಪೂರೈಕೆಯನ್ನು ಹೊರತುಪಡಿಸಿದಂತೆ.ನೋಂದಾಯಿತ ವ್ಯಕ್ತಿಗಳಿಂದ ಸ್ವೀಕರಿಸಿದ ಪೂರೈಕೆಗಳು	i) ಈ ವಿಭಾಗವು (ಹಿಮ್ಮುಖ ವಿಧಿಸುವಿಕೆ ಆಧಾರದ ಮೇಲೆ ತೆರಿಗೆ ಪಾವತಿಸಬೇಕಾದವುಗಳನ್ನು ಹೊರತು ಪಡಿಸಿ), ನಿಮ್ಮ ಪೂರೈಕೆದಾರರು ತಮ್ಮ ನಮೂನೆ **ಜಿಎಸ್‌ಟಿಆರ್–1 ಮತ್ತು 5** ರಲ್ಲಿ ಘೋಷಿಸಿ ಸಲ್ಲಿಸಲಾಗಿರುವ ಸರಬರಾಜುಗಳ ವಿವರಗಳನ್ನು ಒಳಗೊಂಡಿದೆ. ii) ಈ ಕೋಷ್ಠಕವು ಹೂಡುವಳಿ ತೆರಿಗೆ ಜಮೆ ಲಭ್ಯವಿರುವ ಸರಬರಾಜುಗಳನ್ನು ಮಾತ್ರ ತೋರಿಸುತ್ತದೆ. iii) ಬಿ ರಿಂದ ಬಿಗೆ–ಬೆಲೆಪಟ್ಟಿಗಳು ಮತ್ತು.ಬಿ ರಿಂದ ಬಿಗೆ–ಖರ್ಚು ಚೀಟಿಗಳಲ್ಲಿನ ತಿದ್ದುಪಡಿಗಳಿಂದಾಗಿ, ಉದ್ಭವಿಸಬಹುದು ಋಣಾತ್ಮಕ ಜಮೆ ಏನಾದರೂ ಇದ್ದಲ್ಲಿ, **ನಮೂನೆ ಜಿಎಸ್‌ಟಿಆರ್–3ಬಿ**ಯ ಕೋಷ್ಟಕದ 4(ಬಿ) (2) ನಲ್ಲಿ ಜಮೆಯನ್ನು ಹಿಂದಿರುಗಿಸತಕ್ಕದ್ದು.
ಕೋಷ್ಠಕ 3 ಭಾಗ–ಎ ವಿಭಾಗ–II ಹೂಡುವಳಿ ಸೇವೆ ಹಂಚಿಕೆದಾರನಿಂದ ಬಂದ ಒಳಮುಖ ಪೂರೈಕೆಗಳು	i) ಈ ವಿಭಾಗವು ಹೂಡುವಳಿ ಸೇವೆ ಹಂಚಿಕೆದಾರನಿಂದ **ನಮೂನೆ ಜಿಎಸ್‌ಟಿಆರ್–6** ರಲ್ಲಿ ಘೋಷಿಸಿ ಸಲ್ಲಿಸಲಾಗಿರುವ ಸರಬರಾಜು ವಿವರಗಳನ್ನು ಒಳಗೊಂಡಿರುತ್ತದೆ. ii) ಈ ಕೋಷ್ಟಕವು ಐಟಿಸಿ ಲಭ್ಯವಿರುವ ಸರಬರಾಜುಗಳನ್ನು ಮಾತ್ರ ತೋರಿಸುತ್ತದೆ. iii) ಐಎಸ್‌ಡಿ ತಿದ್ದುಪಡಿಗಳು– ಬೆಲೆಪಟ್ಟಿಗಳ ತಿದ್ದುಪಡಿಗಳಿಂದಾಗಿ ಉದ್ಭವಿಸಬಹುದಾದ ಋಣಾತ್ಮಕ ಜಮೆ ಏನಾದರೂ ಇದ್ದಲ್ಲಿ.ಅಂತಹ ಜಮೆಯನ್ನು **ನಮೂನೆ ಜಿಎಸ್‌ಟಿಆರ್–3ಬಿ**ಯ ಕೋಷ್ಟಕದ 4(ಬಿ) (2) ನಲ್ಲಿ ಹಿಂದಿರುಗಿಸತಕ್ಕದ್ದು.
ಕೋಷ್ಠಕ 3 ಭಾಗ–ಎ ವಿಭಾಗ–III ಹಿಮ್ಮುಖವಿಧಿಸುವಿಕೆಗೆ ಒಳಪಡುವ ಒಳಮುಖ ಪೂರೈಕೆಗಳು	i) ಈ ವಿಭಾಗವು ನಿಮ್ಮ ಪೂರೈಕೆದಾರರು ತಮ್ಮ **ನಮೂನೆ ಜಿಎಸ್‌ಟಿಆರ್–1**ರಲ್ಲಿ ಘೋಷಿಸಿ ಸಲ್ಲಿಸಲಾಗಿರುವ ಹಿಮ್ಮುಖವಿಧಿಸುವಿಕೆ ಆಧಾರದ ಮೇಲೆ ತೆರಿಗೆಯನ್ನು ಪಾವತಿಸಬೇಕೆಂಬ ಸರಬರಾಜುಗಳ ವಿವರಗಳನ್ನು ಒಳಗೊಂಡಿದೆ. ii) ಈ ಕೋಷ್ಟಕವು ಐಟಿಸಿ ಲಭ್ಯವಿರುವ ಸರಬರಾಜುಗಳನ್ನು ಮಾತ್ರ ಒದಗಿಸುತ್ತದೆ.

	iii) ತೆರಿಗೆ ಪಾವತಿಸಲು ಈ ಸರಬರಾಜುಗಳನ್ನು ನಮೂನೆ ಜಿಎಸ್‌ಟಿಆರ್–3ಬಿಯ ಕೋಷ್ಟಕ 3.1(ಡಿ) ನಲ್ಲಿ ಘೋಷಿಸಬೇಕಾಗಿದ್ದು, ತೆರಿಗೆ ಪಾವತಿಸುವಾಗ **ನಮೂನೆ ಜಿಎಸ್‌ಟಿಆರ್–3ಬಿಯ** ಕೋಷ್ಟಕ 4(ಎ)(3)ಅಡಿಯಲ್ಲಿ ಜಮೆಯನ್ನು ಪಡೆಯಬಹುದು.
ಕೋಷ್ಟಕ 3 ಭಾಗ–ಎ ವಿಭಾಗ–IV ಆಮದು ಸರಕುಗಳು	i) ಈ ವಿಭಾಗವು ಸಾಗರೋತ್ತರ ಮತ್ತು ಎಸ್ ಇ ಜೆಡ್ ಘಟಕಗಳು/ಡೆವಲೆಪರ್‌ಗಳಿಂದ ಸರಕುಗಳ ಆಮದಿನ ಮೇಲೆ ನೀವು ಪಾವತಿಸಿದ ಐಜಿಎಸ್‌ಟಿ ವಿವರಗಳನ್ನು ಬಿಲ್ ಆಫ್ ಎಂಟ್ರಿ ಮತ್ತು ಅದರ ತಿದ್ದುಪಡಿಯ ಕುರಿತು ಒದಗಿಸುತ್ತದೆ.ಈ ವಿವರಗಳನ್ನು ಐಸ್‌ಗೇಟ್ ವ್ಯವಸ್ಥೆಯಿಂದ ನೈಜ ಸಮಯದ ಆಧಾರದ ಮೇಲೆ ನವೀಕರಿಸಲಾಗುತ್ತದೆ. ii) **ಜಿಎಸ್‌ಟಿಆರ್–2ಬಿ**ಯ ನಮೂನೆ ತಯಾರಿಸಲಾಗುತ್ತಿರುವ ತಿಂಗಳಲ್ಲಿ ನೀವು (ಜಿಎಸ್‌ಟಿನ್) ಮಾಡಿದ ಆಮದುಗಳ ಡೇಟಾವನ್ನು ಈ ಕೋಷ್ಟಕವು ಒಳಗೊಂಡಿರುತ್ತದೆ. iii) ಸ್ವೀಕರಿಸುವವರು ಹೂಡುವಳಿ ತೆರಿಗೆ ಜಮೆ ತೆಗೆದುಕೊಳ್ಳಲು ಐಸ್‌ಗೇಟ್ ಉಲ್ಲೇಖಿತ ದಿನಾಂಕವು ಅರ್ಹರಾಗಿರುವ ದಿನಾಂಕವಾಗಿದೆ. iv) ಬಿಲ್ ಆಫ್ ಎಂಟ್ರಿ ತಿದ್ದುಪಡಿ ಮಾಡಿದ್ದರೆ, ಆ ವಿವರಗಳನ್ನು ಈ ಕೋಷ್ಟಕವು ಒದಗಿಸುತ್ತದೆ. v) ಐಸ್‌ಗೇಟ್‌ನಿಂದ ಪಡೆದ ಡೇಟಾದ ಆಧಾರದ ಮೇಲೆ ಕೋಷ್ಟಕಗಳಲ್ಲಿ ಮಾಹಿತಿಯನ್ನು ಒದಗಿಸಲಾಗಿದೆ.ಕೊರಿಯರ್ ಆಮದಿನಂತಹ ಕೆಲವು ಆಮದುಗಳ ಮಾಹಿತಿ ಲಭ್ಯವಿಲ್ಲದಿರಬಹುದು.

ಕೋಷ್ಟಕ 3 ಭಾಗ–ಬಿ ವಿಭಾಗ–I ಇತರೆಗಳು	i) ಈ ವಿಭಾಗವು ಸ್ವೀಕರಿಸಿದ ಜಮೆ ಚೀಟಿಗಳ ವಿವರಗಳನ್ನು ಮತ್ತು ಅದರ ತಿದ್ದುಪಡಿಯನ್ನು ನಿಮ್ಮ ಪೂರೈಕೆದಾರರು ತಮ್ಮ **ಜಿಎಸ್‌ಟಿಆರ್–1 ಮತ್ತು 5** ರಲ್ಲಿ ಘೋಷಿಸಿರುವುದನ್ನು ಒಳಗೊಂಡಿರುತ್ತದೆ. ii) ಅಂತಹ ಜಮೆ **ನಮೂನೆ ಜಿಎಸ್‌ಟಿಆರ್–3ಬಿಯ** ಟೇಬಲ್ 4(ಬಿ) (2)ಅಡಿಯಲ್ಲಿ ಹಿಂತಿರುಗಿಸಲಾಗುತ್ತದೆ., ಉದಾಹರಣೆಗೆ, ಈ ಮೌಲ್ಯವು ಋಣಾತ್ಮಕವಾಗಿದ್ದರೆ ಅಂತಹ ಸಂದರ್ಭದಲ್ಲಿ ಹಿಂದಿನ ನಿದರ್ಶನಗೆ ಒಳಪಟ್ಟು ಜಮೆಯನ್ನು ಮರುಪಡೆಯಬಹುದಾಗಿರುತ್ತದೆ,
ಕೋಷ್ಟಕ 4 ಭಾಗ–ಎ ವಿಭಾಗ–I ಇತರೆ ಎಲ್ಲಾ ಹೂಡುವಳಿ ತೆರಿಗೆ ಜಮೆ – ಹಿಮ್ಮುಖ ವಿಧಿಸುವಿಕೆಯನ್ನು ಹೊರತುಪಡಿಸಿ ನೋಂದಾಯಿತ ವ್ಯಕ್ತಿಗಳಿಂದ ಪೂರೈಕೆ	i) ಈ ವಿಭಾಗವು ಸರಬರಾಜುಗಳ ವಿವರಗಳನ್ನು ಒಳಗೊಂಡಿದೆ (ಹಿಮ್ಮುಖ ವಿಧಿಸುವಿಕೆಯ ಮೇಲೆ ಪಾವತಿಸಿರುವ ತೆರಿಗೆಯನ್ನು ಹೊರತು ಪಡಿಸಿ), ಇವುಗಳನ್ನು ನಿಮ್ಮ ಪೂರೈಕೆದಾರರು ತಮ್ಮ **ನಮೂನೆ ಜಿಎಸ್‌ಟಿಆರ್–1 ಮತ್ತು 5** ರಲ್ಲಿ ಘೋಷಿಸಿ ಸಲ್ಲಿಸಿರುವುದು. ii) ಐಟಿಸಿ ಲಭ್ಯವಿಲ್ಲದ ಸರಬರಾಜುಗಳನ್ನು ಮಾತ್ರ ಈ ಕೋಷ್ಟಕವು ಒದಗಿಸುತ್ತದೆ. iii) ಇದು ಮಾಹಿತಿಗಾಗಿ ಮಾತ್ರ ಮತ್ತು ಅಂತಹ ಜಮೆಯನ್ನು **ಜಿಎಸ್‌ಟಿಆರ್–3ಬಿ** ಯಲ್ಲಿ ತೆಗೆದುಕೊಳ್ಳಲಾಗುವುದಿಲ್ಲ.
ಕೋಷ್ಟಕ 4 ಭಾಗ–ಎ ವಿಭಾಗ–II ಐಎಸ್‌ಡಿ ಯಿಂದ ಆಂತರಿಕ ಸರಬರಾಜು	i) ಈ ವಿಭಾಗವು ಸರಬರಾಜುಗಳ ಹೂಡುವಳಿ ಸೇವೆ ಹಂಚಿಕೆದಾರರು ತಮ್ಮ **ನಮೂನೆ ಜಿಎಸ್‌ಟಿಆರ್–6** ರಲ್ಲಿ ಘೋಷಿಸಿರುವ ಮತ್ತು ಸಲ್ಲಿಸಿರುವ ವಿವರಗಳನ್ನು ಒಳಗೊಂಡಿರುತ್ತದೆ. ii) ಐಟಿಸಿ ಲಭ್ಯವಿಲ್ಲದ ಸರಬರಾಜುಗಳನ್ನು ಮಾತ್ರ ಈ ಕೋಷ್ಟಕವು ಒದಗಿಸುತ್ತದೆ. iii) ಇದು ಮಾಹಿತಿಗಾಗಿ ಮಾತ್ರ ಮತ್ತು ಅಂತಹ ಜಮೆಯನ್ನು **ನಮೂನೆ ಜಿಎಸ್‌ಟಿಆರ್–3ಬಿ** ಯಲ್ಲಿ ತೆಗೆದುಕೊಳ್ಳಲಾಗುವುದಿಲ್ಲ.
ಕೋಷ್ಟಕ 4 ಭಾಗ–ಎ ವಿಭಾಗ–III ಹಿಮ್ಮುಖ ವಿಧಿಸುವಿಕೆಗೆ ಒಳಪಡುವ ಒಳಮುಖ ಸರಬರಾಜುಗಳು	i) ಈ ವಿಭಾಗವು ಹಿಮ್ಮುಖ ವಿಧಿಸುವಿಕೆಗೆ ಜವಾಬ್ದಾರರಾಗಿರುವ ಸರಬರಾಜುಗಳ ನಿಮ್ಮ ಸರಬರಾಜುದಾರರು ತಮ್ಮ **ನಮೂನೆ ಜಿಎಸ್‌ಟಿಆರ್–1** ರಲ್ಲಿ ಘೋಷಿಸಿರುವ ಮತ್ತು ಸಲ್ಲಿಸಿರುವ ವಿವರಗಳನ್ನು ಒಳಗೊಂಡಿರುತ್ತದೆ. ii) ಐಟಿಸಿ ಲಭ್ಯವಿಲ್ಲದ ಸರಬರಾಜುಗಳನ್ನು

	ಮಾತ್ರ ಈ ಕೋಷ್ಟಕವು ಒದಗಿಸುತ್ತದೆ. iii) ತೆರಿಗೆ ಪಾವತಿಸಲು ಈ ಸರಬರಾಜುಗಳನ್ನು **ನಮೂನೆ ಜಿಎಸ್‌ಟಿಆರ್–3ಬಿಯ** ಕೋಷ್ಟಕ 3.1(ಡಿ) ನಲ್ಲಿ ಘೋಷಿಸಲಾಗುತ್ತದೆ. ಆದಾಗ್ಯೂ,ಅಂತಹ ಸರಬರಾಜುಗಳಲ್ಲಿ ಜಮೆ ಲಭ್ಯವಿರುವುದಿಲ್ಲ.
ಕೋಷ್ಟಕ 4 ಭಾಗ–ಬಿ ವಿಭಾಗ–I ಇತರೆ	i) ಈ ವಿಭಾಗವು ನಿಮ್ಮ ಪೂರೈಕೆದಾರರು ತಮ್ಮ **ಜಿಎಸ್‌ಟಿಆರ್–1 ಮತ್ತು 5** ರಲ್ಲಿ ಘೋಷಿಸಿದ ಮತ್ತು ಸಲ್ಲಿಸಿದ ಜಮೆ ಚೀಟಿಗಳು ಮತ್ತು ಅದರ ತಿದ್ದುಪಡಿಯ ವಿವರಗಳನ್ನು ಒಳಗೊಂಡಿದೆ. ii) ಐಟಿಸಿ ಲಭ್ಯವಿಲ್ಲದ ಜಮೆ ಚೀಟಿಗಳನ್ನು ಮಾತ್ರ ಈ ಕೋಷ್ಟಕವು ಒದಗಿಸುತ್ತದೆ. iii) ಅಂತಹ ಕ್ರೆಡಿಟ್ ಅನ್ನು **ನಮೂನೆ ಜಿಎಸ್‌ಟಿಆರ್–3ಬಿಯ** ಕೋಷ್ಟಕ 4(ಬಿ) (2) ಅಡಿಯಲ್ಲಿ ಹಿಂದಿರುಗಿಸಲಾಗುತ್ತದೆ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಕೆ /2020)
ಸಂಖ್ಯೆ.ಆಇ 05 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ:01.03.2021

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.** – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಈ ನಿಯಮಗಳು, 2020ರ ಡಿಸೆಂಬರ್, 22ನೇ ದಿನದಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. ನಿಯಮ 8ರ ತಿದ್ದುಪಡಿ.– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು 2017ರ (ಇವುಗಳನ್ನು ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 8ರಲ್ಲಿ,ಉಪನಿಯಮ (4ಎ)ಗಾಗಿ, ನಂತರ ಅಧಿಸೂಚಿಸುವ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಕಂಡ ಉಪನಿಯಮವನ್ನು ಪ್ರತಿಯೋಜಿಸತಕ್ಕದ್ದು ಅಂದರೆ:–

"(4ಎ) ನಿಯಮ (4)ರ ಅಡಿಯಲ್ಲಿ ಸಲ್ಲಿಸಲಾದ ಪ್ರತಿಯೊಂದು ಅರ್ಜಿಯು, ಈ ಕೆಳಗಿನಂತೆ ಅನುಸರಿಸುವುದು,–

(ಎ) ಒಂದು ವೇಳೆ ಆಧಾರ ಸಂಖ್ಯೆಯ ಅಧಿದೃಢೀಕರಣಕ್ಕಾಗಿ ಆಯ್ಕೆಯನ್ನು ಮಾಡಿಕೊಂಡಿದ್ದರೆ, ಪ್ರಕರಣ 25 ರ ಉಪ ಪ್ರಕರಣ (6ಡಿ) ಅಡಿಯಲ್ಲಿ ವಿನಾಯಿತಿಗೊಂಡಿರುವುದನ್ನು ಹೊರತುಪಡಿಸಿದಂತೆ ಬಯೋಮೆಟ್ರಿಕ್ ಆಧಾರಿತ ಆಧಾರ ಅಧಿದೃಢೀಕರಣ ಮತ್ತು ಛಾಯಾಚಿತ್ರ ತೆಗೆದುಕೊಳ್ಳುವುದು; ಅಥವಾ

(ಬಿ) ಒಂದು ವೇಳೆ ಆಧಾರ ಸಂಖ್ಯೆಯ ಅಧಿದೃಢೀಕರಣಕ್ಕಾಗಿ ಆಯ್ಕೆಯನ್ನು ಮಾಡಿಕೊಂಡಿರದಿದ್ದರೆ, ಪ್ರಕರಣ 25 ರ ಉಪ ಪ್ರಕರಣ (6ಡಿ) ಅಡಿಯಲ್ಲಿ ವಿನಾಯಿತಿಗೊಂಡಿರುವುದನ್ನು ಹೊರತುಪಡಿಸಿದಂತೆ ಬಯೋಮೆಟ್ರಿಕ್ ಮಾಹಿತಿ, ಛಾಯಾಚಿತ್ರವನ್ನು ತೆಗೆದುಕೊಳ್ಳುವುದು ಹಾಗೂ ಅಧಿಸೂಚಿಸಿದ ಅಂಥ ಇತರೇ ಕೆವೈಸಿ ದಸ್ತಾವೇಜುಗಳನ್ನು ಪರಿಶೀಲಿಸುವುದು,',

ಅರ್ಜಿದಾರನು ಒಬ್ಬ ವ್ಯಕ್ತಿಯಾಗಿದ್ದಲ್ಲಿ ಅಥವಾ ಅರ್ಜಿದಾರನು ಒಬ್ಬ ವ್ಯಕ್ತಿಯಾಗಿರದಿದ್ದಲ್ಲಿ, ಪ್ರಕರಣ 25 ಉಪಪ್ರಕರಣ (6ಸಿ) ಅಡಿಯಲ್ಲಿ ಅಧಿಸೂಚಿಸಿರುವಂತೆ ಆ ಅರ್ಜಿದಾರನಿಗೆ ಸಂಬಂಧಿಸಿದ ಅಂಥ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಈ ಉಪನಿಯಮದ ಉದ್ದೇಶಕ್ಕಾಗಿ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದಲ್ಲಿ ನಮೂನೆ ಜಿಎಸ್‌ಟಿ ಆರ್‌ಇಜಿ–01ರಲ್ಲಿನ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಲಾದ ದಸ್ತಾವೇಜುಗಳ ಮೂಲ ಪ್ರತಿಯ ಪರಿಶೀಲನೆಯೊಂದಿಗೆ ಹಾಗೂ ಅರ್ಜಿಯು ಈ ಉಪನಿಯಮದ ಅಡಿಯಲ್ಲಿ ತಿಳಿಸಲಾದ ಪ್ರಕ್ರಿಯೆಯು ಪೂರ್ಣಗೊಂಡ ನಂತರವೇ ಅರ್ಜಿಯು ಪೂರ್ಣಗೊಂಡಿದೆ ಎಂದು ಪರಿಭಾವಿಸತಕ್ಕದ್ದು.".

3. ನಿಯಮ 9ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 9ರಲ್ಲಿ;–

(ಎ) ಉಪ ನಿಯಮ (1)ರಲ್ಲಿ;–

(i) "ಮೂರು" ಪದಗಳಿಗಾಗಿ, "ಏಳು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಪರಂತುಕಕ್ಕಾಗಿ, ಈ ಕೆಳಕಂಡ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:

ಪರಂತು,

(ಎ) ಪ್ರಕರಣ 25ರ ಉಪ ಪ್ರಕರಣ (6ಡಿ) ಅಡಿಯಲ್ಲಿ ಅಧಿಸೂಚಿಸಿದ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಒಬ್ಬ ವ್ಯಕ್ತಿಯು ನಿಯಮ 8ರ ಉಪನಿಯಮ (4ಎ)ಯಲ್ಲಿ ನಿರ್ದಿಷ್ಟಪಡಿಸಿದಂತೆ, ಆಧಾರ ಸಂಖ್ಯೆ ಅಧಿದೃಢೀಕರಣಕ್ಕೆ ಒಳಗೊಳ್ಳಲು ವಿಫಲನಾದಲ್ಲಿ ಅಥವಾ ಆಧಾರ ಸಂಖ್ಯೆ ಅಧಿದೃಢೀಕರಣದ ಆಯ್ಕೆಯನ್ನು ಮಾಡಿಕೊಳ್ಳದಿದ್ದಲ್ಲಿ; ಅಥವಾ

(ಬಿ) ಆಯುಕ್ತರಿಂದ ಪ್ರಾಧಿಕೃತಗೊಂಡ, ಸಹಾಯಕ ಆಯುಕ್ತನ ಶ್ರೇಣಿಗಿಂತ ಕಡಿಮೆಯಿರದ ಒಬ್ಬ ಅಧಿಕಾರಿಯ ಪೂರ್ವ ಮಂಜುರಾತಿಯೊಂದಿಗೆ, ಯುಕ್ತ ಅಧಿಕಾರಿಯು, ವ್ಯವಹಾರ ಸ್ಥಳದ ಭೌತಿಕ ಪರಿಶೀಲನೆಯನ್ನು ನಡೆಸುವುದು ಅಗತ್ಯವಾಗಿರುವಲ್ಲಿ,

ನಿಯಮ 25ರ ಅಡಿಯಲ್ಲಿ ಉಪಬಂದಿಸಿದ ವಿಧಾನದಲ್ಲಿ, ಸದರಿ ವ್ಯಕ್ತಿಯ ಸಮಕ್ಷಮದಲ್ಲಿ ಯುಕ್ತ ಅಧಿಕಾರಿಯು ಭಾವಿಸಿದಂತೆ ವ್ಯವಹಾರ ಸ್ಥಳದ ಭೌತಿಕವಾಗಿ ಪರಿಶೀಲಿಸಿ ಹಾಗೂ ಅಂಥ ದಸ್ತಾವೇಜುಗಳ ಪರಿಶೀಲನೆಯ ನಂತರ ಅರ್ಜಿ ಸಲ್ಲಿಸಿದ ಮೂವತ್ತು ದಿನಗಳ ಒಳಗಾಗಿ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು.";

(ಬಿ) ಉಪ ನಿಯಮ (2)ರಲ್ಲಿ;–

(i) "ಮೂರು" ಪದಗಳಿಗಾಗಿ, "ಏಳು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಪರಂತುಕಕ್ಕಾಗಿ, ಕೆಳಕಂಡ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:

"ಪರಂತು,

(ಎ) ಪ್ರಕರಣ 25ರ ಉಪ ಪ್ರಕರಣ (6ಡಿ) ಅಡಿಯಲ್ಲಿ ಅಧಿಸೂಚಿಸಿದ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿದಂತೆ, ಒಬ್ಬ ವ್ಯಕ್ತಿಯು ನಿಯಮ 8ರ ಉಪನಿಯಮ (4ಎ)ಯಲ್ಲಿ ನಿರ್ದಿಷ್ಟಪಡಿಸಿದಂತೆ, ಆಧಾರ ಸಂಖ್ಯೆ ಅಧಿದೃಢೀಕರಣಕ್ಕೆ ಒಳಗೊಳ್ಳಲು ವಿಫಲನಾದಲ್ಲಿ ಅಥವಾ ಆಧಾರ ಸಂಖ್ಯೆ ಅಧಿದೃಢೀಕರಣದ ಆಯ್ಕೆಯನ್ನು ಮಾಡಿಕೊಳ್ಳದಿದ್ದಲ್ಲಿ; ಅಥವಾ

(ಬಿ) ಆಯುಕ್ತರಿಂದ ಪ್ರಾಧಿಕೃತಗೊಂಡ, ಸಹಾಯಕ ಆಯುಕ್ತನ ಶ್ರೇಣಿಗಿಂತ ಕಡಿಮೆಯಿರದ ಒಬ್ಬ ಅಧಿಕಾರಿಯ ಪೂರ್ವ ಮಂಜುರಾತಿಯೊಂದಿಗೆ, ಯುಕ್ತ ಅಧಿಕಾರಿಯು, ವ್ಯವಹಾರ ಸ್ಥಳದ ಭೌತಿಕ ಪರಿಶೀಲನೆಯನ್ನು ನಡೆಸವುದು ಅಗತ್ಯವಾಗಿರುವಲ್ಲಿ,

ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿನಗಳು ಮೀರದಂತೆ, ನಮೂನೆ ಜಿಎಸ್‌ಟಿ ಆರ್‌ಇಜಿ–03ಯಲ್ಲಿ ಒಂದು ಸೂಚನಾ ಪತ್ರವನ್ನು ನೀಡಬಹುದು.";

(ಸಿ) ಉಪ ನಿಯಮ (5)ಕ್ಕಾಗಿ, ಈ ಕೆಳಕಂಡ ಉಪ ನಿಯಮವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ ;–

"(5) ಯುಕ್ತ ಅಧಿಕಾರಿಯು ಯಾವುದೇ ಕ್ರಮವನ್ನು ಕೈಗೊಳ್ಳಲು ವಿಫಲನಾದ್ದಲ್ಲಿ,–

(ಎ) ಉಪ ನಿಯಮ (1)ರ ಪರಂತುಕದ ಅಡಿಯಲ್ಲಿ ವ್ಯಾಪ್ತವಾಗಿರದ ವ್ಯಕ್ತಿಯ ಪ್ರಕರಣದಲ್ಲಿ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಏಳು ಕೆಲಸದ ನಿರತ ದಿನಗಳ ಅವಧಿಯ ಒಳಗಾಗಿ; ಅಥವಾ

(ಬಿ) ಉಪ ನಿಯಮ (1)ರ ಪರಂತುಕದ ಅಡಿಯಲ್ಲಿ ವ್ಯಾಪ್ತವಾಗಿರುವ ವ್ಯಕ್ತಿಯ ಪ್ರಕರಣದಲ್ಲಿ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ; ಅಥವಾ

(ಸಿ) ಉಪ ನಿಯಮ (2)ರ ಅಡಿಯಲ್ಲಿ ಅರ್ಜಿದಾರನಿಂದ ಒದಗಿಸಲಾದ ಸ್ಪಷ್ಟೀಕರಣ, ಮಾಹಿತಿ ಅಥವಾ ದಸ್ತಾವೇಜುಗಳನ್ನು ಸ್ವೀಕರಿಸಿದ ದಿನಾಂಕದಿಂದ ಏಳು ಕೆಲಸದ ದಿನಗಳ ಅವಧಿಯ ಒಳಗಾಗಿ,

ನೋಂದಣಿಯ ಮಂಜೂರಾತಿಗಾಗಿರುವ ಅರ್ಜಿಯು ಅನುಮೋದನೆ ಮಾಡಲಾಗಿದೆ ಎಂದು ಪರಿಭಾವಿಸತಕ್ಕದ್ದು.".

4. ನಿಯಮ 21ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 21ರಲ್ಲಿ;–

(ಎ) ಖಂಡ (ಬಿ)ಯಲ್ಲಿ "ಸರಕು ಅಥವಾ ಸೇವೆಗಳು" ಪದಗಳ ನಂತರ, "ಅಥವಾ ಅವುಗಳೆರಡು" ಪದಗಳನ್ನು ಸೇರಿಸತಕ್ಕದ್ದು;

(ಬಿ) ಖಂಡ (ಡಿ)ಯ ನಂತರ, ಈ ಕೆಳಕಂಡ ಖಂಡಗಳನ್ನು ಸೇರಿಸತಕ್ಕದ್ದು, ಅಂದರೆ:–

"(ಇ) ಅಧಿನಿಯಮದ ಪ್ರಕರಣ 16 ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಹೂಡುವಳಿ ತೆರಿಗೆ ಜಮೆಯನ್ನು ಉಪಯೋಗಿಸಿದ್ದರೆ; ಅಥವಾ

(ಎಫ್) ಪ್ರಕರಣ 37ರ ಅಡಿಯಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ತೆರಿಗೆ ಅವಧಿಗಳಿಗೆ ನಮೂನೆ ಜಿಎಸ್‌ಟಿಆರ್–1ರಲ್ಲಿ ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸಿದ್ದು ಸದರಿ ತೆರಿಗೆ ಅವಧಿಗಳಿಗಾಗಿ ಪ್ರಕರಣ 39ರ ಅಡಿಯಲ್ಲಿನ ಆತನ ಮಾನ್ಯ ರಿಟರ್ನಿನಲ್ಲಿ, ಘೋಷಣೆಗೊಂಡಿರುವ ಹೊರಮುಖ ಪೂರೈಕೆಗಳ ವಿವರಗಳಿಗಿಂತ ಅಧಿಕವಾಗಿರುವಾಗಿದ್ದಲ್ಲಿ

(ಜಿ) ನಿಯಮ 86ಬಿಯ ಉಪಬಂಧಗಳನ್ನು ಉಲ್ಲಂಘಿಸಿದ್ದರೆ.".

5. ನಿಯಮ 21ಎಯ ತಿದ್ದುಪಡಿ.– ಸದರಿ ನಿಯಮಗಳ ನಿಯಮ 21ಎ ಯಲ್ಲಿ;–

(ಎ) ಉಪ ನಿಯಮ (2) ರಲ್ಲಿ, "ಸದರಿ ವ್ಯಕ್ತಿಗೆ ಅಹವಾಲು ಸಲ್ಲಿಸಲು ಒಂದು ನ್ಯಾಯಸಮ್ಮತವಾದ ಅವಕಾಶವನ್ನು ನೀಡಿದ ನಂತರ" ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) ಉಪ ನಿಯಮ (2)ನಂತರ, ಈ ಉಪ ನಿಯಮವನ್ನು ಸೇರಿಸತಕ್ಕದ್ದು, ಅಂದರೆ;

"(2ಎ) ಪ್ರಕರಣ 39ರ ಅಡಿಯಲ್ಲಿ ಒಬ್ಬ ನೋಂದಾಯಿತ ವ್ಯಕ್ತಿಯಿಂದ ಒದಗಿಸಲಾದ ರಿಟರ್ನುಗಳನ್ನು ಈ ಕೆಳಕಂಡವುಗೊಳೊಂದಿಗೆ ಹೋಲಿಕೆ ಮಾಡಿದಾಗ

(ಎ) **ನಮೂನೆ ಜಿಎಸ್‌ಟಿಆರ್–1** ರಲ್ಲಿ ಒದಗಿಸಿದ ಹೊರಮುಖ ಪೂರೈಕೆಗ ವಿವರಗಳು; ಅಥವಾ

(ಬಿ) **ನಮೂನೆ ಜಿಎಸ್‌ಟಿಆರ್–1** ರಲ್ಲಿ ಆತನ ಪೂರೈಕೆದಾರರು ಒದಗಿಸಿದ ಹೊರಮುಖ ಪೂರೈಕೆಗಳ ವಿವರಗಳ ಆಧಾರದಲ್ಲಿ ಪಡೆದ ಒಳಮುಖ ಪೂರೈಕೆಗಳ ವಿವರಗಳು,

ಅಥವಾ ಪರಿಷತ್ತಿನ ಶಿಫಾರಸ್ಸಿನ ಮೇರೆಗೆ ಕೈಗೊಳ್ಳಬಹುದಾದ ಅಂಥ ಇತರ ವಿಶ್ಲೇಷಣೆಗಳಿಂದ ಸದರಿ ವ್ಯಕ್ತಿಯ ನೋಂದಣಿಯು ರದ್ದಾಗುವ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಲ್ಲಂಘನೆಯನ್ನು ಸೂಚಿಸುವ ಮಹತ್ವವಾದ ವ್ಯತ್ಯಾಸಗಳು ಅಥವಾ ಅಸಂಗತತೆಗಳನ್ನು ಕಂಡುಬಂದಲ್ಲಿ, ಆತನ ನೋಂದಣಿಯು ಅಮಾನತ್ತಾಗತಕ್ಕದ್ದು ಮತ್ತು ಅಂಥ ವ್ಯಕ್ತಿಗೆ ಸದರಿ ವ್ಯತ್ಯಾಸಗಳು ಅಥವಾ ಅಸಂಗತತೆಗಳನ್ನು ಗುರುತು ಮಾಡಿ, ಮೂವತ್ತು ದಿನಗಳ ಒಳಗೆ ಆತನ ನೋಂದಣಿಯನ್ನು ಏಕೆ ರದ್ದುಗೊಳಿಸಬಾರದು ಎನ್ನುವುದಕ್ಕೆ ಆತನಿಂದ ವಿವರಣೆಯನ್ನು ಕೇಳಿ **ನಮೂನೆ ಜಿಎಸ್‌ಟಿ ಆರ್‌ಇಜಿ–31**ರಲ್ಲಿ, ಸಾಮಾನ್ಯ ಪೋರ್ಟಲ್‌ನಲ್ಲಿ ವಿದ್ಯುನ್ಮಾನವಾಗಿ ಅಥವಾ ನೋಂದಣಿಯ ಸಮಯದಲ್ಲಿ ಒದಗಿಸಿರುವ ವಿ–ಅಂಚೆ ಮೂಲಕ ಅಥವಾ ಕಾಲಕಾಲಕ್ಕೆ ತಿದ್ದುಪಡಿಯಾದಂತಹ ವಿದ್ಯುನ್ಮಾನ ಅಂಚೆಗೆ ಸಂವಹನಗೊಳಿಸತಕ್ಕದ್ದು.

(ಸಿ) ಉಪ ನಿಯಮ (3)ರಲ್ಲಿ, "ಅಥವಾ ಉಪನಿಯಮ (2)" ಪದಗಳು, ಆವರಣಗಳು ಮತ್ತು ಸಂಖ್ಯೆ ನಂತರ, "ಅಥವಾ ಉಪನಿಯಮ (2ಎ)" ಪದಗಳು, ಆವರಣಗಳು, ಸಂಖ್ಯೆ ಮತ್ತು ಅಕ್ಷರವನ್ನು ಸೇರಿಸತಕ್ಕದ್ದು;

(ಡಿ) ಉಪ ನಿಯಮ (3)ನಂತರ, ಈ ಉಪ ನಿಯಮವನ್ನು ಸೇರಿಸತಕ್ಕದ್ದು ಅಂದರೆ;

"(3ಎ) ಉಪನಿಯಮ (2) ಅಥವಾ ಉಪನಿಯಮ (2ಎ) ಅಡಿಯಲ್ಲಿ ಯಾರ ನೋಂದಣಿ ಅಮಾನತ್ತಿನಲ್ಲಿ ಇಡಲ್ಪಟ್ಟಿದೆಯೋ ಆ ನೋಂದಾಯಿತ ವ್ಯಕ್ತಿಯ, ನೋಂದಣಿಯ ಅಮಾನತ್ತಿನ ಅವಧಿಯಲ್ಲಿ ಪ್ರಕರಣ 54ರ ಅಡಿಯಲ್ಲಿ ಯಾವುದೇ ಮರುಪಾವತಿಯನ್ನು ಮಂಜೂರು ಮಾಡತಕ್ಕದ್ದಲ್ಲ.".

(ಇ) ಉಪನಿಯಮ (4)ರಲ್ಲಿ;–

(i) "ಅಥವಾ ಉಪನಿಯಮ (2)" ಪದಗಳು, ಆವರಣಗಳು ಮತ್ತು ಸಂಖ್ಯೆ ನಂತರ, "ಅಥವಾ ಉಪನಿಯಮ (2ಎ)" ಪದಗಳು, ಆವರಣಗಳು, ಸಂಖ್ಯೆ ಮತ್ತು ಅಕ್ಷರವನ್ನು ಸೇರಿಸತಕ್ಕದ್ದು;

(ii) ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು ಅಂದರೆ:–

"ಪರಂತು, ಯುಕ್ತ ಅಧಿಕಾರಿಯು, ಆತನಿಗೆ ಸರಿ ಕಾಣಿಸಿದರೆ, ಈ ನಿಯಮದ ಅಡಿಯಲ್ಲಿ, ರದ್ದತಿಯ ನಡಾವಳಿಯು ಬಾಕಿಯಿರುವ ಯಾವುದೇ ಅವಧಿಯಲ್ಲಿ ನೋಂದಣಿಯ ಅಮಾನತ್ತನ್ನು ಹಿಂತೆಗೆದುಕೊಳ್ಳಬಹುದು.".

6. ನಿಯಮ 22ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 22ರಲ್ಲಿ;–

(ಎ) ಉಪ ನಿಯಮ (3)ರಲ್ಲಿ, "ಉಪನಿಯಮ (1)ರ ಅಡಿಯಲ್ಲಿ ಕಾರಣ ಕೇಳಿ ನೀಡಲಾದ ಕಾರಣವನ್ನು ಕೇಳುವ ಸೂಚನ ಪತ್ರ" ಪದಗಳು, ಆವರಣಗಳು ಮತ್ತು ಸಂಖ್ಯೆ ನಂತರ, "ಅಥವಾ ನಿಯಮ 21ಎ ರ ಉಪನಿಯಮ (2ಎ)" ಪದಗಳು, ಆವರಣಗಳು, ಸಂಖ್ಯೆ ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

(ಬಿ) ಉಪ ನಿಯಮ (4)ರಲ್ಲಿ, "ಉಪನಿಯಮ (2)ರ ಅಡಿಯಲ್ಲಿ ಒದಗಿಸಿದ ಉತ್ತರವು" ಪದಗಳು, ಆವರಣಗಳು ಮತ್ತು ಸಂಖ್ಯೆ ನಂತರ, " ಅಥವಾ ನಿಯಮ 21ಎ ರ ಉಪನಿಯಮ (2ಎ)ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಪ್ರತಿಯಾಗಿ" ಪದಗಳು, ಆವರಣಗಳು, ಸಂಖ್ಯೆ ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು;

7. ನಿಯಮ 36ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 36ರಲ್ಲಿ, ಉಪನಿಯಮ (4)ರಲ್ಲಿ, 2021ರ ಜನವರಿ 1ನೇ ದಿನದಿಂದ ಜಾರಿಗೆ ಬರುವಂತೆ,–

(ಎ) ಎರಡು ಸ್ಥಳಗಳಲ್ಲಿ ಇರುವ "ಅಪ್‌ಲೋಡ್" ಪದಗಳಿಗಾಗಿ, "ಒದಗಿಸಿರುವ" ಪದವನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಎರಡು ಸ್ಥಳಗಳಲ್ಲಿ ಇರುವ "ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ಪೂರೈಕೆದಾರರಿಂದ", ಪದಗಳು, ಆವರಣಗಳು ಮತ್ತು ಸಂಖ್ಯೆ ನಂತರ, " **ನಮೂನೆ ಜಿಎಸ್‌ಟಿಆರ್–1** ಅಥವಾ ಬೆಲೆಪಟ್ಟಿ ಒದಗಿಸುವ ಸೌಲಭ್ಯವನ್ನು ಬಳಸಿಕೊಂಡು" ಪದಗಳು, ಆವರಣಗಳು ಮತ್ತು ಸಂಖ್ಯೆಯನ್ನು ಅನುಕ್ರಮವಾಗಿ ಸೇರಿಸತಕ್ಕದ್ದು;

(ಸಿ) "ಶೇಕಡ 10." ಎಂಬ ಸಂಖ್ಯೆಗಳು ಮತ್ತು ಪದಗಳಿಗಾಗಿ "ಶೇಕಡ 5." ಎಂಬ ಸಂಖ್ಯೆ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. ನಿಯಮ 59ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 59ರಲ್ಲಿ, ಉಪನಿಯಮ (4)ರ ನಂತರ ಕೆಳಕಂಡ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

" (5) ಈ ನಿಯಮದಲ್ಲಿ ಏನೇ ಒಳಗೊಂಡಿದಾಗ್ಯೂ;–

(ಎ) ಒಬ್ಬ ನೋಂದಾಯಿತ ವ್ಯಕ್ತಿಯು, ಆತನ ಹಿಂದಿನ ಎರಡು ತಿಂಗಳುಗಳಿಗೆ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ರಿಟರ್ನನ್ನು ಒದಗಿಸಿರದಿದ್ದರೆ, ಪ್ರಕರಣ 37ರ ಅಡಿಯಲ್ಲಿ ನಮೂನೆ ಜಿಎಸ್‌ಟಿಆರ್–1ರಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸಲು ಅನುಮತಿಸತಕ್ಕದ್ದಲ್ಲ;

(ಬಿ) ಪ್ರಕರಣ 39ರ ಉಪಪ್ರಕರಣ (1)ರ ಪರಂತುಕದ ಅಡಿಯಲ್ಲಿ ಪ್ರತಿ ತ್ರೈಮಾಸಿಕಕ್ಕೆ ರಿಟರ್ನನ್ನು ಒದಗಿಸುವುದು ಅಗತ್ಯವಿರುವ ಒಬ್ಬ ನೋಂದಾಯಿತ ವ್ಯಕ್ತಿಯು, ಆತನ ಹಿಂದಿನ ತೆರಿಗೆ ಅವಧಿಗೆ, ನಮೂನೆ **ಜಿಎಸ್‌ಟಿಆರ್–3ಬಿ**ಯಲ್ಲಿ ರಿಟರ್ನನ್ನು ಒದಗಿಸಿರದಿದ್ದರೆ, ಪ್ರಕರಣ 37ರ ಅಡಿಯಲ್ಲಿ ನಮೂನೆ **ಜಿಎಸ್‌ಟಿಆರ್–1**ರಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸಲು ಅಥವಾ ಬೆಲೆಪಟ್ಟಿ ಒದಗಿಸುವ ಸೌಲಭ್ಯವನ್ನು ಬಳಸಿಕೊಳ್ಳುವುದನ್ನು ಅನುಮತಿಸತಕ್ಕದ್ದಲ್ಲ.

(ಸಿ) ತನ್ನ ತೆರಿಗೆ ಬಾಧ್ಯತೆಯನ್ನು ತೀರಿಸಲು, ಅಂಥ ತೆರಿಗೆ ಬಾಧ್ಯತೆಯ ಶೇಕಡ ತೊಂಬತ್ತಾ ಒಂಬತ್ತರಷ್ಟು ಅಧಿಕವಿರುವ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಲಭ್ಯವಿರುವ ಮೊತ್ತವನ್ನು ಉಪಯೋಗಿಸುವುದನ್ನು ನಿಯಮ 86ಬಿಯ ಅಡಿಯಲ್ಲಿ ನಿರ್ಬಂಧಿಸಿರುವ, ಒಬ್ಬ ನೋಂದಾಯಿತ ವ್ಯಕ್ತಿಯು ಆತನ ಹಿಂದಿನ ತೆರಿಗೆ ಅವಧಿಗೆ, ನಮೂನೆ **ಜಿಎಸ್‌ಟಿಆರ್–3ಬಿ**ಯಲ್ಲಿ ರಿಟರ್ನನ್ನು ಒದಗಿಸಿರದಿದ್ದರೆ, ಪ್ರಕರಣ 37ರ ಅಡಿಯಲ್ಲಿ ನಮೂನೆ **ಜಿಎಸ್‌ಟಿಆರ್–1**ರಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆಗಳ ವಿವರಗಳನ್ನು ಒದಗಿಸಲು ಅಥವಾ ಬೆಲೆಪಟ್ಟಿ ಒದಗಿಸುವ ಸೌಲಭ್ಯವನ್ನು ಬಳಸಿಕೊಳ್ಳುವುದನ್ನು ಅನುಮತಿಸತಕ್ಕದ್ದಲ್ಲ.".

9. ನಿಯಮ 83ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 83ರಲ್ಲಿ, ಉಪನಿಯಮ (1)ರ 2017ರ ಜುಲೈ ಒಂದನೇ ದಿನದಿಂದ ಜಾರಿಗೆ ಬರುವಂತೆ;–

(ಎ) "(ಎ)" ಆವರಣಗಳು ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು.

(ಬಿ) "(ಬಿ)" ಆವರಣಗಳು ಮತ್ತು ಅಕ್ಷರಕ್ಕಾಗಿ "ಮತ್ತು" ಪದವನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಮತ್ತು ಹಾಗೆ ಪ್ರತಿಯೋಜಿಸಲಾದ "ಮತ್ತು" ಪದದ ನಂತರ, "(i)" ಆವರಣಗಳು ಮತ್ತು ಅಕ್ಷರಕ್ಕಾಗಿ "(ಎ) ಆವರಣಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು;

(ಡಿ) "(ii)" ಆವರಣಗಳು ಮತ್ತು ಅಕ್ಷರಕ್ಕಾಗಿ "(ಬಿ) ಆವರಣಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು.

10. ಹೊಸ ನಿಯಮ 86ಬಿಯ ಸೇರ್ಪಡೆ.– ಸದರಿ ನಿಯಮಗಳ ನಿಯಮ 86ಎ ಯ ನಂತರ, ಈ ಕೆಳಕಂಡ ನಿಯಮವನ್ನು, 2021ರ ಜನವರಿ 1ನೇ ದಿನದಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು, ಅಂದರೆ:–

"86ಬಿ. ವಿದ್ಯುನ್ಮಾನ ಜಮೆ ಖಾತೆಯಲ್ಲಿ ಲಭ್ಯವಿರುವ ಮೊತ್ತದ ಬಳಕೆಯ ಮೇಲಿನ ನಿರ್ಬಂಧಗಳು.– ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಂದು ತಿಂಗಳಿನಲ್ಲಿ, ವಿನಾಯಿತಿ ಪೂರೈಕೆ ಮತ್ತು ಶೂನ್ಯ–ದರ ಪೂರೈಕೆಯನ್ನು ಹೊರತುಪಡಿಸಿದಂತಹ ತೆರಿಗೆದಾಯಕ ಪೂರೈಕೆಯ ಮೌಲ್ಯವು ಐವತ್ತು ಲಕ್ಷ ರೂಪಾಯಿಗಳನ್ನು ಮೀರಿರುವಲ್ಲಿ, ಒಬ್ಬ ನೋಂದಾಯಿತ ವ್ಯಕ್ತಿಯು, ಅಂಥ ತನ್ನ ತೆರಿಗೆ ಬಾಧ್ಯತೆಯನ್ನು ತೀರಿಸಲು, ತೆರಿಗೆ ಬಾಧ್ಯತೆಯ ಶೇಕಡ ತೊಂಬತ್ತಾ ಒಂಬತ್ತರಷ್ಟನ್ನು ಅಧಿಕವಿರುವ ವಿದ್ಯುನ್ಮಾನ ಜಮೆ ಖಾತೆಯಲ್ಲಿ ಲಭ್ಯವಿರುವ ಮೊತ್ತವನ್ನು ಉಪಯೋಗಿಸತಕ್ಕದ್ದಲ್ಲ.

ಪರಂತು, ಸದರಿ ನಿರ್ಬಂಧವು ಕೆಳಕಂಡವುಗಳಿಗೆ ಅನ್ವಯಿಸತಕ್ಕದ್ದಲ್ಲ;–

(ಎ) ಸದರಿ ವ್ಯಕ್ತಿ ಅಥವಾ ಮಾಲೀಕ ಅಥವಾ ಕರ್ತ ಅಥವಾ ವ್ಯವಸ್ಥಾಪಕ ನಿರ್ದೇಶಕ ಅಥವಾ ಅದರ ಯಾವುದೇ ಇಬ್ಬರು ಪಾಲುದಾರರು, ಪೂರ್ಣಾವಧಿಯ ನಿರ್ದೇಶಕರು, ವ್ಯಕ್ತಿಗಳ ಕೂಟದ ನಿರ್ವಹಣಾ ಸಮಿತಿಯ ಅಥವಾ ಸಂದರ್ಭಾನುಸಾರ ಟ್ರಸ್ಟಿಗಳ ಮಂಡಳಿಯ ಸದಸ್ಯರು, ಆದಾಯ–ತೆರಿಗೆ ಅಧಿನಿಯಮ, 1961 (1961ರ 43) ಅಡಿಯಲ್ಲಿ ಕೊನೆಯ ಎರಡು ಹಣಕಾಸಿನ ಪ್ರತಿ ವರ್ಷದಲ್ಲಿ, ಸದರಿ ಅಧಿನಿಯಮದ ಪ್ರಕರಣ 139ರ ಉಪಪ್ರಕರಣ (1)ರ ಅಡಿಯಲ್ಲಿ ರಿಟರ್ನ್‌ಅನ್ನು ಸಲ್ಲಿಸುವುದಕ್ಕೆ ಇರುವ ಕಾಲಮಿತಿಯು ಮುಗಿಯುವ ಮುನ್ನ, ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ಆದಾಯ ತೆರಿಗೆಯನ್ನು ಸಂದಾಯ ಮಾಡಿರುವಲ್ಲಿ; ಅಥವಾ

(ಬಿ) ನೋಂದಾಯಿತ ವ್ಯಕ್ತಿಯು, ಪ್ರಕರಣ 54ರ ಉಪ ಪ್ರಕರಣ (3)ರ ಮೊದಲನೇ ಪರಂತುಕದ ಖಂಡ (i)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಪ್ರಯುಕ್ತ, ಹಿಂದಿನ ಹಣಕಾಸು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ಮೊತ್ತದ ಮರುಪಾವತಿಯನ್ನು ಸ್ವೀಕರಿಸಿರುವಲ್ಲಿ; ಅಥವಾ

(ಸಿ) ನೋಂದಾಯಿತ ವ್ಯಕ್ತಿಯು, ಪ್ರಕರಣ 54ರ ಉಪ ಪ್ರಕರಣ (3)ರ ಮೊದಲನೇ ಪರಂತುಕದ ಖಂಡ (ii)ರ ಅಡಿಯಲ್ಲಿ ಬಳಕೆಯಾಗದ ಹೂಡುವಳಿ ತೆರಿಗೆ ಜಮೆಯ ಪ್ರಯುಕ್ತ, ಹಿಂದಿನ ಹಣಕಾಸು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ಮೊತ್ತದ ಮರುಪಾವತಿಯನ್ನು ಸ್ವೀಕರಿಸಿರುವಲ್ಲಿ; ಅಥವಾ

(ಡಿ) ನೋಂದಾಯಿತ ವ್ಯಕ್ತಿಯು, ಪ್ರಸ್ತುತ ಹಣಕಾಸಿನ ವರ್ಷದಲ್ಲಿ ಸದರಿ ತಿಂಗಳ ವರೆಗೆ ಸಂಚಿತವಾಗಿ ಅನ್ವಯಿಸಿದ, ಒಟ್ಟು ತೆರಿಗೆ ಬಾಧ್ಯತೆಯ ಶೇಕಡ 1% ರಷ್ಟನ್ನು ಮೀರಿರುವ ಹುಟ್ಟುವಳಿ ತೆರಿಗೆ ಬಾಧ್ಯತೆಯನ್ನು ವಿದ್ಯುನ್ಮಾನ ನಗದು ಖಾತೆಯನ್ನು ಬಳಸಿಕೊಂಡು ತೀರಿಸಿದ್ದಲ್ಲಿ; ಅಥವಾ

(ಇ) ನೋಂದಾಯಿತ ವ್ಯಕ್ತಿ ಅಂದರೆ–

(i) ಸರ್ಕಾರಿ ಇಲಾಖೆ; ಅಥವಾ

(ii) ಒಂದು ಸಾರ್ವಜನಿಕ ಸ್ವಾಮ್ಯದ ಉದ್ಯಮ; ಅಥವಾ

(iii) ಒಂದು ಸ್ಥಳೀಯ ಪ್ರಾಧೀಕಾರ; ಅಥವಾ

(iv) ಒಂದು ಶಾಸನಾತ್ಮಕ ನಿಕಾಯ:

ಮತ್ತೂ ಪರಂತು, ಆಯುಕ್ತರು ಅಥವಾ ಈ ಸಂಬಂಧದಲ್ಲಿ ಅವರಿಂದ ಪ್ರಾಧಿಕೃತನಾದ ಒಬ್ಬ ಅಧಿಕಾರಿಯು ತಾನು ಸೂಕ್ತ ಎಂದು ಭಾವಿಸದ ಅಂಥ ಪರಿಶೀಲನೆಗಳು ಮತ್ತು ಅಂಥ ಸಂರಕ್ಷಣಾ ಕ್ರಮಗಳ ನಂತರ ಸದರಿ ನಿರ್ಬಂಧವನ್ನು ತೆಗೆಯಬಹುದು.".

11. ನಿಯಮ 117ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 117ರಲ್ಲಿ, ಉಪನಿಯಮ (2)ರಲ್ಲಿ, ಖಂಡ (ಬಿ)ಯಲ್ಲಿ, 2017ರ ಜುಲೈ ಒಂದನೇ ದಿನದಿಂದ ಜಾರಿಗೆ ಬರುವಂತೆ, "ಅಥವಾ ಉಪ–ಪ್ರಕರಣ(8)" ಪದಗಳು, ಆವರಣಗಳು ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು.

12. ನಿಯಮ 138ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 138ರಲ್ಲಿ, ಉಪನಿಯಮ (10)ರಲ್ಲಿ, 2021ರ ಜನವರಿ 1ನೇ ದಿನದಿಂದ ಜಾರಿಗೆ ಬರುವಂತೆ ಕೋಷ್ಟಕದಲ್ಲಿ;–

(ಎ) ಅಂಕಣ 2ರಲ್ಲಿನ ಕ್ರಮ ಸಂಖ್ಯೆ 1 ರಲ್ಲಿನ ನಮೂದುಗಳಿಗೆ ಸಂಬಂದಿಸಿದಂತೆ, "100 ಕಿ.ಮೀ" ಸಂಖ್ಯೆ ಮತ್ತು ಅಕ್ಷರಗಳಿಗಾಗಿ, "200 ಕಿ.ಮೀ" ಸಂಖ್ಯೆ ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು;
(ಬಿ) ಅಂಕಣ 2ರಲ್ಲಿನ ಕ್ರಮ ಸಂಖ್ಯೆ 2 ರಲ್ಲಿನ ನಮೂದುಗಳಿಗೆ ಸಂಬಂದಿಸಿದಂತೆ, "100 ಕಿ.ಮೀ" ಸಂಖ್ಯೆ ಮತ್ತು ಅಕ್ಷರಗಳಿಗಾಗಿ, "200 ಕಿ.ಮೀ" ಸಂಖ್ಯೆ ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

13. ನಿಯಮ 138ಇ ಯ ತಿದ್ದುಪಡಿ.– ಸದರಿ ನಿಯಮಗಳ ನಿಯಮ 138ಇ ಯಲ್ಲಿ;–

(ಎ) "ಎರಡು ತಿಂಗಳು" ಪದಗಳಿಗಾಗಿ, "ಎರಡು ತೆರಿಗೆ ಅವಧಿಗಳು" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಖಂಡ (ಸಿ)ಯ ನಂತರ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಅಂದರೆ:–

"(ಡಿ) ನಿಯಮ 21ಎಯ ಉಪನಿಯಮ (1) ಅಥವಾ ಉಪನಿಯಮ (2) ಅಥವಾ ಉಪನಿಯಮ (2ಎ) ಉಪಬಂಧಗಳ ಅಡಿಯಲ್ಲಿ ಅವರ ನೊಂದಣಿಯು ಅಮಾನತ್ತಿನಲ್ಲಿಟ್ಟಿರುವ ವ್ಯಕ್ತಿಯಾಗಿರುವಾಗ.".

14. ಹೊಸ ನಮೂನೆಯಾದ ನಮೂನೆ ಜಿಎಸ್‌ಟಿ ಆರ್‌ಇಜಿ–31ರ ಸೇರ್ಪಡೆ.– ಸದರಿ ನಿಯಮಗಳ **ನಮೂನೆ ಜಿಎಸ್‌ಟಿ ಆರ್‌ಇಜಿ–30ರ** ನಂತರ, ಈ ಕೆಳಕಂಡ ನಮೂನೆಯನ್ನು ಸೇರಿಸತಕ್ಕದ್ದು, ಅಂದರೆ;–

ನಮೂನೆ ಜಿಎಸ್‌ಟಿ ಆರ್‌ಇಜಿ–31
[ನಿಯಮ 21(ಎ) ನೋಡಿ]

ಉಲ್ಲೇಖ ಸಂ: <<ದಿದಿ><ತಿಂತಿಂ><ವವವವ>>

ಗೆ,

ಜಿಎಸ್‌ಟಿಎನ್
ಹೆಸರು:
ವಿಳಾಸ:

ಅಮಾನತ್ತಿನ ತಿಳಿವಳಿಕೆ ಹಾಗೂ ನೋಂದಣಿ ರದ್ದತಿಗಾಗಿ ಸೂಚನಾ ಪತ್ರ

ಈ ಕೆಳಕಂಡವುಗಳನ್ನು ಹೋಲಿಕೆ ಮಾಡಿದಾಗ, ಅಂದರೆ,

(i) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ 39ರ ಅಡಿಯಲ್ಲಿ ನಿಮ್ಮಿಂದ

ಒದಗಿಸಲಾದ ರಿಟರ್ನು;

(ii) **ನಮೂನೆ ಜಿಎಸ್‌ಟಿಆರ್–1** ರಲ್ಲಿ ನಿಮ್ಮಿಂದ ಒದಗಿಸಿದ ಹೊರಮುಖ ಪೂರೈಕೆಗ ವಿವರಗಳು;

(iii) _____ಯಿಂದ_____ಅವಧಿಗೆ ಸ್ವಯಂಜನ್ಯಗೊಂಡ ನಿಮ್ಮ ಒಳಮುಖ ಪೂರೈಕೆಯ ವಿವರಗಳು;

(iv) ----------(ನಿರ್ದಿಷ್ಟಪಡಿಸಿ)

ಮತ್ತು ಲಭ್ಯವಿರುವ ಇತರೇ ಮಾಹಿತಿಗಳು, ಈ ಕೆಳಕಂಡ ನ್ಯೂನ್ಯತೆಗಳು/ಅಸಂಗತತೆಗಳು ಕಂಡುಬಂದಿವೆ:

- ಅಭಿಪ್ರಾಯ 1
- ಅಭಿಪ್ರಾಯ 2
- ಅಭಿಪ್ರಾಯ 3

(ತೆರಿಗೆಸಂದಾಯಗಾರನಿಗೆ ಸಂಬಂಧಿಸಿದ ವಿಷಯಾಂಶದ ಆಧಾರದ ಮೇಲೆ ವಿವರಗಳನ್ನು ಭರ್ತಿ ಮಾಡಬೇಕು)

2. ಈ ನ್ಯೂನ್ಯತೆಗಳು/ಅಸಂಗತತೆಗಳು ಮೇಲ್ನೋಟಕ್ಕೆ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಹಾಗು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಲ್ಲಂಘನೆಯನ್ನು ಸೂಚಿಸುತ್ತವೆ, ಒಂದುವೇಳೆ, ತೃಪ್ತಿಕರವಾಗಿ ಇದಕ್ಕೆ ಸಂಬಂದಿಸಿದಂತೆ ವಿವರಣೆಯನ್ನು ನೀಡದಿದ್ದ ಪಕ್ಷದಲ್ಲಿ, ನಿಮ್ಮ ನೋಂದಣಿಯು ರದ್ದತಿಗೆ ಬಾಧ್ಯವಾಗುತ್ತದೆ.

3. ಮೇಲ್ಕಂಡ ನ್ಯೂನ್ಯತೆಗಳು/ಅಸಂಗತತೆಗಳು ರಾಜಸ್ವದ ಹಿತದೃಷ್ಟಿಗೆ ತೀವ್ರ ಹಾಗೂ ಗಂಭೀರ ಬೆದರಿಕೆಯನ್ನೊಡ್ಡುವುದನ್ನು ಪರಿಗಣನೆಗೆ ತೆಗೆದುಕೊಂಡು, ತತ್‌ಕ್ಷಣದ ಕ್ರಮವಾಗಿ, ಈ ತಿಳುವಳಿಕೆಯ ದಿನಾಂಕದಿಂದ ಜಾರಿಗೆ ಬರುವಂತೆ ನಿಮ್ಮ ನೋಂದಣಿಯನ್ನು ನಿಯಮ 21 ಎಯ ಉಪನಿಯಮ (2ಎ)ಯ ನಿಬಂಧನೆಗಳಿಗನುಸಾರ ಅಮಾನತ್ತಿನಲ್ಲಿ ಇಡಲಾಗಿದೆ.

4. ಈ ಸೂಚನಾ ಪತ್ರ ಸ್ವೀಕರಿಸಿದ ಮೂವತ್ತು ಕಾರ್ಯನಿರತ ದಿನಗಳ ಒಳಗಾಗಿ, ಮೇಲೆ ಹೇಳಲಾದ ನ್ಯೂನ್ಯತೆಗಳು/ಅಸಂಗತತೆಗಳಿಗೆ ವಿವರಣೆಯನ್ನು ಒದಗಿಸುವ ಮೂಲಕ ತಮ್ಮ ಉತ್ತರವನ್ನು ಕ್ಷೇತ್ರವ್ಯಾಪ್ತಿಯ ತೆರಿಗೆ ಅಧಿಕಾರಿಗೆ ಸಲ್ಲಿಸುವಂತೆ ನಿಮ್ಮನ್ನು ಕೋರಲಾಗಿದೆ. ಜಿಎಸ್‌ಟಿ ಸಾಮಾನ್ಯ ಪೋರ್ಟಲ್‌ನಲ್ಲಿ ನಿಮ್ಮ ಅಧಿಕಾರ ಪತ್ರಗಳನ್ನು ಯಾವುದೇ ವ್ಯಕ್ತಿಯಿಂದ ಸಾದ್ಯವಿರುವಬಹುದಾದ ದುರ್ಬಳಕೆಯ ಮಾಹಿತಿಯನ್ನು ಸಹ, ನಿರ್ದಿಷ್ಟವಾಗಿ, ಕ್ಷೇತ್ರವ್ಯಾಪ್ತಿಯ ತೆರಿಗೆ ಅಧಿಕಾರಿಯ ಗಮನಕ್ಕೆ ತರಬಹುದಾಗಿದೆ.

5. ನೀವು ಸಲ್ಲಿಸಬಹುದಾದ ದಸ್ತಾವೇಜಿನ ಸಹಿತವಾದ ಉತ್ತರವು ಕ್ಷೇತ್ರವ್ಯಾಪ್ತಿಯ ತೆರಿಗೆ ಅಧಿಕಾರಿಗೆ ತೃಪ್ತಿಕರವಾಗಿದ್ದು ಹಾಗೂ ಕ್ಷೇತ್ರವ್ಯಾಪ್ತಿಯ ತೆರಿಗೆ ಅಧಿಕಾರಿಯು ಅಗತ್ಯ ಎಂದು ಪರಿಗಣಿಸಬಹುದಾದ ಯಾವುದೇ ಪರಿಶೀಲನೆಯ ನಂತರದಲ್ಲಿ, ನೋಂದಣಿಯ ಅಮಾನತ್ತನ್ನು ತೆರವುಗೊಳಿಸಲಾಗುತ್ತದೆ.

6. ಒಂದು ವೇಳೆ ನಿಗದಿತ ಅವಧಿಯೊಳಗೆ ನೀವು ಉತ್ತರವನ್ನು ಕೊಡಲು ವಿಫಲವಾದಲ್ಲಿ ಅಥವಾ ನೀವು ತೃಪ್ತಿದಾಯಕ ಉತ್ತರ ನೀಡದಿದಲ್ಲಿ, ನಿಮ್ಮ ನೋಂದಣಿಯು ರದ್ದುಗೊಳ್ಳುತ್ತದೆ ಎಂಬುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಹೆಸರು:

ಪದನಾಮ

ಸೂಚನೆ: ಇದು ಗಣಕಯಂತ್ರ ಜನ್ಯ ಸೂಚನಾ ಪತ್ರವಾಗಿದ್ದು, ನೀಡಿರುವ ಪ್ರಾಧಿಕಾರದಿಂದ ಸಹಿಯ ಅಗತ್ಯತೆಯಿರುವುದಿಲ್ಲ.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಎ/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 01.03.2021

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ.ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ. – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ನಿಯಮಗಳು, 2021 ಎಂದು ಕರೆಯಬಹುದು.

(2)ಈ ನಿಯಮಗಳು, 1ನೇ ಜನವರಿ 2021 ರಿಂದ ಜಾರಿಗೆ ಬಂದಿರುವುವೆಂದು ಪರಿಭಾವಿಸತಕ್ಕದ್ದು.

2. ನಿಯಮ 59ರ ತಿದ್ದುಪಡಿ. – ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ರ ನಿಯಮ 59 ರಲ್ಲಿ ಉಪನಿಯಮ (5) ರ ನಂತರ ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅಂದರೆ:–

"**(6)**. ಈ ನಿಯಮದಲ್ಲಿ ಏನೇ ಒಳಗೊಂಡಿದ್ದರು,–

(ಎ) ಒಬ್ಬ ನೋಂದಾಯಿತ ವ್ಯಕ್ತಿಯು, ಹಿಂದಿನ ಎರಡು ತಿಂಗಳ ನಮೂನೆ ಜಿಎಸ್‌ಟಿಆರ್–3ಬಿ ಸಲ್ಲಿಸದಿದ್ದಲ್ಲಿ, ಪ್ರಕರಣ 37 ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಸರಬರಾಜುಗಳ ವಿವರಗಳ ನಮೂನೆ ಜಿಎಸ್‌ಟಿಆರ್–1ನ್ನು ಸಲ್ಲಿಸಲು ಅನುಮತಿಸಲಾಗುವುದಿಲ್ಲ;

(ಬಿ) ಒಬ್ಬ ನೋಂದಾಯಿತ ವ್ಯಕ್ತಿಯು, ಹಿಂದಿನ ತೆರಿಗೆ ಅವಧಿಗೆ ರಿಟರ್ನ್ ನಮೂನೆ ಜಿಎಸ್‌ಟಿಆರ್–3ಬಿ ಸಲ್ಲಿಸದಿದ್ದಲ್ಲಿ, ಪ್ರಕರಣ 39 ರ ಉಪಪ್ರಕರಣ (1) ರ ಪರಂತುಕದ ಅನುಸಾರ, ಪ್ರತಿ ತೈಮಾಸಿಕ ನಮೂನೆಯಲ್ಲಿ ಸಲ್ಲಿಸಬೇಕಾದ ಪ್ರಕರಣ 37ರ ಅಡಿಯಲ್ಲಿ ನಮೂನೆ ಜಿಎಸ್‌ಟಿಆರ್–1 ಅಥವಾ ಸರಕು ಪಟ್ಟಿ ಸಲ್ಲಿಸುವ ಸೌಲಭ್ಯ ಬಳಸಿಕೊಂಡು, ಸರಕುಗಳು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಸರಬರಾಜುಗಳ ವಿವರಗಳನ್ನು ಸಲ್ಲಿಸಲು ಅನುಮತಿಸಲಾಗುವುದಿಲ್ಲ;

(ಸಿ) ವಿದ್ಯುನ್ಮಾನ ಜಮಾ ವಹಿಯಲ್ಲಿ ಲಭ್ಯವಿರುವ ಮೊತ್ತವನ್ನು ನಿಯಮ 86ಬಿರ ಅಡಿಯ ಪ್ರತಿಶತ ತೊಂಬತ್ತೊಂಬತ್ತಕ್ಕಿಂತ ಹೆಚ್ಚಿನ ತೆರಿಗೆ ಹೊಣೆಗಾರಿಕೆಯನ್ನು ಹೊರಹಾಕಲು ನಿರ್ಬಂಧಿಸಲಾದ ನೋಂದಾಯಿತ ವ್ಯಕ್ತಿಯು ಹಿಂದಿನ ತೆರಿಗೆ ಅವಧಿಗೆ ನಮೂನೆ ಜಿಎಸ್‌ಟಿಆರ್–3ಬಿ ಸಲ್ಲಿಸದಿದ್ದಲ್ಲಿ, ಪ್ರಕರಣ 37 ರ ಅಡಿ ನಮೂನೆ ಜಿಎಸ್‌ಟಿಆರ್–1 ಅಥವಾ ಸರಕು ಪಟ್ಟಿ ಸಲ್ಲಿಸುವ ಸೌಲಭ್ಯ ಬಳಸಿಕೊಂಡು, ಸರಕು ಅಥವಾ ಸೇವೆಗಳು ಅಥವಾ ಅವೆರಡರ ಹೊರಮುಖ ಸರಬರಾಜುಗಳ ವಿವರಗಳನ್ನು ಸಲ್ಲಿಸಲು ಅನುಮತಿಸಲಾಗುವುದಿಲ್ಲ;

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಬಿ/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 07.06.2021

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27), ಪ್ರಕರಣ 164ರ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ. ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ. – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಮೂರನೇ ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, 27ನೇ ಏಪ್ರಿಲ್ 2021 ರಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. ನಿಯಮ 26ರ ತಿದ್ದುಪಡಿ. – ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ರ ನಿಯಮ 26 ರಲ್ಲಿ, ಉಪನಿಯಮ (1) ರ ಮೂರನೆ ಪರಂತುಕದ, ನಂತರ ಈ ಕೆಳಗಿನವುಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪರಂತು, ಕಂಪನಿಗಳ ಕಾಯ್ದೆ, 2013 (2013 ರ ಕೇಂದ್ರ ಕಾಯ್ದೆ 18) ರ ಅಡಿ ನೋಂದಾಯಿತರಾದ, ನೋಂದಾಯಿತ ವ್ಯಕ್ತಿಯು ಕೂಡ 27ನೇ ಏಪ್ರಿಲ್ 2021 ರಿಂದ 31 ನೇ ಮೇ 2021ರ ಅವಧಿಯಲ್ಲಿ, ವಿದ್ಯುನ್ಮಾನ ಪರಿಶೀಲನಾ ಸಂಕೇತದ (ಇವಿಸಿ) ಮೂಲಕ ಪರಿಶೀಲಿಸಿ ಪ್ರಕರಣ 39 ರ ಅಡಿಯಲ್ಲಿ ನಮೂನೆ ಜಿಎಸ್‌ಟಿಆರ್–3ಬಿ ಯನ್ನು ಮತ್ತು ಪ್ರಕರಣ 37 ರ ಅಡಿಯಲ್ಲಿ ಹೊರಮುಖ ಸರಬರಾಜುಗಳ ವಿವರಗಳ ನಮೂನೆ ಜಿಎಸ್‌ಟಿಆರ್–1 ನ್ನು ಅಥವಾ ದರ ಪಟ್ಟಿ ಒದಗಿಸುವ ಸೌಲಭ್ಯವನ್ನು ಬಳಸಿಕೊಂಡು ಸಲ್ಲಿಸಲು ಅನುಮತಿಸಲಾಗಿದೆ."

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಸಿ/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ:07.06.2021

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27), ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ. ಅಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ. – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ನಾಲ್ಕನೇ ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, 1ನೇ ಮೇ 2021ರಿಂದ ಜಾರಿಗೆ ಬರಲಾಗಿದೆ.

2. ನಿಯಮ 36ರ ತಿದ್ದುಪಡಿ :– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳ ನಿಯಮ 36 ರಲ್ಲಿ (ಇನ್ನು ಮುಂದೆ "ಸದರಿ ನಿಯಮ" ಎಂದು ಉಲ್ಲೇಖಿಸಲಾಗಿದೆ), ಉಪನಿಯಮ (4) ರಲ್ಲಿ ಮೊದಲನೇ ಪರಂತುಕದ ನಂತರ ಈ ಕೆಳಗಿನಂತೆ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಏಪ್ರಿಲ್ ಮತ್ತು ಮೇ, 2021 ರ ಅವಧಿಗೆ ಒಟ್ಟಾಗಿ ಅಂತಹ ಷರತ್ತು ಅನ್ವಯಿಸತಕ್ಕದ್ದು ಮತ್ತು ಮೇ, 2021 ರ ತೆರಿಗೆ ಅವಧಿಯ ನಮೂನೆ ಜಿಎಸ್‌ಟಿಆರ್–3ಬಿ ವರದಿಯನ್ನು, ಈ ಮೇಲಿನ ಷರತ್ತಿಗೆ ಅನ್ವಯಿಸುವಂತೆ, ಸದರಿ ಮಾಹೆಗಳಿಗೆ ಹೂಡುವಳಿ ತೆರಿಗೆ ಜಮೆಯ ಒಟ್ಟು ಹೊಂದಾಣಿಕೆಯೊಂದಿಗೆ ಸಲ್ಲಿಸತಕ್ಕದ್ದು.";

3. **ನಿಯಮ 59ರ ತಿದ್ದುಪಡಿ :–** ಸದರಿ ನಿಯಮಗಳ ನಿಯಮ 59 ರಲ್ಲಿನ ಉಪನಿಯಮ (2) ರಲ್ಲಿ ಈ ಕೆಳಗಿನಂತೆ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–
"ಪರಂತು, ಏಪ್ರಿಲ್, 2021 ರ ಮಾಹೆಗೆ ನೋಂದಾಯಿತ ವ್ಯಕ್ತಿಯು 01ನೇ ಮೇ 2021 ರಿಂದ 28ನೇ ಮೇ 2021 ರವರೆಗೆ ಐಎಫ್‌ಎಫ್ ಉಪಯೋಗಿಸಿಕೊಂಡು, ಅಂತಹ ವಿವರಗಳನ್ನು ಸಲ್ಲಿಸಬಹುದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಡಿ/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ:09.07.2021

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27), ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ,ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.** – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಐದನೇ ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.
(2)ಈ ನಿಯಮಗಳು, 18ನೇ ಮೇ 2021ರಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. **ನಿಯಮ 23ರ ತಿದ್ದುಪಡಿ.–** ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು 2017, (ಇವುಗಳನ್ನು ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 23ರಲ್ಲಿ, ಉಪ ನಿಯಮ (1)ರಲ್ಲಿ "ನೋಂದಣಿ ರದ್ದತಿಯ ಆದೇಶ ಜಾರಿಯಾದ ದಿನಾಂಕದಿಂದ" ಪದಗಳ ನಂತರ "ಅಥವಾ ಅಂತಹ ಅವಧಿಯ ಒಳಗಾಗಿ ಅಪರ ಆಯುಕ್ತರು ಅಥವಾ ಜಂಟಿ ಆಯುಕ್ತರು ಅಥವಾ ಆಯುಕ್ತರು, ಯಾರಾದರೂ, ಅಧಿನಿಯಮದ ಪ್ರಕರಣ 30ರ ಉಪ ಪ್ರಕರಣ(1)ರ ಪರಂತುಕದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ವಿಸ್ತರಿಸಲಾಗಿದ್ದಲ್ಲಿ", ಎಂಬ ಪದಗಳು ಅವರಣಗಳು ಮತ್ತು ಸಂಖ್ಯೆಗಳು ಸೇರಿಸತಕ್ಕದ್ದು.

3. **ನಿಯಮ 90ರ ತಿದ್ದುಪಡಿ:** ಸದರಿ ನಿಯಮಗಳ ನಿಯಮ 90 ರಲ್ಲಿ,–

(ಎ) ಉಪನಿಯಮ (3) ನಂತರ, ಈ ಕೆಳಗಿನಂತೆ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ,–

" ಪರಂತು ನಮೂನೆ ಜಿ,ಎಸ್.ಟಿ. ಆರ್.ಎಪ್.ಡಿ–01 ನಲ್ಲಿ ಮರುಪಾವತಿಗಾಗಿ ಕ್ಲೇಮು ಸಲ್ಲಿಸಿದ ದಿನಾಂಕದಿಂದ ಯುಕ್ತ ಅಧಿಕಾರಿಯು ನಮೂನೆ ಜಿ.ಎಸ್.ಟಿ.–03 ರಲ್ಲಿ ನ್ಯೂನತೆಗಳನ್ನು ತಿಳಿಸಲಾದ ದಿನಾಂಕದವರೆಗಿನ ಕಾಲ ಅವಧಿಯ, ಸದರಿ ಅರ್ಜಿದಾರನು ನ್ಯೂನತೆಗಳನ್ನು ಸರಿಪಡಿಸಿ ಹೊಸದಾಗಿ ಮರುಪಾವತಿ ಹಕ್ಕನ್ನು ಸಲ್ಲಿಸಿದ ಸಂದರ್ಭದಲ್ಲಿ, ಪ್ರಕರಣ 54ರ ಉಪ–ಪ್ರಕರಣ(1) ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಎರಡು ವರ್ಷಗಳ ಅವಧಿಯಿಂದ ಹೊರತುಪಡಿಸಲಾಗುವುದು".

(ಬಿ) ಉಪ ನಿಯಮದ (4) ರ ನಂತರ, ಕೆಳಕಂಡ ಉಪ ನಿಯಮಗಳನ್ನು ಸೇರಿಸಲಾಗುತ್ತದೆ. ಅವುಗಳೆಂದರೆ;–

"(5) ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ.–01 ರಲ್ಲಿ ಮರುಪಾವತಿಗಾಗಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ಅರ್ಜಿದಾರನು ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ.–04ರಲ್ಲಿ ತಾತ್ಕಾಲಿಕ ಮರುಪಾವತಿ ಮಂಜುರಾತಿ ಆದೇಶ ಅಥವಾ ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ.–06ರಲ್ಲಿ ಅಂತಿಮ ಮರುಪಾವತಿ ಮಂಜುರಾತಿ ಆದೇಶ ಅಥವಾ ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ.–05ರಲ್ಲಿ ಪಾವತಿ ಆದೇಶ ಅಥವಾ ನಮೂನೆ ಜಿ.ಎಸ್.ಟಿ. ಆರ್. ಎಫ್.ಡಿ.–07ರಲ್ಲಿ ಮರುಪಾವತಿ **ತಡೆಹಿಡಿಯುವ** ಆದೇಶ ಅಥವಾ ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ.–08ನಲ್ಲಿ ನೀಡಲಾದ ಸೂಚನೆ, ಇವುಗಳನ್ನು ನೀಡುವ ಮೊದಲು ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ.–01 ಡಬ್ಲ್ಯೂನಲ್ಲಿ ಅರ್ಜಿಯನ್ನು ಸಲ್ಲಿಸಿ ಮರುಪಾವತಿ ಅರ್ಜಿಯನ್ನು ಹಿಂಪಡೆಯಬಹುದು.

(6) ಮರುಪಾವತಿಯನ್ನು ಹಿಂಪಡೆಯಲು ನಮೂನೆ ಜಿ.ಎಸ್.ಟಿ. ಆರ್.ಎಪ್.ಡಿ–01 ಡಬ್ಲ್ಯೂನಲ್ಲಿ ಅರ್ಜಿಯನ್ನು ಸಲ್ಲಿಸಿದ ನಂತರ ಅರ್ಜಿದಾರನು ಮರುಪಾವತಿಗಾಗಿ ನಮೂನೆ ಜಿ.ಎಸ್.ಟಿ. ಆರ್.ಎಪ್.ಡಿ–01 ರಲ್ಲಿ ಅರ್ಜಿಸಲ್ಲಿಸುವಾಗ ವಿದ್ಯುನ್ಮಾನ ಜಮಾ ಖಾತೆ ಅಥವಾ ವಿದ್ಯುನ್ಮಾನ ನಗದು ಖಾತೆ, ಯಾವುದಾದರೂ ಖಾತೆಯಿಂದ ದೇಣಿ ಮಾಡಲಾದ ಯಾವುದೇ ಮೊತ್ತವನ್ನು ಯಾವ ಖಾತೆಯಿಂದ ಡೆಬಿಟ್ ಮಾಡಲಾಗಿತ್ತೊ ಆ ಖಾತೆಗೆ ಹಿಂತಿರುಗಿಸಲಾಗುತ್ತದೆ."

4. **ನಿಯಮ 92ರ ತಿದ್ದುಪಡಿ.–** ಸದರಿ ನಿಯಮಗಳ ನಿಯಮ 92 ರಲ್ಲಿ,–

(ಎ) ಉಪನಿಯಮ (1) ರಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು;

(ಬಿ) ಉಪ–ನಿಯಮ (2) ರಲ್ಲಿ, "ಭಾಗ ಬಿ" ಎಂಬ ಪದ ಮತ್ತು ಅಕ್ಷರಗಳಿಗೆ "ಭಾಗ ಎ" ಎಂಬುವುದನ್ನು ಪ್ರತಿಯೋಜಿಸತಕ್ಕದ್ದು;

(ii) ಉಪ ಪ್ರಕರಣ (2)ರ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಯುಕ್ತ ಅಧಿಕಾರಿ ಅಥವಾ ಆಯುಕ್ತರು ಮರುಪಾವತಿಯನ್ನು ಇನ್ನು ಮುಂದೆ ತಡೆ ಹಿಡಿಯುವುದು ಬೇಡವೆಂದು ಮನಗೊಂಡರೆ, ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ–07ರ "ಭಾಗ ಬಿ"ನಲ್ಲಿ ತಡೆಹಿಡಿಯಲಾದ ಮರುಪಾವತಿಯನ್ನು ಬಿಡುಗಡೆ ಮಾಡುವ ಆದೇಶವನ್ನು ಅವರು ಹೊರಡಿಸಬಹುದು.";

5. **ನಿಯಮ 96ರ ತಿದ್ದುಪಡಿ:** ಸದರಿ ನಿಯಮಗಳ ನಿಯಮ 96 ರಲ್ಲಿ,–

(ಎ) ಉಪ ನಿಯಮ (6) ರಲ್ಲಿ, "ಭಾಗ ಬಿ" ಎಂಬ ಪದ ಮತ್ತು ಅಕ್ಷರಗಳಿಗಾಗಿ " ಭಾಗ ಎ" ಎಂಬ ಪದ ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು ; ಮತ್ತು

(ಬಿ) ಉಪನಿಯಮ (7)ರಲ್ಲಿ, "ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ–06ರಲ್ಲಿ ಆದೇಶವನ್ನು ಹೊರಡಿಸಿದ ನಂತರ" ಎನ್ನುವ ಪದಗಳು ಅಕ್ಷರಗಳು ಮತ್ತು ಸಂಖ್ಯೆಗಳಿಗಾಗಿ, "ಭಾಗ ಬಿ ನಲ್ಲಿ ತಡೆಹಿಡಿಯಲಾದ ಮರುಪಾವತಿಯನ್ನು ಬಿಡುಗಡೆ ಮಾಡುವ ಆದೇಶವನ್ನು ಹೊರಡಿಸಿದ ನಂತರ ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ–06ರಲ್ಲಿ ಅದೇಶವನ್ನು ಹೊರಡಿಸಲು," ಎಂಬ ಪದಗಳು ಅಕ್ಷರಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು.

6. **ನಿಯಮ 138ಇ ರ ತಿದ್ದುಪಡಿ:** ಸದರಿ ನಿಯಮಗಳ ನಿಯಮ **138ಇ** ರಲ್ಲಿ "ನೊಂದಾಯಿತ ವ್ಯಕಿಯು ಪೂರೈಕೆದಾರನಾಗಲಿ ಅಥವಾ ಒಬ್ಬ ಸ್ವೀಕೃತಿದಾರನಾಗಲಿ" ಅವನು,– ಪದಗಳಿಗೆ "ನೋಂದಾಯಿತ ವ್ಯಕ್ತಿಯು ಹೊರಮುಖ ಪೂರೈಕೆಯ ಸರಕುಗಳ ಚಾಲನೆಯನ್ನು ಉಂಟುಮಾಡುವ ಸಂದರ್ಭದಲ್ಲಿ, ಅವನು,– " ಎಂಬುದನ್ನು ಪ್ರತಿಯೋಜಿಸತಕ್ಕದ್ದು.

7. **ನಮೂನೆ ಜಿ. ಎಸ್. ಟಿ. ಅರ್.ಇ.ಜಿ 21ರ ತಿದ್ದುಪಡಿ.–** ಸದರಿ ನಿಯಮಗಳ ನಮೂನೆ ಜಿ. ಎಸ್. ಟಿ. ಅರ್.ಇ.ಜಿ 21ರ, ಉಪ ಶಿರೋನಾಮೆಯಡಿಲ್ಲಿನ "ನೋಂದಣಿರದ್ದತಿಯ ಹಿಂಪಡೆಯುವಿಕೆಗಾಗಿ ಅರ್ಜಿಯನ್ನು ಸಲ್ಲಿಸಲು ಸೂಚನೆಗಳು", ಮೊದಲ ಬುಲೆಟ್ ಪಾಯಿಂಟ್‌ನಲ್ಲಿ "ನೋಂದಣಿ ರದ್ದತಿಯ ಆದೇಶ ಜಾರಿಗೊಳಿಸಿದ ದಿನಾಂಕದಿಂದ" ಪದಗಳ ನಂತರ "ಅಪರ ಆಯುಕ್ತರು ಅಥವಾ ಜಂಟಿ ಆಯುಕ್ತರು ಅಥವಾ ಆಯುಕ್ತರು, ಯಾರಾದರೂ, ಉಪಪ್ರಕರಣ(1) ಪ್ರಕರಣ 30ರ ಪರಂತುಕದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಿಸ್ತರಿಸಲಾದ ಅಂತಹ ಅವಧಿಯ ಒಳಗಾಗಿ" ಎಂಬ ಪದಗಳು, ಅವರಣಗಳನ್ನು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

8. **ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ–07ರ ಪ್ರತಿಯೋಜನೆ.– ಸದರಿ ನಿಯಮಗಳ ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ–07ಕ್ಕಾಗಿ, ಈ ಕೆಳಗಿನ ನಮೂನೆಯನ್ನು** ಪ್ರತಿಯೋಜಿಸತಕ್ಕದ್ದು ಅಂದರೆ:–

"ನಮೂನೆ ಜಿ.ಎಸ್.ಟಿ. ಆರ್.ಎಫ್.ಡಿ–07

[ನಿಯಮ 92(2) & 96(6)]

ಉಲ್ಲೇಖ ಸಂಖ್ಯೆ. ದಿನಾಂಕ:<ದಿದಿ/ಮಾಮಾ/ವವವವ>

ಇವರಿಗೆ,

––––––––––––(ಜಿಎಸ್ ಟಿ ಎನ್/ಯುಐಎನ್/ತಾತ್ಕಾಲಿಕ.ಐಡಿ)

––––––––––––(ಹೆಸರು)

––––––––––––(ವಿಳಾಸ)

––––––––––––(ಎ ಆರ್ ಎನ್‌ಸಂಖ್ಯೆ)

ಭಾಗ– ಎ

ಮರುಪಾವತಿಯನ್ನು ತಡೆಹಿಡಿಯುವ ಆದೇಶ

ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಪ್ರಕರಣ 54ರ ಉಪಪ್ರಕರಣ(10)/(11), ಉಪಬಂಧದ ಅನುಸಾರವಾಗಿ ಎ.ಆರ್.ಎನ್.ಗೆ ಸಂಬಂದಿಸಿದ ಕರದಾತರಿಗೆ ನೀಡಬಹುದಾದ ಮರುಪಾವತಿಯ ಮೊತ್ತವವನ್ನು ಕೆಳಗಿನ ಕಾರಣಗಳಿಗಾಗಿ ತಡೆಹಿಡಿಯಲಾಗಿದೆ:

ಕ್ರಮ ಸಂಖ್ಯೆ	ವಿವರಗಳು	
1	ಎಆರ್ಎನ್	
2	ಆರ್ಎಫ್ಡಿ–01ರಲ್ಲಿ ಕ್ಲೇಮು ಮಾಡಲಾದ ಮೊತ್ತ	<ಸ್ವಯಂಜನ್ಯ ಸಂಖ್ಯೆ>
3	ಆರ್ಎಫ್ಡಿ–06ರಲ್ಲಿ ಅನುಮತಿಸಲಾಗದ ಮೊತ್ತ	<ಸ್ವಯಂಜನ್ಯ ಸಂಖ್ಯೆ>
4	ಆರ್ಎಫ್ಡಿ–06ರಲ್ಲಿ ಹೊಂದಿಸಿಕೊಂಡ ಮೊತ್ತ	<ಸ್ವಯಂಜನ್ಯ ಸಂಖ್ಯೆ>
5	ತಡೆಹಿಡಿಯಲಾದ ಮೊತ್ತ	
6	ತಡೆಹಿಡಯಲಾಗಿರುವುದಕ್ಕೆ ಕಾರಣ (ಒಂದಕ್ಕಿಂತ ಹೆಚ್ಚು ಕಾರಣಗಳನ್ನು ಆಯ್ಕೆ ಮಾಡಬಹುದು)	0 ವಸೂಲಿ ಮಾಡಬಹುದಾದ ಬಾಕಿ ಪಾವತಿಸಿರುವುದಿಲ್ಲ 0 ಪ್ರಕರಣ 54ರ ಉಪ ಪ್ರಕರಣ 11ರಂತೆ 0 ಗಂಭೀರ ಸ್ವರೂಪದ ವಂಚನೆಯಾಗಿರುವ ಕಾರಣದಿಂದ 0 ಇತರೆ (ನಿರ್ದಿಷ್ಟವಾಗಿ ನಮೂದಿಸಿ)
7	ಕಾರಣಗಳ ವಿವರಣೆಗಳು	(500 ಅಕ್ಷರಗಳಿಗೆ ಮೀರದಂತೆ, ವಿಸ್ತೃತ ಕಾರಣಗಳನ್ನು ಪ್ರತ್ಯೇಕ ವಹಿಯಲ್ಲಿ ಲಗತ್ತಿಸಬಹುದು.
8	ವೈಯಕ್ತಿಕ ವಿಚಾರಣೆಯ ದಾಖಲೆಗಳು	(500 ಅಕ್ಷರಗಳಿಗೆ ಮೀರದಂತೆ, ವಿಸ್ತೃತ ಕಾರಣಗಳನ್ನು ಪ್ರತ್ಯೇಕ ವಹಿಯಲ್ಲಿ ಲಗತ್ತಿಸಬಹುದು

ಭಾಗ –ಬಿ

ತಡೆಹಿಡಿಯಲಾದ ಮರುಪಾವತಿಯನ್ನು ಬಿಡುಗಡೆ ಮಾಡುವ ಆದೇಶ

ನಿಮ್ಮ ಉಲ್ಲೇಖಿತ ಮರುಪಾವತಿ ಅರ್ಜಿ <ಎಆರ್ಎನ್> ದಿನಾಂಕ ಕ್ಕೆ <ದಿನಾಂಕ> ಸಂಬಂದಿಸಿಂತೆ;– ಮರುಪಾವತಿ ಮೊತ್ತದ ನೀಡುವಿಕೆಯ ಅದೇಶ < ಆರ್ಎಫ್ಡಿ–06–ರ ಅದೇಶ ಸಂಖ್ಯೆ> ದಿನಾಂಕ ಕ್ಕೆ <ದಿನಾಂಕ>ದಲ್ಲಿ ಮಂಜೂರಾದ ಮೊತ್ತವನ್ನು ಈ ಕಚೇರಿಯ ಅದೇಶ <ಅದೇಶದ ಉಲ್ಲೇಖ ಸಂಖ್ಯೆ> ದಿನಾಂಕ ಕ್ಕೆ <ದಿನಾಂಕ> ರಂತೆ ತಡೆಹಿಡಿಯಲಾಗಿತ್ತು. ಸದರಿ ಮೊತ್ತವನ್ನು ತಡಿಹಿಡಿಯಲು ಸಕಾರಣಗಳು ಇನ್ನೂ ಮುಂದೆ ಇರುವುದಲ್ಲವೆಂಬ ಅಂಶವು ನನಗೆ ಮನದಟ್ಟಾಗಿರುವುದರಿಂದ ತಡೆಹಿಡಿಯಲಾದ ಸದರಿ ಮರುಪಾವತಿ ಮೊತ್ತವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲು ಅನುಮತಿಸಿದೆ.

ಕ್ರಮ ಸಂಖ್ಯೆ	ವಿವರಗಳು	
1	ಎಆರ್ಎನ್	

2	ಆರ್‌ಎಫ್‌ಡಿ–01ರಲ್ಲಿ ಕ್ಲೇಮು ಮಾಡಲಾದ ಮೊತ್ತ	<ಸ್ವಯಂಜನ್ಯ ಸಂಖ್ಯೆ>
3	ಆರ್‌ಎಫ್‌ಡಿ–06ರಲ್ಲಿ ಅನುಮತಿಸಲಾಗದ ಮೊತ್ತ	<ಸ್ವಯಂಜನ್ಯ ಸಂಖ್ಯೆ>
4	ಆರ್‌ಎಫ್‌ಡಿ–06ರಲ್ಲಿ ಹೊಂದಿಸಿಕೊಂಡ ಮೊತ್ತ	<ಸ್ವಯಂಜನ್ಯ ಸಂಖ್ಯೆ>
5	ಆರ್‌ಎಫ್‌ಡಿ–07ಎರಲ್ಲಿ ತಡೆಹಿಡಿಯಲಾದ ಮೊತ್ತ	<ಸ್ವಯಂಜನ್ಯ ಸಂಖ್ಯೆ>
6	ಬಿಡುಗಡೆಗೊಳಿಸಲಾದ ಮೊತ್ತ	
7	ಪಾವತಿಸಬೇಕಾದ ಮೊತ್ತ	

ದಿನಾಂಕ; ಸಹಿ (ಡಿಎಸ್‌ಸಿ)

ಸ್ಥಳ ; ಹೆಸರು;------

ಹುದ್ದೆ;-------

ಕಚೇರಿ ವಿಳಾಸ: ";

9. ಹೊಸ ನಮೂನೆ ಜಿಎಸ್‌ಟಿ ಆರ್ ಎಫ್ ಡಿ–01 ಡಬ್ಲ್ಯೂನ **ಸೇರ್ಪಡೆ:–** ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಆರ್‌ಎಫ್‌ಡಿ–01ರ ನಂತರ ಈ ಕೆಳಗಿನ ನಮೂನೆಯನ್ನು ಸೇರಿಸಲಾಗಿದೆ ಅಂದರೆ:–

"ನಮೂನೆ ಜಿ ಎಸ್ ಟಿ ಅರ್ ಎಫ್ ಡಿ–01 ಡಬ್ಲ್ಯೂ

[ನಿಯಮ 90(5) ರಂತೆ]

ಮರುಪಾವತಿ ಅರ್ಜಿಯನ್ನು ಹಿಂಪಡೆಯಲು ಸಲ್ಲಿಸುವ ಅರ್ಜಿ

1. ಎಅರ್‌ಎನ್:

2. ಜಿಎಸ್‌ಟಿಐಎನ್;

3. ವ್ಯವಹಾರದ ಹೆಸರು (ಕಾನೂನು ಸಮ್ಮತ)

4. ವ್ಯಾಪಾರದ ಹೆಸರು, ಯಾವುದಾದರೂ ಇದ್ದಲ್ಲಿ;

5. ತೆರಿಗೆ ಅವಧಿ;

6. ಕ್ಲೇಮ ಮಾಡಲಾದ ಮರುಪಾವತಿ ಮೊತ್ತ;

7. ಮರುಪಾವತಿ ಕ್ಲೇಮನ್ನು ಹಿಂಪಡೆಯಲು ಬೇಕಾಗಿರುವ ಕಾರಣಗಳು

1 .ಮರುಪಾವತಿ ಅರ್ಜಿಯನ್ನು ತಪ್ಪಾಗಿ ಸಲ್ಲಿಸಲಾಗಿದೆ.

11. ಮರುಪಾವತಿ ಅರ್ಜಿಯನ್ನು ತಪ್ಪಾದ ವರ್ಗದಲ್ಲಿ ಸಲ್ಲಿಸಲಾಗಿದೆ.

111. ಮರುಪಾವತಿ ಅರ್ಜಿಯಲ್ಲಿ ತಪ್ಪಾದ ವಿವರಗಳನ್ನು ಉಲ್ಲೇಖಿಸಲಾಗಿದೆ.

11 ಇತರೆ (ದಯವಟ್ಟು ನಿರ್ದಿಷ್ಟವಾಗಿ ನಮೂದಿಸಿ)

8. ಘೋಷಣೆ:– ನಾನು/ನಾವು< ತೆರಿಗೆದಾರ > ಮೇಲೆ ನೀಡಲಾದ ಮಾಹಿತಿಯು ನನ್ನ/ನಮ್ಮ ತಿಳುವಳಿಕೆಗೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಹಾಗೂ ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಧರ್ಮಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ

ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಇ/2021)

ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು,ದಿನಾಂಕ:09.07.2021

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017, ಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.** – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಆರನೇ ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.
(2)ಈ ನಿಯಮಗಳು, 1ನೇ ಜೂನ್ 2021 ರಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. **ನಿಯಮ 26ಕ್ಕೆ ತಿದ್ದುಪಡಿ.**– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು 2017 (ಇವುಗಳನ್ನು ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ)ರಲ್ಲಿ, ನಿಯಮ 26ರಲ್ಲಿನ ಉಪನಿಯಮ (1) ರಲ್ಲಿನ ನಾಲ್ಕನೇ ಪರಂತುಕದಲ್ಲಿ, "31ನೇ ಮೇ, 2021" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳಿಗೆ, "31ನೇ ಆಗಸ್ಟ್, 2021" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. **ನಿಯಮ 36ಕ್ಕೆ ತಿದ್ದುಪಡಿ :**– ಸದರಿ ನಿಯಮಗಳ ನಿಯಮ 36 ರಲ್ಲಿನ ಉಪನಿಯಮ (4) ರಲ್ಲಿ ಎರಡನೇ ಪರಂತುಕಗೆ, ಈ ಕೆಳಗಿನಂತೆ ಪರಂತುಕವನ್ನು ಪ್ರಯೋಜಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ಜೂನ್, 2021ರ ತೆರಿಗೆ ಅವಧಿಯ ನಮೂನೆ ಜಿಎಸ್‌ಟಿಆರ್–3ಬಿ ವರದಿಯನ್ನು ಅಥವಾ ಜೂನ್, 2021 ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಅವಧಿಗೆ ಅಂತಹ ಷರತ್ತು ಅನ್ವಯಿಸುವಂತೆ ಸಂಚಿತವಾಗಿ ಏಪ್ರಿಲ್, ಮೇ ಮತ್ತು ಜೂನ್, 2021 ರ, ಹೂಡುವಳಿ ತೆರಿಗೆ ಜಮೆಯ ಒಟ್ಟು ಹೊಂದಾಣಿಕೆಯೊಂದಿಗೆ ಮತ್ತು ಈ ಮೇಲಿನ ಷರತ್ತಿಗೆ ಅನ್ವಯಿಸುವಂತೆ, ಸದರಿ ಮಾಹೆಗಳಿಗೆ ಸಲ್ಲಿಸತಕ್ಕದ್ದು."

4. **ನಿಯಮ 59ಕ್ಕೆ ತಿದ್ದುಪಡಿ :**– ಸದರಿ ನಿಯಮಗಳ ನಿಯಮ 59 ರಲ್ಲಿನ ಉಪನಿಯಮ (2) ರಲ್ಲಿ ಮೊದಲನೆಯ ಪರಂತುಕ ನಂತರ ಈ ಕೆಳಗಿನಂತೆ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ಮೇ, 2021 ರ ಮಾಹೆಗೆ ನೋಂದಾಯಿತ ವ್ಯಕ್ತಿಯು 01ನೇ ಜೂನ್, 2021 ರಿಂದ 28ನೇ ಜೂನ್, 2021 ರವರೆಗೆ ಐಎಫ್‌ಎಫ್ ಉಪಯೋಗಿಸಿಕೊಂಡು, ಅಂತಹ ವಿವರಗಳನ್ನು ಸಲ್ಲಿಸಬಹುದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಧರ್ಮಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಆರ್ಥಿಕ ಇಲಾಖೆ (ವಾ.ತೆ–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4ಎಫ್/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ:04.12.2021

ಕರ್ನಾಟಕ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 164 ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ಕ್ಕೆ ಮುಂದುವರೆದ ತಿದ್ದುಪಡಿಯನ್ನು ಮಾಡಿ ಕೆಳಕಂಡ ನಿಯಮಗಳನ್ನು ರಚಿಸಿದೆ, ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ :** ಈ ನಿಯಮಗಳನ್ನು ಕರ್ನಾಟಕ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ (ಏಳನೇ ತಿದ್ದುಪಡಿ) ನಿಯಮ 2021 ಎಂದು ಕರೆಯತಕ್ಕದ್ದು.
(2). ಈ ನಿಯಮಗಳು 1ನೇ ಆಗಸ್ಟ್ 2021 ರಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. **ನಿಯಮ 80 ಕ್ಕೆ ತಿದ್ದುಪಡಿ.**– ಕರ್ನಾಟಕ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ನಿಯಮ 2017ರ (ಇವುಗಳನ್ನು ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 80ರಗಾಗಿ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"80. ವಾರ್ಷಿಕ ರಿಟರ್ನ ,–(1) ಪ್ರಕರಣ 44 ರ ಎರಡನೆಯ ಪರಂತುಕದಲ್ಲಿ ಸೂಚಿಸಲಾದವರನ್ನು ಹೊರತುಪಡಿಸಿ ಉಳಿದ ಪ್ರತಿಯೊಬ್ಬ ನೋಂದಾಯಿಸಿದ ವ್ಯಕ್ತಿಗಳು, ಹೂಡಿವಳಿ ಸೇವೆ ಹಂಚಿಕೆದಾರ, ಪ್ರಕರಣ 51 ಆಥವಾ 52 ರಡಿಯಲ್ಲಿ ಸಾಂದರ್ಭಿಕ ತೆರಿಗೆದಾಯಕ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಯಾಗಲಿ, ಪ್ರಕರಣ 44 ರಡಿಯಲ್ಲಿ ಪ್ರತಿ ಹಣಕಾಸು ವರ್ಷದಲ್ಲಿ ನಮೂನೆ ಜಿಎಸ್‌ಟಿಆರ್ –9 ರಲ್ಲಿ, ಹಣಕಾಸು ವರ್ಷ ಕೊನೆಯಾದ ಡಿಸೆಂಬರ್ 31 ರೊಳಗೆ ನೇರವಾಗಿ ವಿದ್ಯುನ್ಮಾನದ ಮೂಲಕ ಆಥವಾ ಆಯುಕ್ತರು ಅಧಿಸೂಚಿಸಿದ ಸೇವಾ ಕೇಂದ್ರಗಳಲ್ಲಿ ವಾರ್ಷಿಕ **ರಿಟರ್ನ**ಗಳನ್ನು ಸಲ್ಲಿಸಬಹುದಾಗಿದೆ.

ಪರಂತು ಪ್ರಕರಣ 10 ರಡಿಯಲ್ಲಿ, ತೆರಿಗೆ ಪಾವತಿಸುವ ವ್ಯಕ್ತಿಯು ನಮೂನೆ ಜಿಎಸ್‌ಟಿಆರ್ –9ಎ ನಲ್ಲಿ ಸಲ್ಲಿಸಬೇಕು.

(2) ಪ್ರಕರಣ 52ರ ಅಡಿಯಲ್ಲಿ ಮೂಲದಲ್ಲಿ ತೆರಿಗೆಯನ್ನು ಸಂಗ್ರಹಿಸಿಬೇಕು ಮತ್ತು ಪ್ರತಿಯೊಬ್ಬ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕರು ಉಪಪ್ರಕರಣ 5 ರಂತೆ ನಮೂನೆ ಜಿಎಸ್‌ಟಿಆರ್ –9ಬಿ ರಡಿಯಲ್ಲಿ ವಾರ್ಷಿಕ ಪಟ್ಟಿಯನ್ನು ಸಲ್ಲಿಸಬೇಕು.

(3) ಪ್ರಕರಣ 44 ರ ಎರಡನೆಯ ಪರಂತುಕದಲ್ಲಿ ಸೂಚಿಸಲಾದವರನ್ನು ಹೊರತುಪಡಿಸಿ ಉಳಿದ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಹೂಡುವಳಿ ಸೇವೆ ಹಂಚಿಕೆದಾರ, ಪ್ರಕರಣ 51 ಆಥವಾ 52 ರಡಿಯಲ್ಲಿ ಸಾಂದರ್ಭಿಕ ತೆರಿಗೆದಾಯಕ ಮತ್ತು ಅನಿವಾಸಿ ತೆರಿಗೆದಾಯಕ ವ್ಯಕ್ತಿಯಾಗಲಿ, ಒಂದು ಹಣಕಾಸು ವರ್ಷದ ಸಮಯದಲ್ಲಿ ಐದು ಕೋಟಿಗಳನ್ನು ಮೀರಿದ್ದಲ್ಲಿ ಅವನು, ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳ ಮತ್ತು

ಸರಿಹೊಂದಿಕೆಯ ವಿವರಪತ್ರದ ಒಂದು ಪ್ರತಿಯನ್ನು ಪ್ರಕರಣ 44 ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ, ನಮೂನೆ ಜಿಎಸ್‌ಟಿಆರ್–9ಸಿ ಯೊಂದಿಗೆ ವಾರ್ಷಿಕ **ರಿಟರ್ನ್**ಗಳನ್ನು ಉಪನಿಯಮ (1) ರಂತೆ ಪ್ರತಿ ಹಣಕಾಸು ವರ್ಷದ ಕೊನೆಯಾದ ಡಿಸೆಂಬರ್ 31ರೊಳಗೆ ನೇರವಾಗಿ ವಿದ್ಯುನ್ಮಾನದ ಮೂಲಕ ಅಥವಾ ಆಯುಕ್ತರು ಅಧಿಸೂಚಿಸಿದ ಸೇವಾ ಕೇಂದ್ರಗಳಲ್ಲಿ ವಾರ್ಷಿಕ ರಿಟರ್ನ್‌ಗಳನ್ನು ಸಲ್ಲಿಸಬಹುದಾಗಿದೆ."

3. ನಮೂನೆ ಜಿಎಸ್‌ಟಿಆರ್–9 ಕ್ಕೆ ತಿದ್ದುಪಡಿ,– ಸದರಿ ನಿಯಮಗಳ ನಿಯಮ **ನಮೂನೆ ಜಿಎಸ್‌ಟಿಆರ್–9ರಲ್ಲಿ , 'ಸೂಚನೆಗಳು'** ಶೀರ್ಷಿಕೆಯಡಿಯಲ್ಲಿ,–

(1) ಕಂಡಿಕೆ 4ರಲ್ಲಿ

(ಎ) "ಅಥವಾ ಹಣಕಾಸು ವರ್ಷ 2019–20" ಎಂಬ ಪದಗಳು,ಅಕ್ಷರಗಳು ಮತ್ತು ಸಂಖ್ಯೆಗಳ ಬದಲಾಗಿ "ಅಥವಾ ಹಣಕಾಸು ವರ್ಷ 2020–21 " ಎಂಬ ಪದಗಳು,ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ಬ) ಕೋಷ್ಟಕದ ಎರಡನೇ ಕಾಲಂನಲ್ಲಿ ಬರುವ "ಮತ್ತು 2019–20" ಪದಗಳು ಮತ್ತು ಸಂಖ್ಯೆಗಳು ಎಲ್ಲೆಲ್ಲ ಬರುತ್ತವೆಯೋ ಅಲ್ಲಿ "ಮತ್ತು 2020–21" ಎಂಬ ಪದಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(2) ಐದನೇ ಕಂಡಿಕೆಯ ಕೋಷ್ಟಕದ ಎರಡನೇ ಕಾಲಂನಲ್ಲಿ,–

(ಎ) ಕ್ರಮ ಸಂಖ್ಯೆ 6ಬಿ ಎದುರು, ಪದಗಳು ಮತ್ತು ಸಂಖ್ಯೆಗಳು "ಹಣಕಾಸು ವರ್ಷ 2019–20", ನಂತರ "ಮತ್ತು 2020–21" ಅಕ್ಷರಗಳು, ಪದಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ಬಿ) ಕ್ರಮ ಸಂಖ್ಯೆ 6 ಸಿ ಮತ್ತು 6 ಡಿ ಎದುರು,–

(i) ಪದಗಳು, ಅಕ್ಷರಗಳು, ಮತ್ತು ಸಂಖ್ಯೆಗಳು "ಹಣಕಾಸು ವರ್ಷ 2019–20ರ", ನಂತರ "ಮತ್ತು 2020–21" ಪದಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು;

(ii) ಪದಗಳು ಮತ್ತು ಸಂಖ್ಯೆಗಳಿಗೆ "ಮತ್ತು 2019–20", "2019–20 ಮತ್ತು 2020–21", ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಕ್ರಮ ಸಂಖ್ಯೆ 6ಇ ಎದುರು, "ಹಣಕಾಸು ವರ್ಷ 2019–20" ಎಂಬ ಪದಗಳು ಮತ್ತು ಸಂಖ್ಯೆಗಳು ಬದಲಾಗಿ "ಹಣಕಾಸು ವರ್ಷ 2019–20 ಮತ್ತು 2020–21", ಅಕ್ಷರಗಳು, ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಡಿ) ಕ್ರಮ ಸಂಖ್ಯೆ 7ಎ,7ಬಿ,7ಸಿ,7ಡಿ,7ಇ,7ಎಫ್,7ಜಿ, ಮತ್ತು 7ಹೆಚ್ ಎದುರು, ನಮೂದಿನಲ್ಲಿ, "2018–19 ಮತ್ತು 2019–20", ಪದಗಳು ಮತ್ತು ಸಂಖ್ಯೆಗಳ ಬದಲಾಗಿ "2018–19, 2019–20 ಮತ್ತು 2020–21" ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(3) ಕಂಡಿಕೆ 7ರಲ್ಲಿ,–

(ಎ) "ಏಪ್ರಿಲ್ 2020 ರಿಂದ ಸೆಪ್ಟೆಂಬರ್ 2020ರ ವರೆಗೆ", ಪದಗಳು ಮತ್ತು ಸಂಖ್ಯೆಗಳ ನಂತರ, ಈ ಕೆಳಕೆಂಡವನ್ನು ಸೇರಿಸತಕ್ಕದ್ದು, ಅಂದರೆ:–

"ಹಣಕಾಸು ವರ್ಷ 2020–21ರ", ಭಾಗ–5ರಲ್ಲಿ ಹಿಂದಿನ ವರ್ಷದ ವ್ಯವಹಾರಗಳ ವಿವರಗಳನ್ನು ಒಳಗೊಂಡಿದ್ದು ಆದರೆ ಪಾವತಿಯನ್ನು ನಮೂನೆ ಜಿಎಸ್‌ಟಿಆರ್–3ಬಿ ಮೂಲಕ ಏಪ್ರಿಲ್ 2021 ರಿಂದ ಸೆಪ್ಟೆಂಬರ್ 2021ರ ನಡುವೆ ಪಾವತಿಸಲಾಗಿದೆ.

(ಬ)ಕೋಷ್ಟಕದ ಎರಡನೇ ಕಾಲಂ,–

(I) ಕ್ರಮ ಸಂಖ್ಯೆ 10 ಮತ್ತು 11 ಎದುರು, ನಮೂದುಗಳ ನಂತರ, ಈ ಕೆಳಕಂಡ ನಮೂದುಗಳನ್ನು **ಸೇರಿಸತಕ್ಕದ್ದು, ಅಂದರೆ:–**

"ಹಣಕಾಸು ವರ್ಷ 2020–21ರ, ಹಿಂದಿನ ಹಣಕಾಸು ವರ್ಷದ ರಿಟರ್ನ್‌ಗಳಲ್ಲಿ ಘೋಷಿಸಿದಂತಹ ಯಾವುದೇ ಪೂರೈಕೆಗಳಿಗೆ ಮಾಡಿದ ಸೇರ್ಪಡೆಗಳು ಅಥವಾ ತಿದ್ದುಪಡಿಗಳನ್ನು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ 2021 ನಿಂದ ಸೆಪ್ಟೆಂಬರನ 2021 ವರೆಗಿನ ನಮೂನೆ ಜಿಎಸ್‌ಟಿ ಆರ್–1ರ ಕೋಷ್ಟಕ 9ಎ, 9ಬಿ ಮತ್ತು 9ಸಿನಲ್ಲಿ ಒದಗಿಸಿದ್ದನ್ನು ಇಲ್ಲಿ ಘೋಷಿತಕ್ಕದ್ದು.";

(II) ಕ್ರಮ ಸಂಖ್ಯೆ 12 ರ ಎದುರು,–

(1)ಪದಗಳು, ಅಕ್ಷರಗಳು, ಅಂಕಿಗಳ ಮತ್ತು ಸಂಖ್ಯೆಗಳ "ಹಣಕಾಸು ವರ್ಷ 2019–20ರ, ಸಂಬಂಧಿಸಿದಂತೆ ನೋಂದಾಯಿತ ವ್ಯಕ್ತಿಯು ಈ ಕೋಷ್ಟಕವನ್ನು ಭರ್ತಿ ಮಾಡದಿರಲು ಆಯ್ಕೆಯನ್ನು ಹೊಂದಿರುವವರು.", ನಂತರ, ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅಂದರೆ:–

"ಹಣಕಾಸು ವರ್ಷ 2020–21ರ, ಹಿಂದಿನ ಹಣಕಾಸು ವರ್ಷ ಉಪಯೋಗಿಸಿದ ಆದರೆ ಪ್ರಸಕ್ತ ಹಣಕಾಸು ವರ್ಷ ಏಪ್ರಿಲ್ 2021 ರಿಂದ ಸೆಪ್ಟೆಂಬರ್ 2021 ರವರೆಗಿನ ರಿಟರ್ನ್‌ಗಳಲ್ಲಿ ಸಂಬಂಧಿಸಿದಂತೆ ಹಿಮ್ಮುಖಗೊಳಿಸಿದ ಐ.ಟಿ.ಸಿ ಸಮಗ್ರ ಮೌಲ್ಯವನ್ನು ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿ ರ ಕೋಷ್ಟಕ 4(ಬಿ)ಅನ್ನು ಬಳಸಬಹುದಾಗಿರುತ್ತದೆ.";

(2) "2018–19 ಮತ್ತು 2019–20" ಪದ ಮತ್ತು ಸಂಖ್ಯೆಗಳ ಬದಲಾಗಿ "2018–19, 2019–20 ಮತ್ತು 2020–21" ಎಂಬ ಪದ ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

(III) ಕ್ರಮ ಸಂಖ್ಯೆ 13 ರ ಎದುರು:

(1) ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳ ನಂತರ "2020–21 ರ ಆರ್ಥಿಕ ವರ್ಷದಲ್ಲಿ ಮರು ಕ್ಲೇಮು ಮಾಡಿದಲ್ಲಿ, ಅಂತಹ ಐಟಿಸಿ ಮರು ಕ್ಲೇಮುಗಳ ವಿವರಗಳನ್ನು ವಾರ್ಷಿಕ ನಮೂನೆ ಸಲ್ಲಿಕೆಯಲ್ಲಿ 2020–21ರ ಆರ್ಥಿಕ ವರ್ಷದಲ್ಲಿ ಸಲ್ಲಿಸಬೇಕು." ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅಂದರೆ:–

"ಹಣಕಾಸು ವರ್ಷ 2020–21ರ, ಹಿಂದಿನ ಹಣಕಾಸು ವರ್ಷದಲ್ಲಿ ಸ್ವೀಕರಿಸಿದ ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದ ಐಟಿಸಿ ಯನ್ನು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ 2021 ರಿಂದ ಸೆಪ್ಟೆಂಬರ್ 2021ರವರೆಗಿನ ಮಾಹೆಗಳಿಗೆ ಸಲ್ಲಿಸಿದ ರಿಟರ್ನ್‌ಗಳಲ್ಲಿ ಉಪಯೋಗಿಸಿದ ಐ.ಟಿ.ಸಿ ಇಲ್ಲಿ ಘೋಷಿಸತಕ್ಕದ್ದು. ಈ ವಿವರಗಳನ್ನು ಭರ್ತಿ ಮಾಡಲು ನಮೂನೆ ಜಿಎಸ್‌ಟಿಆರ್–3ಬಿ ರ ಕೋಷ್ಟಕ 4(ಬಿ)ಅನ್ನು ಉಪಯೋಗಿಸಬಹುದು. ಪ್ರಕರಣ 16ರ ಉಪಪ್ರಕರಣ (2) ರ ಪ್ರಕಾರ ಹಣಕಾಸು ವರ್ಷ 2020–21 ಹಿಮ್ಮುಖಗೊಳಿಸಿದ್ದು, ಆದರೆ ಹಣಕಾಸು ವರ್ಷ 2021–22ರಲ್ಲಿ ಮರು ಕ್ಲೇಮು ಮಾಡಿದ್ದರೆ, ಅಂತಹ ಐಟಿಸಿ ಮರು ಕ್ಲೇಮು ವಿವರಗಳನ್ನು ಹಣಕಾಸು ವರ್ಷ2021–22 ರ ವಾರ್ಷಿಕ ನಮೂನೆಯಲ್ಲಿ ಸಲ್ಲಿಸತಕ್ಕದ್ದು.", ಮತ್ತು

(2) ಸಂಖ್ಯೆಗಳು ಮತ್ತು ಪದ "2018–19 ಮತ್ತು 2019–20" ಎಂಬುದರ ಬದಲಾಗಿ "2018–19, 2019–20 ಮತ್ತು 2020–21" ಸಂಖ್ಯೆಗಳು ಮತ್ತು ಪದವನ್ನು ಪ್ರತಿಯೋಜಿಸತಕ್ಕದ್ದು;

(4) 8ನೇ ಕಂಡಿಕೆಯಲ್ಲಿನ ಕೋಷ್ಟಕದ ಎರಡನೇ ಕಾಲಂನಲ್ಲಿನ ಬರುವ "2018–19 ಮತ್ತು 2019–20" ಸಂಖ್ಯೆಗಳು ಮತ್ತು ಪದ ಬದಲಾಗಿ "2018–19, 2019–20 ಮತ್ತು 2020–21" ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು;

4. ನಮೂನೆ ಜಿಎಸ್‌ಟಿಆರ್–9ಸಿ ತಿದ್ದುಪಡಿ: ಸದರಿ ನಿಯಮಗಳ ನಿಯಮ **ನಮೂನೆ ಜಿಎಸ್‌ಟಿಆರ್–9ಸಿರಲ್ಲಿ ,**

(i) ಭಾಗ ಎ ಯಲ್ಲಿನ ಕೋಷ್ಟಕದಲ್ಲಿ

(ಎ) ಕ್ರಮ ಸಂಖ್ಯೆ 9ರಲ್ಲಿ, ಕ್ರಮಸಂಖ್ಯೆ ಕೆ ಯಲ್ಲಿನ ನಮೂದುಗಳ ನಂತರ ಈ ಕೆಳಕಂಡಂತೆ ಕ್ರಮ ಸಂಖ್ಯೆ ಮತ್ತು ಸಂಬಂಧಿಸಿದ ನಮೂದುಗಳನ್ನು ಸೇರಿಸತಕ್ಕದ್ದು, ಅಂದರೆ:–

"K-1	ಇತರೆ					.";

(ಬಿ) ಕ್ರಮಸಂಖ್ಯೆ 11ರಲ್ಲಿ, "0.10% ನಮೂದು ನಂತರ, ಈ ಕೆಳಕಂಡ ನಮೂದನ್ನು ಸೇರಿಸತಕ್ಕದ್ದು, ಅಂದರೆ:–

"ಇತರೆ						.";

(ಸಿ) ಭಾಗ V ಎದುರು,–

(I) ಶಿರೋನಾಮೆಯಲ್ಲಿ, "ಸರಿ ಹೊಂದಾಣಿಕೆ ಆಗದಿರುವುದಕ್ಕೆ ಹೆಚ್ಚುವರಿ ತೆರಿಗೆ ಭಾದ್ಯತೆ ಬಗೆಗಿನ, ಲೆಕ್ಕಪರಿಶೋಧಕರ ಶಿಫಾರಸ್ಸು" ಎಂಬ ಪದಗಳಿಗಾಗಿ ""ಸರಿ ಹೊಂದಾಣಿಕೆ ಆಗದಿರುವುದಕ್ಕೆ ಹೆಚ್ಚುವರಿ ತೆರಿಗೆ ಭಾದ್ಯತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(II) "0.10%." ನಮೂದಿನ ನಂತರ, ಈ ಕೆಳಕಂಡ ನಮೂದನ್ನು ಸೇರಿಸತಕ್ಕದ್ದು, ಅಂದರೆ:–

"ಇತರೆ					.";

(ii) ಕೋಷ್ಟಕದ ನಂತರ, "ಪರಿಶೀಲನೆ" ಎಂದು ಆರಂಭವಾಗಿ ಮತ್ತು ಬ್ಯಾಲೆನ್ಸ್ ಶೀಟ್ ಮತ್ತಿತರೆ.", ಎಂದು ಕೊನೆಗೊಳ್ಳುವಲ್ಲಿ, ಈ ಕೆಳಗಿನವುಗಳನ್ನು ಪ್ರತಿಯೋಜಿಸತಕ್ಕದ್ದು ,ಅಂದರೆ:–

"ನೊಂದಾಯಿತ ವ್ಯಕ್ತಿಯ ಪರಿಶೀಲನೆ:

ಮೇಲೆ ನೀಡಲಾದ ಮಾಹಿತಿಯು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆ ಮತ್ತು ಯಾವುದೇ ಮಾಹಿತಿಯನ್ನು ಇದರಿಂದ ಮರೆಮಾಚಿರುವುದಿಲ್ಲ ಎಂದು ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ. ನಮೂನೆ ಜಿಎಸ್‌ಟಿಆರ್–9ಸಿ ಯಲ್ಲಿನ ಸರಿ ಹೊಂದಾಣಿಕೆ ವಿವರವನ್ನು ನಾನು ಸ್ವಯಂ ಪ್ರಮಾಣೀಕರಿಸಿ ಆಪ್ ಲೋಡ್ ಮಾಡುತ್ತಿದ್ದೇನೆ. ನಾನು ಹಣಕಾಸು ವಿವರ ಪತ್ರ , ಲಾಭ ಮತ್ತು

ನಷ್ಟ ತಃಖ್ತೆ ಮತ್ತು ಬ್ಯಾಲೆನ್ಸಶೀಟ್ ಮತ್ತಿತರೆ, ಒಳಗೊಂಡ ಇತರೆ ಪತ್ರಗಳನ್ನು ಸಹ ಅಪ್‌ಲೋಡ್ ಮಾಡುತ್ತಿದ್ದೇನೆ.";

(iii) ಸೂಚನೆಗಳಲ್ಲಿ,–

(ಎ) ನಾಲ್ಕನೇ ಕಂಡಿಕೆಯಲ್ಲಿ, ಕೋಷ್ಟಕದ ಎರಡನೇ ಕಾಲಂನಲ್ಲಿ ಎಲ್ಲಲ್ಲಿ "2018–19 ಮತ್ತು 2019–20" ಎಂಬ ಸಂಖ್ಯೆಗಳು ಮತ್ತು ಪದಗಳು ಬರುತ್ತದೆಯೋ, ಅಲ್ಲಿ "2018–19, 2019–20 ಮತ್ತು 2020–21" ಎಂಬ ಸಂಖ್ಯೆಗಳನ್ನು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಆರನೇ ಕಂಡಿಕೆಯಲ್ಲಿನ, ಕೋಷ್ಟಕದ ಎರಡನೇ ಕಾಲಂನಲ್ಲಿ "2018–19 ಮತ್ತೆ 2019–20" ಎಂಬ ಸಂಖ್ಯೆಗಳು ಮತ್ತು ಪದಗಳು ಬರುತ್ತದೆಯೋ, ಅಲ್ಲಿ "2018–19, 2019–20 ಮತ್ತು 2020–21" ಎಂಬ ಸಂಖ್ಯೆಗಳನ್ನು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ)ಕಂಡಿಕೆ 7ರಲ್ಲಿ, ಈ ಕಂಡಿಕೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

" 7 ಮರುಹೊಂದಾಣಿಕೆಯಾಗದ ವಹಿವಾಟು ಅಥವಾ ಮರುಹೊಂದಾಣಿಕೆಯಾಗದ ಹೂಡುವಳಿ ತೆರಿಗೆ ಜಮೆಗೆ ಸಂಬಂಧಿಸಿದ ತೆರಿಗೆದಾರನ ಹೆಚ್ಚುವರಿ ತೆರಿಗೆ ಬಾಧ್ಯತೆಯನ್ನು ಭಾಗ–V ಹೊಂದಿರುತ್ತದೆ. ತಪ್ಪಾಗಿ ಪಡೆದ ಯಾವುದೇ ಮರುಪಾವತಿಯನ್ನು ಮತ್ತು ಸರಕಾರಕ್ಕೆ ಹಿಂದಿರುಗಿ ಸಂದಾಯ ಮಾಡತಕ್ಕ ವಿವರಗಳನ್ನು ಸಹ ಈ ಕೋಷ್ಟಕದಲ್ಲಿ ಘೋಷಿಸತಕ್ಕದ್ದು. ಕೊನೆಯದಾಗಿ, ತೆರಿಗೆದಾರನ ಯಾವುದೇ ಇತ್ಯರ್ಥಪಡಿಸಬಹುದಾದ ಬಾಕಿಯಿರುವ ತಗಾದೆಗಳನ್ನು ಈ ಕೋಷ್ಟಕದಲ್ಲಿ ಘೋಷಿಸಿಕೊಳ್ಳತಕ್ಕದ್ದು.";

(v) ಭಾಗ ಬಿ– ಪ್ರಮಾಣೀಕರಣ ಮತ್ತು ಅದಕ್ಕೆ ಸಂಬಂಧಿಸಿದ ನಮೂನೆಗಳನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧಿನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಜಿ/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ:06.12.2021

ಕರ್ನಾಟಕ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪರಿಚ್ಛೇದ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸಿನ ಮೇರೆಗೆ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ.ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ (ಎಂಟನೆಯ ತಿದ್ದುಪಡಿ) ನಿಯಮಗಳು, 2021, ಎಂದು ಕರೆಯಬಹುದು.

(2) ಈ ನಿಯಮಗಳಲ್ಲಿ ಉಪಬಂಧಿಸಿದುದವನ್ನುಳಿದು, ಅವುಗಳು 29ನೇ ಆಗಸ್ಟ್ 2021ರಿಂದ ಜಾರಿಗೆ ಬಂದಿರುವುದಾಗಿ ಪರಿಭಾವಿಸತಕ್ಕದ್ದು.

2. **ನಿಯಮ 26ರ ತಿದ್ದುಪಡಿ.**– ಕರ್ನಾಟಕ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ನಿಯಮಗಳು, 2017ರಲ್ಲಿ, (ಇನ್ನುಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 26ರಲ್ಲಿ,–

(i) ಉಪನಿಯಮ (1)ರಲ್ಲಿ,–

(ಎ) ನಾಲ್ಕನೆಯ ಪರಂತುಕದಲ್ಲಿ, "ಆಗಸ್ಟ್ 31ನೇ ದಿನ, 2021", ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳಿಗೆ ಬದಲಾಗಿ "ಅಕ್ಟೋಬರ್ 31ನೇ ದಿನ 2021" ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತ್ತದ್ದು; ಮತ್ತು

(ಬಿ) 1ನೇ ನವಂಬರ್ 2021ರಿಂದ ಜಾರಿಗೆ ಬಂದಂತೆ ಎಲ್ಲಾ ಪರಂತುಕಗಳನ್ನು ಬಿಟ್ಟುಬಿಡತಕ್ಕದ್ದು.

3. **ನಿಯಮ 138 ಇ ಇದರ ತಿದ್ದುಪಡಿ.**– ಸದರಿ ನಿಯಮಗಳ ನಿಯಮ 138ಇ ರ, ನಾಲ್ಕನೆಯ ಪರಂತುಕದ ನಂತರ, 1ನೇ ಮೇ 2021ರಿಂದ ಜಾರಿಗೆ ಬಂದಂತೆ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಮಾರ್ಚ್ 2021ರಿಂದ ಮೇ 2021ರ ಅವಧಿಗೆ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿನ ಸಲ್ಲಿಕೆಯನ್ನು ಅಥವಾ ಜಿಎಸ್‌ಟಿಆರ್–1ರಲ್ಲಿನ ಹೊರಮುಖ ಪೂರೈಕೆಗಳ ವಿವರಪತ್ರವನ್ನು ಅಥವಾ ನಮೂನೆ ಜಿಎಸ್‌ಟಿ ಸಿಎಂಪಿ–08ರಲ್ಲಿನ ವಿವರಪತ್ರವನ್ನು, ಇವುಗಳಲ್ಲಿ ಯಾವುದು ಅನ್ವಯವೋ ಅದನ್ನು ಸಲ್ಲಿಸದೇ ಇದ್ದಲ್ಲಿ ಮೇಲೆ ತಿಳಿಸಲಾದಂತಹ ನಿರ್ಬಂಧವು 1ನೇ ಮೇ 2021ರಿಂದ 18ನೇ ಆಗಸ್ಟ್ 2021ರ ಅವಧಿಯಲ್ಲಿ ಸದರಿ ನಿರ್ಬಂಧ ಅನ್ವಯಿಸುವುದಿಲ್ಲ."

4. **ನಮೂನೆ ಜಿಎಸ್‌ಟಿ ಎಎಸ್‌ಎಂಟಿ–14ಕ್ಕೆ ತಿದ್ದುಪಡಿ,** – ಸದರಿ ನಿಯಮಗಳ ನಮೂನೆ ಜಿಎಸ್‌ಟಿ ಎಎಸ್‌ಎಂಟಿ–14ರಲ್ಲಿ,–

(ಎ) "……ರಿಂದ ಜಾರಿಗೆ ಬಂದಂತೆ" ಈ ಪದಗಳ ನಂತರ, "ಆದೇಶ ಉಲ್ಲೇಖ ಸಂಖ್ಯೆ……, ದಿನಾಂಕ……" ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಬಿ) "ನೋಂದಣಿಗೆ ಭಾಧ್ಯನಿದ್ದಾಗ್ಯೂ ನೋಂದಣಿಯಿಲ್ಲದೆ ವ್ಯವಹಾರವನ್ನು ನಡೆಸುತ್ತಿರುವುದಕ್ಕಾಗಿ" ಈ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) "ಪದನಾಮ" ಪದದ ಕೊನೆಯಲ್ಲಿ, "ವಿಳಾಸ" ಪದವನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧಿನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಹೆಚ್/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ:07.12.2021

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017ರ ಮುಂದುವರೆದ ತಿದ್ದುಪಡಿ ಮಾಡಿ, ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅಂದರೆ:–

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.** – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಒಂಬತ್ತನೇ ತಿದ್ದುಪಡಿ) ನಿಯಮಗಳು, 2021 ಎಂದು ಕರೆಯಬಹುದು.
(2) ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, 24ನೇ ಸೆಪ್ಟಂಬರ್ 2021ರಿಂದ ಜಾರಿಗೆ ಬಂದಿದೆ ಎಂದು ಪರಿಭಾವಿಸತಕ್ಕದ್ದು:

2. **ನಿಯಮ 10ಎ ತಿದ್ದುಪಡಿ.**– ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನುಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ನಿಯಮ 10ಎರಲ್ಲಿ, ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ;–

(ಎ) "ಬ್ಯಾಂಕ್ ಖಾತೆಯ ವಿವರಗಳು" ಪದಗಳ ನಂತರ "ನೋಂದಾಯಿತ ವ್ಯಕ್ತಿಯ ಶಾಶ್ವತ ಖಾತೆ ಸಂಖ್ಯೆಯ ಆಧಾರದ ಮೇಲೆ ಪಡೆಯಲಾದ ಹಾಗೂ ನೋಂದಾಯಿತ ವ್ಯಕ್ತಿಯ ಹೆಸರಿನಲ್ಲಿರುವ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು, ಮಾಲಿಕತ್ವ ಸಂಸ್ಥೆಯ ಪ್ರಕರಣದಲ್ಲಿ, ಮಾಲೀಕನ ಶಾಶ್ವತ ಖಾತೆ ಸಂಖ್ಯೆಯನ್ನು ಮಾಲೀಕನ ಆಧಾರ ಸಂಖ್ಯೆಯೊಂದಿಗೆ ಸೇರಿಸತಕ್ಕದ್ದು."

3. **ಹೊಸ ನಿಯಮ 10ಬಿಯ ಸೇರ್ಪಡೆ.**– ಸದರಿ ನಿಯಮಗಳ ನಿಯಮ 10ಎ ನಂತರ, ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"**10ಬಿ.ನೋಂದಾಯಿತ ವ್ಯಕ್ತಿಯ ಆಧಾರ್** ಅಧಿಪ್ರಮಾಣೀಕರಣ.–ನಿಯಮ 10ರ ಅಡಿಯಲ್ಲಿ ಒಂದು ನೋಂದಣಿ ಪ್ರಮಾಣ ಪತ್ರವನ್ನು ನೀಡಲಾಗಿರುವ, ಪ್ರಕರಣ 25ರ ಉಪ ಪ್ರಕರಣ (6ಡಿ)ಯ ಅಡಿಯಲ್ಲಿ ಅಧಿಸೂಚಿಸಿರುವ ವ್ಯಕ್ತಿಯನ್ನು ಹೊರತುಪಡಿಸಿದಂತಹ ನೋಂದಾಯಿತ ವ್ಯಕ್ತಿಯು, ಕೆಳಕಂಡ ಕೋಷ್ಟಕ(2)ರಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳಿಗಾಗಿ ಅರ್ಹರಾಗಲು, ಮಾಲಿಕತ್ವ ಸಂಸ್ಥೆಯಾಗಿದ್ದಲ್ಲಿ ಮಾಲೀಕನ, ಅಥವಾ ಪಾಲುದಾರ ಉದ್ದಿಮೆಯಾಗಿದ್ದಲ್ಲಿ, ಯಾವುದೇ ಪಾಲುದಾರನ, ಅಥವಾ ಅವಿಭಾಜ್ಯ ಹಿಂದೂ ಕುಟುಂಬವಾಗಿದ್ದಲ್ಲಿ, ಅದರ ಕರ್ತನ, ಅಥವಾ ಕಂಪನಿಯಾಗಿದ್ದಲ್ಲಿ ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣಾವಧಿಯ ನಿರ್ದೇಶಕನ, ಅಥವಾ ವ್ಯಕ್ತಿಗಳ ಒಂದು ಕೂಟ ಅಥವಾ ವ್ಯಕ್ತಿಗಳ ನಿಕಾಯ ಅಥವಾ ಒಂದು ಸಂಘವಾಗಿದ್ದಲ್ಲಿ, ಅದರ ವ್ಯವಸ್ಥಾಪಕ ಸಮಿತಿಯ ಯಾವುದೇ ಸದಸ್ಯರುಗಳ ಹಾಗೂ ಅವರುಗಳ ಅಧಿಕೃತ ಸಹಿದಾರನ ಆಧಾರ್ ಸಂಖ್ಯೆಯು ಅಧಿಪ್ರಮಾಣೀಕರಣಕ್ಕೆ ಒಳಗೊಳ್ಳತಕ್ಕದ್ದು:

ಕೋಷ್ಟಕ

ಕ್ರ.ಸಂ	ಉದ್ದೇಶ
(1)	(2)
1.	ನಿಯಮ 23ರ ಅಡಿಯಲ್ಲಿ ನಮೂನೆ ಜಿಎಸ್‌ಟಿ ಆರ್‌ಇಜಿ–21ರಲ್ಲಿ ನೋಂದಣಿ ರದ್ಧತಿಯ ಮರುಸ್ಥಾಪಿಸುವಿಕೆಯ ಅರ್ಜಿ ಸಲ್ಲಿಸವಿಕೆಗಾಗಿ
2.	ನಿಯಮ 89ರ ಅಡಿಯಲ್ಲಿ ನಮೂನೆ ಆರ್‌ಎಫ್‌ಡಿ–01ರಲ್ಲಿ ಮರುಪಾವತಿ ಅರ್ಜಿ ಸಲ್ಲಿಸುವಿಕೆಗಾಗಿ
3.	ಭಾರತದಿಂದ ಹೊರಗಡೆ ರಫ್ತು ಮಾಡಲಾದ ಸರಕುಗಳ ಮೇಲೆ ಸಂದಾಯ ಮಾಡಿದ ಏಕೀಕೃತ ತೆರಿಗೆಯ ನಿಯಮ 96ರ ಅಡಿಯಲ್ಲಿನ ಮರುಪಾವತಿಗಾಗಿ

ಪರಂತು, ಆಧಾರ ಸಂಖ್ಯೆಯ ಅಧಿಪ್ರಮಾಣೀಕರಣಕ್ಕೆ ಒಳಗೊಳ್ಳುವುದು ಅಗತ್ಯವಿರುವಂತಹ, ವ್ಯಕ್ತಿಗೆ ಒಂದು ವೇಳೆ ಆಧಾರ್ ಸಂಖ್ಯೆಯು ನೀಡಲಾಗದಿದ್ದಲ್ಲಿ, ಅಂಥ ವ್ಯಕ್ತಿಗಳು ಈ ಕೆಳಕಂಡ ಗುರುತಿನ ದಸ್ತಾವೇಜುಗಳನ್ನು ಸಲ್ಲಿಸತಕ್ಕದ್ದು, ಅಂದರೆ:–

(ಎ) ಅವಳ/ಅವನ ಆಧಾರ್ ನೋಂದಣಿಯ ಗುರುತಿನ ಚೀಟಿ; ಮತ್ತು

(ಬಿ)

(i) ಭಾವ ಚಿತ್ರದೊಂದಗಿನ ಬ್ಯಾಂಕ್ ಖಾತಾ ಪುಸ್ತಕ; ಅಥವಾ

(ii) ಭಾರತ ಚುನಾವಣಾ ಆಯೋಗದಿಂದ ನೀಡಲಾಗಿರುವ, ಮತದಾರರ ಗುರುತಿನ ಚೀಟಿ; ಅಥವಾ

(iii) ಪಾಸ್‌ಪೋರ್ಟ್; ಅಥವಾ

(iv) ಮೋಟಾರು ವಾಹನಗಳ ಅಧಿನಿಯಮದ, 1988(1988ರ 59) ಅಡಿಯಲ್ಲಿ ಪರವಾನಗಿ ಪ್ರಾಧಿಕಾರದಿಂದ ನೀಡಲಾಗಿರುವ ವಾಹನ ಚಾಲನಾ ಪರವಾನಗಿ:

ಮತ್ತು ಪರಂತು, ಅಂಥ ವ್ಯಕ್ತಿಯು ಆಧಾರ ಸಂಖ್ಯೆಯು ನಿಯತಗೊಂಡ ಮೂವತ್ತು ದಿನಗಳ ಒಳಗಾಗಿ ಆಧಾರ್ ಸಂಖ್ಯೆಯು ಅಧಿಪ್ರಮಾಣೀಕರಣಕ್ಕೆ ಒಳಗೊಳ್ಳತಕ್ಕದ್ದು.";

4. ನಿಯಮ 23ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 23ರಲ್ಲಿ, ಉಪ ನಿಯಮ (1)ರಲ್ಲಿ, ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, "ಆತನ ಸ್ವಪ್ರೇರಣೆಯ ಮೇರೆಗೆ" ಪದಗಳ
ನಂತರ "ನಿಯಮ 10ಬಿಯ ಉಪಬಂಧಗಳಿಗೆ ಒಳಪಟ್ಟು" ಎಂಬ ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು
ಸೇರಿಸತಕ್ಕದ್ದು;

5. ನಿಯಮ 45ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 45ರಲ್ಲಿ, ಉಪ ನಿಯಮ (3)ರಲ್ಲಿ, 1ನೇ ಅಕ್ಟೋಬರ್
2021ರಿಂದ ಜಾರಿಗೆ ಬರುವಂತೆ,

(i) "ತ್ರೈಮಾಸಿಕದ ಅವಧಿಯಲ್ಲಿ" ಪದಗಳಿಗಾಗಿ, ನಿರ್ದಿಷ್ಟಪಡಿಸಿದ ಅವಧಿಯಲ್ಲಿ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ಸದರಿ ತ್ರೈಮಾಸಿಕ" ಪದಗಳಿಗಾಗಿ, "ಸದರಿ ಅವಧಿ" ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iii) ಪರಂತುಕದ ನಂತರ, ಈ ಕೆಳಕಂಡ ವಿವರಣೆಯನ್ನು ಸೇರಿಸತಕ್ಕದ್ದು, ಅಂದರೆ:–

"ವಿವರಣೆ.– ಈ ಉಪ ನಿಯಮದ ಉದ್ದೇಶಗಳಿಗಾಗಿ, ಪದಾವಳಿಯಾದ "ನಿರ್ದಿಷ್ಟಪಡಿಸಿದ ಅವಧಿ" ಅನ್ನುವುದು ಕೆಳಕಂಡಂತಾಗಿರತಕ್ಕದ್ದು.–

(ಎ) ನಿಕಟಪೂರ್ವ ಹಣಕಾಸಿನ ವರ್ಷದಲ್ಲಿ ಐದು ಕೋಟಿ ರೂಪಾಯಿಗಳಷ್ಟು ಸಮಗ್ರ ವಹಿವಾಟನ್ನು ಮೀರಿರುವ ಪ್ರಧಾನಕರ್ತನಿಗೆ ಸಂಬಂಧಿಸಿದಂತೆ, 1ನೇ ಏಪ್ರಿಲ್ ಹಾಗೂ 1ನೇ ಅಕ್ಟೋಬರ್ ದಿನದಿಂದ ಪ್ರಾರಂಭಗೊಳ್ಳುವ ಅನುಕ್ರಮ ಆರು ತಿಂಗಳ ಅವಧಿ; ಮತ್ತು

(ಬಿ) ಯಾವುದೇ ಇತರೇ ಪ್ರಕರಣದಲ್ಲಿ ಒಂದು ಹಣಕಾಸು ವರ್ಷ.";

6. ನಿಯಮ 59ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 59ರಲ್ಲಿ, ಉಪ ನಿಯಮ (6)ರಲ್ಲಿ, 1ನೇ ಜನವರಿ 2022ರಿಂದ ಜಾರಿಗೆ ಬರುವಂತೆ,–

(i) ಖಂಡ (ಎ)ನಲ್ಲಿ "ಹಿಂದಿನ ಎರಡು ತಿಂಗಳುಗಳಿಗಾಗಿ" ಪದಗಳಿಗಾಗಿ, "ಹಿಂದಿನ ತಿಂಗಳಿಗಾಗಿ" ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಖಂಡ (ಸಿ)ಯನ್ನು ಬಿಟ್ಟುಬಿಡತಕ್ಕದ್ದು;

7. ನಿಯಮ 89ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 89ರಲ್ಲಿ,–

(i) ಉಪ ನಿಯಮ (1)ರಲ್ಲಿ, ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, "ಸಲ್ಲಿಸಬಹುದು" ಪದಗಳ ನಂತರ "ನಿಯಮ 10ಬಿಯ ಉಪಬಂಧಗಳಿಗೆ ಒಳಪಟ್ಟು" ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) ಉಪನಿಯಮ (1)ರ ನಂತರ ಈ ಕೆಳಕಂಡ ಉಪನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"(1ಎ) ವ್ಯಕ್ತಿಯು ಆತನಿಂದ ರಾಜ್ಯದೊಳಗಿನ ಪೂರೈಕೆ ಎಂದು ಪರಿಗಣಿತವಾಗಿ ತರುವಾಯ ಅಂತರ್–ರಾಜ್ಯ ಪೂರೈಕೆ ಎಂದು ತೀರ್ಮಾನವಾದ ವಹಿವಾಟಿಗೆ ಸಂಬಂಧಿಸಿದಂತೆ ಸಂದಾಯ ಮಾಡಿರುವ ಯಾವುದೇ ತೆರಿಗೆಯನ್ನು ಅಧಿನಿಯಮದ ಪ್ರಕರಣ 77ರ ಅಡಿಯಲ್ಲಿ ಮರುಪಾವತಿಯ ಕ್ಲೇಮನ್ನು ಮಾಡುವ ಯಾವುದೇ ವ್ಯಕ್ತಿಯು, ಅಂತರ್–ರಾಜ್ಯ ಪೂರೈಕೆಯ ಮೇಲೆ ತೆರಿಗೆ ಸಂದಾಯ ಮಾಡಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಗಿಯುವುದರ ಒಳಗಾಗಿ, ವಿದ್ಯುನ್ಮಾನ ರೀತಿಯಲ್ಲಿ ನಮೂನೆ ಜಿಎಸ್‌ಟಿಆರ್–ಆರ್‌ಎಫ್‌ಡಿ–01ರಲ್ಲಿ ಅರ್ಜಿಯನ್ನು ಸಾಮಾನ್ಯ ಪೋರ್ಟಲ್‌ನ ಮುಖಾಂತರ ನೇರವಾಗಿಯಾಗಲಿ ಅಥವಾ ಆಯುಕ್ತರಿಂದ ಅಧಿಸೂಚಿಸಲಾದ ಒಂದು ಸಹಾಯ ಕೇಂದ್ರದ ಮೂಲಕವಾಗಿಯಾಗಲಿ, ಸಲ್ಲಿಸಬಹುದು."

ಪರಂತು, ಸದರಿ ಅರ್ಜಿಯನ್ನು ಈ ಉಪನಿಯಮವು ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ, ಅಂತರ್–ರಾಜ್ಯ ಪೂರೈಕೆಯ ಮೇಲಿನ ಯಾವುದೇ ತೆರಿಗೆ ಸಂದಾಯಕ್ಕೆ ಸಂಬಂಧಪಟ್ಟಂತೆ, ಈ ಉಪನಿಯಮವು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಗಿಯುವುದರ ಒಳಗಾಗಿ ಸಲ್ಲಿಸಬಹುದು."

8. ನಿಯಮ 96ರ ತಿದ್ದುಪಡಿ.– ಸದರಿ ನಿಯಮಗಳ ನಿಯಮ 96ರಲ್ಲಿ, ಉಪ ನಿಯಮ (1)ರಲ್ಲಿ, ಖಂಡ (ಬಿ)ಯ
ನಂತರ ಈ ಕೆಳಗಿನ ಖಂಡವನ್ನು ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಸೇರಿಸತಕ್ಕದ್ದು:–

"(ಸಿ) ಅರ್ಜಿದಾರನು, ನಿಯಮ 10ಬಿಯಲ್ಲಿ ಉಪಬಂಧಿಸಿರುವ ವಿಧಾನದಲ್ಲಿ ಆಧಾರ್ ಸಂಖ್ಯೆಯು ಅಧಿಪ್ರಮಾಣೀಕರಣಕ್ಕೆ ಒಳಗೊಳ್ಳವುದು;"

9. ಹೊಸ ನಿಯಮ 96ಸಿಯ ಸೇರ್ಪಡೆ.– ಸದರಿ ನಿಯಮಗಳ ನಿಯಮ 96ಬಿಯ ನಂತರ, ಅಧಿಸೂಚಿಸಬಹುದಾದ

ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಅಂದರೆ:–

"96ಸಿ. ಮರುಪಾವತಿಯ ಜಮೆಗಾಗಿ ಬ್ಯಾಂಕ್ ಖಾತೆ.– ನಿಯಮ 91ರ ಉಪನಿಯಮ (3), ನಿಯಮ 92 ಮತ್ತು ನಿಯಮ 94ರ ರ ಉಪನಿಯಮ (4)ರ ಉದ್ದೇಶಗಳಿಗಾಗಿ, "ಬ್ಯಾಂಕ್ ಖಾತೆ" ಅನ್ನತಕ್ಕದ್ದು,ಅರ್ಜಿದಾರನ ಹೆಸರಿನಲ್ಲಿರುವ, ಮತ್ತು ಆತನ ಶಾಶ್ವತ ಖಾತೆ ಸಂಖ್ಯೆಯ ಮೇಲೆ ಪಡೆಯಲಾದ ಅರ್ಜಿದಾರನ ಅಂಥ ಬ್ಯಾಂಕ್ ಖಾತೆಯಾಗಿರತಕ್ಕದ್ದು:

ಪರಂತು, ಮಾಲಿಕತ್ವ ಸಂಸ್ಥೆಯ ಪ್ರಕರಣದಲ್ಲಿ, ಮಾಲೀಕನ ಶಾಶ್ವತ ಖಾತೆ ಸಂಖ್ಯೆಯನ್ನು ಸಹ ಮಾಲೀಕನ ಆಧಾರ್ ಸಂಖ್ಯೆಯೊಂದಿಗೆ ಜೋಡಿಸತಕ್ಕದ್ದು.";

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧಿನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಐ/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು,ದಿನಾಂಕ:10.01.2022

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 164ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ 2017ರ ನಿಯಮಗಳಿಗೆ ಮುಂದುವರೆದ ತಿದ್ದುಪಡಿ ತರಲು ಈ ಕೆಳಗಿನ ನಿಯಮಗಳನ್ನು ರಚಿಸಿದೆ.ಅಂದರೆ:–

ನಿಯಮಗಳು

2. ಶೀರ್ಷಿಕೆ ಮತ್ತು ಪ್ರಾರಂಭ. – (1) ಈ ನಿಯಮಗಳನ್ನು ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ನಿಯಮಗಳು, 2022 ಎಂದು ಕರೆಯತಕ್ಕದ್ದು.

(2)ಈ ನಿಯಮಗಳಲ್ಲಿ ಉಪಬಂಧಿಸಿದುದನ್ನುಳಿದು, ಇವುಗಳನ್ನು 1ನೇ ಡಿಸೆಂಬರ್ 2021 ರಿಂದ ಜಾರಿಗೆ ಬರಲಾಗಿದೆಯೆಂದು ಪರಿಭಾವಿಸತಕ್ಕದ್ದು.

2. ನಿಯಮ 137ರ ತಿದ್ದುಪಡಿ. – ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು,2017, (ಇನ್ನು ಮುಂದೆ "ಸದರಿ ನಿಯಮ" ಎಂದು ಉಲ್ಲೇಖಿಸಲಾಗಿದೆ), ನಿಯಮ 137 ರಲ್ಲಿ,–

(i) "ಎರಡು ವರ್ಷಗಳು" ಎಂಬ ಪದಗಳಿಗೆ, "ನಾಲ್ಕು ವರ್ಷಗಳು" ಪದಗಳನ್ನು 18ನೇ ಜುಲೈ 2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು; ಮತ್ತು

(ii) "ನಾಲ್ಕು ವರ್ಷಗಳು" ಎಂಬ ಪದಗಳಿಗೆ, "ಐದು ವರ್ಷಗಳು" ಪದಗಳನ್ನು 30ನೇ ನವೆಂಬರ್ 2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು;

3. ನಮೂನೆ ಜಿಎಸ್‌ಟಿ ಡಿಆರ್‌ಸಿ– 03 **ತಿದ್ದುಪಡಿ. – ಸದರಿ ನಿಯಮಗಳ** ನಮೂನೆ ಜಿಎಸ್‌ಟಿ ಡಿಆರ್‌ಸಿ– 03 ರಲ್ಲಿ,–

(i) ಶಿರೋನಾಮೆಯಲ್ಲಿ, "ಅಥವಾ ವಿವರ ಪಟ್ಟಿಗೆ", ಪದಗಳ ನಂತರ, "ನಮೂನೆ ಡಿಆರ್‌ಸಿ–01ಎ ಯಿಂದ ಖಚಿತ ಪಡಿಸಿದ ತೆರಿಗೆಯ ತಿಳುವಳಿಕೆಯ ಪತ್ರ" ಪದಗಳು, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಸೇರಿಸತಕ್ಕದ್ದು.

(ii) ಐಟಂ 3, ಅಂಕಣ 3ರಲ್ಲಿ, "ಲೆಕ್ಕ ಪರಿಶೋದನೆ, ತನಿಖೆ, ಸ್ವಯಂ ಪ್ರೇರಿತ, ಎಸ್‌ಸಿಎನ್, ವಾರ್ಷಿಕ ರಿಟರ್ನ್, ಮರುಹೊಂದಣಿಕೆ ವಿವರ ಪಟ್ಟಿ, ಇತರೆ (ನಿರ್ಧಿಷ್ಟ ಪಡಿಸಿ)" ಪದಗಳು ಮತ್ತು ಅಕ್ಷರಗಳ ಬದಲಾಗಿ, "ಲೆಕ್ಕ ಪರಿಶೋಧನೆ, ತನಿಖೆ ಅಥವಾ ತಪಾಸಣೆ, ಸ್ವಯಂ ಪ್ರೇರಿತ, ಎಸ್‌ಸಿಎನ್, ವಾರ್ಷಿಕ ರಿಟರ್ನ್, ಮರುಹೊಂದಣಿಕೆ ವಿವರ ಪಟ್ಟಿ, ಸೂಕ್ಷ್ಮ ಪರಿಶೀಲನೆ, ನಮೂನೆ ಡಿಆರ್‌ಸಿ–01ಎ ರಲ್ಲಿ ಖಚಿತ ಪಡಿಸಿದ ತೆರಿಗೆಯ ತಿಳುವಳಿಕೆಯ ಪತ್ರ, ತಪ್ಪು ಹೊಂದಾಣಿಕೆ (ನಮೂನೆ ಜಿಎಸ್‌ಟಿಆರ್–1 ಮತ್ತು ನಮೂನೆ ಜಿಎಸ್‌ಟಿಆರ್–3ಬಿ), ತಪ್ಪು ಹೊಂದಾಣಿಕೆ (ನಮೂನೆ ಜಿಎಸ್‌ಟಿಆರ್–2ಬಿ ಮತ್ತು ನಮೂನೆ ಜಿಎಸ್‌ಟಿಆರ್–3ಬಿ), ಇತರೆ (ನಿರ್ಧಿಷ್ಟ ಪಡಿಸಿ)" ಎಂಬ ಪದಗಳು, ಅಕ್ಷರಗಳು, ಸಂಖ್ಯೆಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು;

(iii) ಐಟಂ 5, ಅಂಕಣ 1ರಲ್ಲಿ, "ನೀಡಿದ ಮೂವತ್ತು ದಿನಗಳ ಒಳಗೆ", ಪದಗಳು ಮತ್ತು ಸಂಖ್ಯೆಗಳು ನಂತರ, "ಸೂಕ್ಷ್ಮ ಪರಿಶೀಲನೆ, ನಮೂನೆ ಡಿಆರ್‌ಸಿ–01ಎ ರಲ್ಲಿ ಖಚಿತ ಪಡಿಸಿದ ತೆರಿಗೆಯ ತಿಳುವಳಿಕೆಯ ಪತ್ರ, ಲೆಕ್ಕ ಪರಿಶೋಧನೆ, ತಪಾಸಣೆ ಅಥವಾ ತನಿಖೆ, ಇತರೆ (ನಿರ್ಧಿಷ್ಟ ಪಡಿಸಿ)" ಎಂಬ ಪದಗಳು, ಅಕ್ಷರಗಳು, ಸಂಖ್ಯೆಗಳು ಮತ್ತು ಆವರಣಗಳನ್ನು ಸೇರಿಸತಕ್ಕದ್ದು; ಮತ್ತು

(iv) ಕ್ರಮ ಸಂಖ್ಯೆ 7, ಕೋಷ್ಟಕದಲ್ಲಿ, ಕೆಳಗಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"

ಕ್ರ. ಸಂ	ತೆರಿಗೆ ಅವಧಿ	ಅಧಿ ನಿಯಮ	ಪೂರೈಕೆಯ ಸ್ಥಳ (ಪಿಒಎಸ್)	ತೆರಿಗೆ/ ಉಪಕರ	ಬ ಡ್ಡಿ	ದಂಡ ಅನ್ವಯ ವಾದಲ್ಲಿ	ಶು ಲ್ಕ	ಇತರೆ	ಒಟ್ಟು	ಉಪಯೋಗಿಸಿದ ಖಾತೆ (ನಗದು/ಜಮಾ)	ಡೆಬಿಟ್ ನಮೂದು ಸಂ.	ಡೆಬಿಟ್ ನಮೂದಿನ ದಿನಾಂಕ
1	2	3	4	5	6	7	8	9	10	11	12	13

"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (4–ಜೆ/2021)
ಸಂಖ್ಯೆ.ಆಇ 02 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 31.12.2021

ಕರ್ನಾಟಕ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ (9 ನೇ ತಿದ್ದುಪಡಿ) ನಿಯಮ 2021ರ ಅನುಸರಣೆಯಲ್ಲಿ, ಅಧಿಸೂಚನೆ (4–**ಹೆಚ್**)2021, **ಸಂಖ್ಯೆ.ಆಇ 02 ಸಿಎಸ್‌ಎಲ್ 2021,** ದಿನಾಂಕ: 7ನೇ ಡಿಸೆಂಬರ್ 2021 ,ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ನಂ.934, ದಿನಾಂಕ: 7ನೇ ಡಿಸೆಂಬರ್ 2021 ರಲ್ಲಿ ಕರ್ನಾಟಕ ಸರ್ಕಾರವು ಪ್ರಕಟಿಸಲಾಗಿದ್ದು, ಅದರನ್ವಯ ನಿಯಮ(3), ನಿಯಮ,(4), ನಿಯಮ (7) ಮತ್ತು (8) ರ ಕಂಡಿಕೆ (i) ರ ನಿಯಮಗಳು 1ನೇ ಜನವರಿ,2022 ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಜಿ.ಎಸ್.ಟಿ ಕಾನೂನು ತೆರಿಗೆ ಅಧಿಸೂಚನೆಗಳು

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (01/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020(ಇ), ಬೆಂಗಳೂರು, ದಿನಾಂಕ: 07.01.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2019ರ (2019ರ ಕರ್ನಾಟಕದ ಅಧಿನಿಯಮ 23) ಪ್ರಕರಣ(1)ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2020ರ ಜನವರಿ 1ನೇ ದಿನವನ್ನು, ಪ್ರಕರಣ 2, ಪ್ರಕರಣ 7, ಪ್ರಕರಣ 10 ಮತ್ತು ಪ್ರಕರಣ 13 ರಿಂದ 20 ಗಳನ್ನು ಹೊರತುಪಡಿಸಿ, ಪ್ರಕರಣ 2 ರಿಂದ 21ರವರೆಗಿನ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (02/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020(ಇ), ಬೆಂಗಳೂರು, ದಿನಾಂಕ: 16.01.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA, ಸಂಖ್ಯೆ:177 ದಿನಾಂಕ: 23ನೇ ಜನವರಿ 2018 ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (02/2018) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 23ನೇ ಜನವರಿ, 2018ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ, ಅಂದರೆ:–

ಸದರಿ ಅಧಿಸೂಚನೆಯ ಮೂರನೆಯ ಪರಂತುಕದಲ್ಲಿ, "10ನೇ ಜನವರಿ 2020" ಸಂಖ್ಯೆಗಳು, ಪದಗಳು, ಮತ್ತು ಅಕ್ಷರಗಳ ಬದಲಾಗಿ, "17ನೇ ಜನವರಿ 2020" ಸಂಖ್ಯೆಗಳು, ಪದಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

2. ಈ ಅಧಿಸೂಚನೆಯು 2020ರ ಜನವರಿ 10ನೇ ದಿನದಿಂದ ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (03/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 27.01.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 48ರ ಉಪನಿಯಮ 4ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಒಂದು ಹಣಕಾಸು ವರ್ಷದಲ್ಲಿ ಒಂದು ನೂರು ಕೋಟಿ ರೂಪಾಯಿಗಳಿಗೂ ಮೀರಿದ ಸಮಗ್ರ ವಹಿವಾಟು ಹೊಂದಿರುವ ನೋಂದಾಯಿತ ವ್ಯಕ್ತಿಯನ್ನು, ಅಂಥ ವರ್ಗದ ನೋಂದಾಯಿತ ವ್ಯಕ್ತಿಗಳಿಗೆ ಸರಕುಗಳು ಅಥವಾ ಸೇವೆಗಳು ಅಥವಾ ಎರಡೂ ಸರಬರಾಜಿಗೆ ಸಂಬಂಧಿಸಿದ ಬೆಲೆಪಟ್ಟಿಯನ್ನು ನಿಯಮ 48ರ ಉಪನಿಯಮ (4)ರ ನಿಯಮಗಳನ್ವಯ ತಯಾರು ಮಾಡುವುದಕ್ಕಾಗಿ, ನೋಂದಾಯಿತ ವ್ಯಕ್ತಿಗಳ ಸಮೂಹವೆಂದು ಅಧಿಸೂಚಿಸುತ್ತದೆ.

2. ಈ ಅಧಿಸೂಚನೆಯು 2020ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (04/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020(ಇ), ಬೆಂಗಳೂರು, ದಿನಾಂಕ: 19.03.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಯಾವ ವಿದೇಶಿ ಕಂಪನಿ, ಕಂಪನಿಗಳ ಕಾಯ್ದೆ, 2013 (2013ರ ಕೇಂದ್ರದ ಕಾಯ್ದೆ 18) ಪ್ರಕರಣ 381ರ, ಉಪಪ್ರಕರಣ (1)ರಡಿ ಹೊರಡಿಸಲಾದ ಅಧಿಸೂಚನೆಯಲ್ಲಿ ವಿಮಾನಯಾನ ಕಂಪನಿಯೆಂದು ಒಳಗೊಂಡಿದ್ದು ಮತ್ತು ಕಂಪನಿಗಳ (ವಿದೇಶಿ ಕಂಪನಿಗಳ ನೋಂದಣಿ) ನಿಯಮಗಳು, 2014ರ ನಿಯಮ 4ರ ಉಪನಿಯಮ 2ನ್ನು ಅನುಸರಿಸುವ ವ್ಯಕ್ತಿಗಳನ್ನು ಈ ಕೆಳಗೆ ವಿವರಿಸಿದ ವಿಶೇಷ ವಿಧಾನಗಳನ್ನು ಪಾಲಿಸತಕ್ಕ ನೋಂದಾಯಿತ ವ್ಯಕ್ತಿಗಳ ವರ್ಗವೆಂದು ಅಧಿಸೂಚಿಸುತ್ತದೆ.

2. ಸದರಿ ವ್ಯಕ್ತಿಗಳು ಸದರಿ ಅಧಿನಿಯಮದ ಪ್ರಕರಣ 44ರ, ಉಪಪ್ರಕರಣ 2ರೊಂದಿಗೆ ಓದಲಾದ ಕರ್ನಾಟಕ ಸರಕು ಮತ್ತು ಸೇವೆ ತೆರಿಗೆಗಳ ನಿಯಮಗಳು, 2017ರ ನಿಯಮ 80ರ ಉಪ ನಿಯಮ (3)ರಡಿ ನಮೂನೆ **ಜಿ.ಎಸ್.ಟಿ.ಆರ್–9ಸಿ** ರಿಟರ್ನ್ನಲ್ಲಿ ಸಮನ್ವಯೀಕರಿಸಿದ ವಿವರಪತ್ರವನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಪರಂತು ಭಾರತೀಯ ವ್ಯಾಪಾರ ಕಾರ್ಯಾಚರಣೆಯ ಬಗ್ಗೆ, ಹಣಕಾಸು ವರ್ಷದ ಪ್ರತಿ ಜಿಎಸ್‌ಟಿಎನ್‌ಗೆ ಸಂಬಂಧಿಸಿದ ಸ್ವೀಕೃತಿ ಮತ್ತು ಬಟವಾಡೆ ತ:ಖ್ತೆಯನ್ನು, ಭಾರತದಲ್ಲಿ ಅಭ್ಯಾಸ ಮಾಡುತ್ತಿರುವ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಒಂದು ಸಂಸ್ಥೆ ಅಥವಾ ಸೀಮಿತ ಹೊಣೆಗಾರಿಕೆಯ ಪಾಲುಗಾರಿಕೆ ಸಂಸ್ಥೆಯ ಅಭ್ಯಾಸ ಮಾಡುತ್ತಿರುವ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ದೃಢೀಕರಿಸಿ, ಹಣಕಾಸು ವರ್ಷದ ನಂತರದ ಸೆಪ್ಟಂಬರ್ 30ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (05/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 27.03.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಇದನ್ನು ಸದರಿ ಅಧಿನಿಯಮ ಎಂದು ಉಲ್ಲೇಖಿಸಿದೆ) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಯಾವ ನೋಂದಾಯಿತ ವ್ಯಕ್ತಿಗಳು (ಇನ್ನು ಮುಂದೆ ಈ ಹಿಂದಿನ ನೋಂದಾಯಿತ ವ್ಯಕ್ತಿ ಎಂದು ಉಲ್ಲೇಖಿಸಿದೆ) ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಟಿ ಕೋಡ್, 2016 ರಡಿಯಲ್ಲಿ (2016ರ ಕೇಂದ್ರೀಯ ಅಧಿನಿಯಮ 31) ರಡಿಯಲ್ಲಿ ಕಾರ್ಪೋರೇಟ್ ಸಾಲಗಾರರಾಗಿರುವರೊ, ಕಾರ್ಪೋರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯಲ್ಲಿದ್ದು ಮತ್ತು ಅವರ ವ್ಯವಹಾರಗಳನ್ನು ಮಧ್ಯಂತರ ನಿರ್ಣಯ ವೃತ್ತಿಪರರು (ಐ.ಆರ್.ಪಿ) ಅಥವಾ ನಿರ್ಣಯ ವೃತ್ತಿಪರರು (ಆರ್.ಪಿ) ನಿರ್ವಹಿಸುತ್ತಿರುವರೊ ಅಂತಹವರು ಐಆರ್‌ಪಿ/ಆರ್‌ಪಿ ನೇಮಕಾತಿಯ ದಿನದಿಂದ, ಕಾರ್ಪೋರೇಟ್ ದಿವಾಳಿತನದ ಪರಿಹಾರ ಪ್ರಕ್ರಿಯೆಗೆ ಒಳಪಡುವ ಅವಧಿಗೆ ಈ ಕೆಳಕಂಡ ವಿಶೇಷ ವಿಧಾನಗಳನ್ನು ಅನುಸರಿಸತಕ್ಕ ವರ್ಗದ ವ್ಯಕ್ತಿಗಳ ಸಮೂಹವೆಂದು ಅಧಿಸೂಚಿಸುತ್ತದೆ.

2. ನೋಂದಣಿ: ಮೇಲೆ ಹೇಳಿದ ವರ್ಗದ ವ್ಯಕ್ತಿಗಳು ಐಆರ್‌ಪಿ/ಆರ್‌ಪಿ ರನ್ನು ನೇಮಕ ಮಾಡಿದ ದಿನದಿಂದ ಕಾರ್ಪೋರೇಟ್ ಸಾಲಗಾರನ ಪ್ರತ್ಯೇಕ ವ್ಯಕ್ತಿ ಎಂದು ಪರಿಗಣಿಸತಕ್ಕದ್ದು ಹಾಗೂ ಈ ಹಿಂದೆ ನೋಂದಾಯಿತನಾಗಿದ್ದ ಪ್ರತಿ ರಾಜ್ಯಗಳಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಐಆರ್‌ಪಿ/ಆರ್‌ಪಿ ರನ್ನು ನೇಮಕ ಮಾಡಿದ ಮೂವತ್ತು ದಿನಗಳೊಳಗೆ

ಹೊಸ ನೋಂದಣಿ ಪಡೆಯಲು ಬಾಧ್ಯರಾಗಿರುತ್ತಾರೆ. (ಇನ್ನು ಮುಂದೆ ಇದನ್ನು ಹೊಸ ನೋಂದಣಿ ಎಂದು ಉಲ್ಲೇಖಿಸಿದೆ)

ಪರಂತು, ಈ ಅಧಿಸೂಚನೆಯ ದಿನಕ್ಕಿಂತ ಮೊದಲೇ ಐಆರ್‌ಪಿ/ಆರ್‌ಪಿರನ್ನು ನೇಮಕ ಮಾಡಿದ್ದಲ್ಲಿ, ಅಂತಹವರು ಅಧಿಸೂಚನೆಯು ಜಾರಿಯಾದ ದಿನದಿಂದ ಮೂವತ್ತು ದಿನಗಳೊಳಗೆ ಐಆರ್‌ಪಿ/ಆರ್‌ಪಿ ನೇಮಕ ಆದ ದಿನದಿಂದ ಅನ್ವಯಿಸುವಂತೆ ನೋಂದಣಿ ಪಡೆದುಕೊಳ್ಳತಕ್ಕದ್ದು.

3. ರಿಟರ್ನ್: ಸದರಿ ವರ್ಗದ ವ್ಯಕ್ತಿಗಳು ನೋಂದಣಿ ಪಡೆದುಕೊಂಡ ನಂತರ, ಸದರಿ ಅಧಿನಿಯಮದ ಪ್ರಕರಣ 40 ರಡಿಯಲ್ಲಿ ಮೊದಲ ರಿಟರ್ನ್‌ನನ್ನು ತಾನು ನೋಂದಣಿಗೆ ಭಾಧ್ಯನಾಗುವ ದಿನಾಂಕದಿಂದ ನೋಂದಣಿ ಮಂಜೂರಾದ ದಿನಾಂಕದವರೆಗೆ ಸಲ್ಲಿಸತಕ್ಕದ್ದು.

4. ಹೂಡುವಳಿ ತೆರಿಗೆ : 1) ಸದರಿ ವರ್ಗದ ವ್ಯಕ್ತಿಗಳು ತಾವು ಐಆರ್‌ಪಿ/ಆರ್‌ಪಿ ರನ್ನು ನೇಮಕ ಮಾಡಿರುವುದರಿಂದ ಅವರ ಮೊದಲನೆಯ ರಿಟರ್ನ್‌ನಲ್ಲಿ ಅವರು ಐಆರ್‌ಪಿ/ಆರ್‌ಪಿ ರನ್ನು ನೇಮಕ ಮಾಡಿದ ದಿನಾಂಕದಿಂದ ಸ್ವೀಕರಿಸಿದ ಸರಕು ಅಥವಾ ಸೇವೆಗಳು ಅಥವಾ ಅವೆರಡರುಗಳ ಪೂರೈಕೆಗೆ ಸಂಬಂಧಿಸಿದಂತೆ, ಈ ಹಿಂದಿನ ನೋಂದಾಯಿತ ವ್ಯಕ್ತಿಯ ಜಿಎಸ್‌ಟಿಐನ್ ಹೊಂದಿದ ಬೆಲೆಪಟ್ಟಿಯಲ್ಲಿನ ಹೂಡುವಳಿ ತೆರಿಗೆಯ ಜಮೆಯನ್ನು, ಮೇಲೆ ಹೇಳಿದ ಅಧಿನಿಯಮದ ಹಾಗೂ ನಿಯಮಗಳ ಅಧ್ಯಾಯ V ರಲ್ಲಿನ ಷರತ್ತುಗಳಿಗೆ ಒಳಪಟ್ಟು, ಮತ್ತು ಸದರಿ ಅಧಿನಿಯಮದ ಪ್ರಕರಣ 16 ರ ಉಪಪ್ರಕರಣ (4) ರ ಉಪಬಂಧಗಳು ಹಾಗೂ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017 ರ ನಿಯಮ 36 ರ ಉಪ ನಿಯಮ (4)ನ್ನು ಹೊರತುಪಡಿಸಿ (ಇನ್ನು ಮುಂದೆ ಇದನ್ನು ಸದರಿ ನಿಯಮಗಳು ಎಂದು ಉಲ್ಲೇಖಿಸಿದೆ) ಪಡೆಯಲು ಅರ್ಹರಾಗಿರುತ್ತಾರೆ.

2) ಈ ಅಧಿಸೂಚನೆಯ ಅಡಿಯಲ್ಲಿ ಸದರಿ ವರ್ಗದ ವ್ಯಕ್ತಿಗಳಿಂದ ಪೂರೈಕೆಯನ್ನು ಸ್ವೀಕರಿಸುತ್ತಿರುವಂತಹ ನೋಂದಾಯಿತ ವ್ಯಕ್ತಿಗಳು, ಐಆರ್‌ಪಿ/ಆರ್‌ಪಿ ರನ್ನು ನೇಮಕಗೊಂಡ ದಿನದಿಂದ ನೋಂದಣಿಯಾದ ದಿನಾಂಕದವರೆಗೆ ಅಥವಾ ಅಧಿಸೂಚನೆ ಜಾರಿಯಾದಂದಿನಿಂದ ಮೂವತ್ತು ದಿನಗಳು, ಇವುಗಳಲ್ಲಿ ಯಾವುದು ಮೊದಲೋ ಅದರಂತೆ, ಹಿಂದೆ ನೋಂದಾಯಿತ ವ್ಯಕ್ತಿಯ ಜಿಎಸ್‌ಟಿಐನ್ ಹೊಂದಿದ ಬೆಲೆಪಟ್ಟಿಗಳಲ್ಲಿನ ಹೂಡುವಳಿ ತೆರಿಗೆಯನ್ನು ಸದರಿ ಅಧಿನಿಯಮದ ಹಾಗೂ ನಿಯಮಗಳ ಅಧ್ಯಾಯ V ರಲ್ಲಿನ ಷರತ್ತುಗಳಿಗೆ ಒಳಪಟ್ಟು, ನಿಯಮ 36 ರ ಉಪನಿಯಮ (4)ನ್ನು ಹೊರತುಪಡಿಸಿ, ಪಡೆಯಲು ಅರ್ಹರಾಗಿರುತ್ತಾರೆ.

3) ಪ್ರಸ್ತುತ ಚಾಲ್ತಿಯಿರುವ ನೋಂದಣಿಯಲ್ಲಿ ಐಆರ್‌ಪಿ/ಆರ್‌ಪಿ ರವರು ನಗದು ಲೆಡ್ಜರ್‌ನಲ್ಲಿ ಠೇವಣಿ ಮಾಡಿದ ಯಾವುದೇ ಮೊತ್ತವನ್ನು ಐಆರ್‌ಪಿ/ಆರ್‌ಪಿ ರವರನ್ನು ನೇಮಕಮಾಡಿದ ದಿನದಿಂದ ಅಧಿಸೂಚನೆಯಡಿ ನೋಂದಾಯಿತರಾದ ದಿನದವರೆಗೆ, ಈ ಹಿಂದಿನ ನೋಂದಾಯಿತ ವ್ಯಕ್ತಿಗೆ ಮರುಪಾವತಿ ಪಡೆಯಲು ಲಭ್ಯವಿರತಕ್ಕದ್ದು.

ವಿವರಣೆ: ಈ ಅಧಿಸೂಚನೆಯಲ್ಲಿನ ಉದ್ದೇಶಕ್ಕಾಗಿ "ಕಾರ್ಪೋರೇಟ್ ಸಾಲಗಾರ", "ಕಾರ್ಪೋರೇಟ್ ಇನ್‌ಸಾಲ್ವೆನ್ಸಿ ರೆಸಲ್ಯೂಷನ್ ಪ್ರೊಫೆಷನಲ್ ", "ಇಂಟೆರಿಮ್ ರೆಸಲ್ಯೂಷನ್ ಪ್ರೊಫೆಷನಲ್ಸ್" ಮತ್ತು "ರೆಸಲ್ಯೂಶನ್ ಪ್ರೊಫೆಷನಲ್ಸ್" ಎಂಬ ಪದಗಳಿಗೆ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಕೋಡ್, 2016 (2016ರ ಕೇಂದ್ರ ಅಧಿನಿಯಮ 31) ರಲ್ಲಿ ನಿಯೋಜಿಸಿದ ಅರ್ಥವನ್ನೇ ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (06/2020)

ಸಂಖ್ಯೆ.ಆಇ 03 ಸಿಎಸ್‌ಎಲ್ 2020(ಇ), ಬೆಂಗಳೂರು, ದಿನಾಂಕ: 27.03.2020.

ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017 ಕರ್ನಾಟಕದ ಅಧಿನಿಯಮ 27), ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಖ್ಯೆ.322, 2019ರ ಏಪ್ರಿಲ್ 23ನೇ ದಿನದಂದು ಪ್ರಕಟಿಸಿದ ಕರ್ನಾಟಕ ಸರ್ಕಾರದ ಅಧಿಸೂಚನೆ (08/2019)ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ:23.04.2019 ಗೆ ಈ ಕೆಳಕಂಡ ತಿದ್ದುಪಡಿ ಮಾಡಿದೆ. ಅಂದರೆ:–

ಮೇಲೆ ಹೇಳಿದ ಅಧಿಸೂಚನೆಯ ಕಂಡಿಕೆ 2ರಲ್ಲಿ, ಈ ಕೆಳಕಂಡ ಉಪಬಂಧವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು ಸದರಿ ವ್ಯಕ್ತಿಗಳು ಯಾರು, ಸ್ವಯಂ ನಿರ್ಧರಿಸಲಾದ ತೆರಿಗೆಯನ್ನು ಪಾವತಿಸಿದ್ದರ ಬಗ್ಗೆ ನಮೂನೆ ಜಿಎಸ್‌ಟಿ ಸಿಎಂಪಿ–08 ರಲ್ಲಿ ವಿವರಗಳನ್ನು ಒದಗಿಸುವುದರ ಬದಲಾಗಿ, ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017 (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಿದೆ) ರಡಿ ನಮೂನೆ ಜಿಎಸ್‌ಟಿಆರ್–3ಬಿ ಯನ್ನು 2019–20ನೇ ಹಣಕಾಸು ವರ್ಷದಲ್ಲಿನ ತೆರಿಗೆ ಅವಧಿಗಳಿಗೆ ಒದಗಿಸಿದ್ದಲ್ಲಿ, ಅಂತಹ ಕರದಾತರು ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ಪೂರೈಕೆಗಳ ಪಟ್ಟಿಯನ್ನು ಸದರಿ ನಿಯಮಗಳಡಿ ನಮೂನೆ ಜಿಎಸ್‌ಟಿಆರ್–1 ರಲ್ಲಿ ಅಥವಾ ಸ್ವಯಂ ನಿರ್ಧರಿಸಲಾದ ತೆರಿಗೆ ಪಾವತಿಯ ವಿವರಗಳನ್ನು ನಮೂನೆ ಜಿಎಸ್‌ಟಿ ಸಿಎಂಪಿ–08 ರಲ್ಲಿ 2019–20ನೇ ಹಣಕಾಸು ವರ್ಷದ ಎಲ್ಲಾ ತೆರಿಗೆ ಅವಧಿಗಳಿಗೆ ಸಲ್ಲಿಸುವ ಅಗತ್ಯತೆ ಇರುವುದಿಲ್ಲ."

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (07/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020(ಇ), ಬೆಂಗಳೂರು, ದಿನಾಂಕ: 27.03.2020.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017ರ (ಇನ್ನು ಮುಂದೆ ಇದನ್ನು ಸದರಿ ನಿಯಮಗಳು ಎಂದು ಉಲ್ಲೇಖಿಸಿದೆ) ನಿಯಮ 48 ರ ಉಪನಿಯಮ (4)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ಕರ್ನಾಟಕ ರಾಜ್ಯ ಪತ್ರದ ಸಂಪುಟ 155, ಸಂಚಿಕೆ 06 2020ರ ಫೆಬ್ರವರಿ 6ನೇ ದಿನದಂದು ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (03/2020) ಸಂಖ್ಯೆ ಆಇ 02 ಸಿಎಸ್‌ಎಲ್ 2020, ದಿನಾಂಕ 27–01–2020 ರನ್ನು ರದ್ದುಪಡಿಸಿ, ಅಂತಹ ರದ್ದುಪಡಿಸುವಿಕೆಗೆ ಮುನ್ನಾ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಕರ್ನಾಟಕ ಸರ್ಕಾರವು, ನಿಯಮ 54ರ ಉಪ ನಿಯಮ(2), (3), (4) ಮತ್ತು (4ಎ) ಇದರಲ್ಲಿ ಉಲ್ಲೇಖಿಸಿದವುಗಳನ್ನು ಹೊರತು ಪಡಿಸಿ, ಯಾವ ನೋಂದಾಯಿತ ವ್ಯಕ್ತಿಯ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ ಒಂದು ನೂರು ಕೋಟಿಯನ್ನು ಮೀರುವುದೊ ಅಂತಹವರು, ನಿಯಮ 48 ರ ಉಪ ನಿಯಮ (4) ರಡಿಯಲ್ಲಿ ಸರಕು ಅಥವಾ ಸೇವೆಗಳ ಅಥವಾ ಅವುಗಳೆರಡನ್ನು ನೋಂದಾಯಿತ ವ್ಯಕ್ತಿಗಳಿಗೆ ಪೂರೈಕೆ ಮಾಡಿರುವುದಕ್ಕೆ ಸಂಬಂಧಿಸಿದ ಬೆಲೆಪಟ್ಟಿಯನ್ನು ಹಾಗೂ ಇತರೆ ನಿಗದಿತ ದಸ್ತಾವೇಜುಗಳನ್ನು ಮೇಲಿನ ನಿಯಮಾನುಸಾರ ಸಿದ್ಧಪಡಿಸತಕ್ಕ ವರ್ಗದ ನೋಂದಾಯಿತ ವ್ಯಕ್ತಿಯೆಂದು ಈ ಮೂಲಕ ಅಧಿಸೂಚಿಸಿದೆ.

2. ಈ ಅಧಿಸೂಚನೆಯು 2020ರ ಅಕ್ಟೋಬರ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (08/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020(ಇ), ಬೆಂಗಳೂರು, ದಿನಾಂಕ: 27.03.2020.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017 ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಿದೆ) 46 ನೇ ನಿಯಮದ ಆರನೇ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಮತ್ತು ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಖ್ಯೆ.1080, 2019ರ ಡಿಸೆಂಬರ್ 21ನೇ ದಿನದಂದು ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (24/2019) ಸಂಖ್ಯೆ ಆಇ 47 ಸಿಎಸ್‌ಎಲ್ 2017, ದಿನಾಂಕ 21ನೇ ಡಿಸೆಂಬರ್ 2019ದ್ದನ್ನು ರದ್ದುಪಡಿಸಿ, ಅಂತಹ ರದ್ದುಪಡಿಸುವಿಕೆಗೆ ಮುನ್ನಾ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಕರ್ನಾಟಕ ಸರ್ಕಾರವು, ಈ

ಮೂಲಕ ಅಧಿಸೂಚಿಸುವುದೇನೆಂದರೆ, ಒಂದು ಹಣಕಾಸು ವರ್ಷದಲ್ಲಿ ಸಮಗ್ರ ವಹಿವಾಟು ಐದು ನೂರು ಕೋಟಿಯನ್ನು ಮೀರಿದ ನೋಂದಾಯಿತ ವ್ಯಕ್ತಿಯಿಂದ ನಿಯಮ 54 ರ ಉಪ ನಿಯಮಗಳು (2),(3),(4) ಮತ್ತು (4ಎ) ಗಳಡಿಯಲ್ಲಿ ಉಲ್ಲೇಖಿಸಿದವರನ್ನು ಹೊರತುಪಡಿಸಿ ಮತ್ತು ಏಕೀಕೃತ ಸರಕು ಮತು ಸೇವೆಗಳ ಅಧಿನಿಯಮ, 2017 ಪ್ರಕರಣ 14 ರಲ್ಲಿ ಉಲ್ಲೇಖಿಸಿದ ನೋಂದಾಯಿತ ವ್ಯಕ್ತಿಯು ಅನೋಂದಾಯಿತ ವ್ಯಕ್ತಿಗೆ ನೀಡಲ್ಪಟ್ಟ ಒಂದು ಬೆಲೆಪಟ್ಟಿಯು (ಇನ್ನು ಮುಂದೆ ಬಿ2ಸಿ ಬೆಲೆಪಟ್ಟಿ ಎಂದು ಉಲ್ಲೇಖಿಸಿದೆ) ಡೈನಾಮಿಕ್ ಕ್ವಿಕ್ ರೆಸ್ಪಾನ್ಸ್ (ಕ್ಯೂ ಆರ್) ಕೋಡ್ ಹೊಂದಿರತಕ್ಕದ್ದು:

ಪರಂತು ಅಂಥ ನೋಂದಾಯಿತ ವ್ಯಕ್ತಿಯು ಸ್ವೀಕೃತಿದಾರರಿಗೆ ಡಿಜಿಟಲ್ ಪ್ರದರ್ಶನದ ಮೂಲಕವಾಗಿ ಡೈನಾಮಿಕ್ ಕ್ವಿಕ್ ರೆಸ್ಪಾನ್ಸ್ (ಕ್ಯೂ ಆರ್) ಕೋಡ್ ಅನ್ನು ಲಭ್ಯ ಮಾಡಿದ್ದರೆ, ಅಂತಹ ನೋಂದಾಯಿತ ವ್ಯಕ್ತಿಯಿಂದ ನೀಡಲಾದ ಡೈನಾಮಿಕ್ ಕ್ವಿಕ್ ರೆಸ್ಪಾನ್ಸ್ (ಕ್ಯೂ ಆರ್) ಕೋಡ್ ಅನ್ನು ಬಳಸಿಕೊಂಡು ಪಾವತಿಯ ಅಡ್ಡ ಉಲ್ಲೇಖವನ್ನು ಹೊಂದಿರುವ ಅಂತಹ ಬಿ2ಸಿ ಬೆಲೆಪಟ್ಟಿಯು, ಕ್ವಿಕ್ ರೆಸ್ಪಾನ್ಸ್ (ಕ್ಯೂ ಆರ್) ಕೋಡ್ ಹೊಂದಿದೆ ಎಂದು ಪರಿಭಾವಿಸತಕ್ಕದ್ದು.

2. ಈ ಅಧಿಸೂಚನೆಯು 2020ರ ಅಕ್ಟೋಬರ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (09/2020)

ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 02.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017ರ (2017ರ ಕರ್ನಾಟಕದ ಅಧಿನಿಯಮ 27) (ಕರ್ನಾಟಕ ಕಾಯ್ದೆ, 2017ರ 27) ಪ್ರಕರಣ 25ರ ಉಪಪ್ರಕರಣ (6ಡಿ) ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ಪ್ರಕರಣ 25ರ ಉಪ ಪ್ರಕರಣ 6(ಬಿ) ಅಥವಾ 6(ಸಿ) ರಡಿಯ ಉಪಬಂಧಗಳು, ಭಾರತೀಯ ಪ್ರಜೆಯಲ್ಲದ ವ್ಯಕ್ತಿಗೆ ಅಥವಾ ಈ ಕೆಳಕಂಡ ವರ್ಗದ ವ್ಯಕ್ತಿಗಳನ್ನು ಹೊರತುಪಡಿಸಿ ಒಂದು ವರ್ಗದ ವ್ಯಕ್ತಿಗಳಿಗೆ, ಅನ್ವಯಿಸುವುದಿಲ್ಲವೆಂದು ಅಧಿಸೂಚಿಸುತ್ತದೆ. ಅಂದರೆ:–

(ಎ) ಒಬ್ಬ ವ್ಯಕ್ತಿ;

(ಬಿ) ಎಲ್ಲಾ ರೀತಿಯ ಅಧಿಕೃತ ವ್ಯಕ್ತಿ;

(ಸಿ) ವ್ಯವಸ್ಥಾಪಕ ಮತ್ತು ಅಧಿಕೃತ ಪಾಲುದಾರ; ಮತ್ತು

(ಡಿ) ಹಿಂದೂ ಅವಿಭಕ್ತ ಕುಟುಂಬದ ಕರ್ತಾ

2. ಈ ಅಧಿಸೂಚನೆಯು 2020ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (10/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 02.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 25 ರ ಉಪ ಪ್ರಕರಣ (6ಬಿ)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಅಧಿಸೂಚನೆಯು ಜಾರಿಗೆ ಬರುವ ದಿನಾಂಕವನ್ನು, ಒಬ್ಬ ವ್ಯಕ್ತಿಯು ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), ನಿಯಮ 8ರಲ್ಲಿ ನಿರ್ದಿಷ್ಟಪಡಿಸಿದಂತೆ, ಈ ಅಧಿಸೂಚನೆಯ ಜಾರಿಗೆ ಬರುವ ದಿನಾಂಕದಿಂದ, ಒಬ್ಬ ವ್ಯಕ್ತಿಯು ನೋಂದಣಿ ನೀಡಿಕೆಗೆ ಅರ್ಹನಾಗಲು, ಆಧಾರ್ ಸಂಖ್ಯೆಯನ್ನು ಹೊಂದಿರುವ ಪುರಾವೆ ಅಧಿಪ್ರಮಾಣೀಕರಣಕ್ಕೆ ಒದಗಿಸತಕ್ಕದ್ದು.

ಪರಂತು, ಆಧಾರ್ ಸಂಖ್ಯೆಯು ಒಬ್ಬ ವ್ಯಕ್ತಿಗೆ ನೀಡಲಾಗಿರದಿದ್ದಲ್ಲಿ, ನಿಯಮ 9ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪರ್ಯಾಯವಾದ ಮತ್ತು ಕಾರ್ಯಸಾಧ್ಯವಿರುವ ರೀತಿಯ ಗುರುತನ್ನು ನೀಡತಕ್ಕದ್ದು.

2. ಈ ಅಧಿಸೂಚನೆಯು 2020ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (11/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 02.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 25 ರ ಉಪಪ್ರಕರಣ (6ಸಿ)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಅಧಿಸೂಚನೆಯನ್ನು ಜಾರಿಗೆ ಬರುವ ದಿನಾಂಕವನ್ನು,

(ಎ) ಎಲ್ಲಾ ರೀತಿಯ ಅಧಿಕೃತ ಸಹಿ ಮಾಡುವವರು;

(ಬಿ) ಪಾಲುದಾರಿಕೆ ಸಂಸ್ಥೆಯ ವ್ಯವಸ್ಥಾಪಕ ಮತ್ತು ಅಧಿಕೃತ ಪಾಲುದಾರ; ಮತ್ತು

(ಸಿ) ಹಿಂದೂ ಅವಿಭಕ್ತ ಕುಟುಂಬದ ಕರ್ತಾ

ಇವರುಗಳು ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ನೋಂದಣಿ ನೀಡಿಕೆಗೆ ಅರ್ಹನಾಗಲು, ಆಧಾರ್ ಸಂಖ್ಯೆಯನ್ನು ಹೊಂದಿರುವ ಪುರಾವೆ ಅಧಿಪ್ರಮಾಣೀಕರಣಕ್ಕೆ ಒದಗಿಸತಕ್ಕದ್ದು.

ಪರಂತು ಸದರಿ ವ್ಯಕ್ತಿಗಳಿಗೆ ನೀಡಲಾಗಿರದಿದ್ದಲ್ಲಿ, ನಿಯಮ 9ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪರ್ಯಾಯವಾದ ಮತ್ತು ಕಾರ್ಯಸಾಧ್ಯವಿರುವ ರೀತಿಯ ಗುರುತನ್ನು ನೀಡತಕ್ಕದ್ದು.

2. ಈ ಅಧಿಸೂಚನೆಯು 2020ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (12/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 02.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.50 ಕೋಟಿಯವರೆಗಿನ ಸಮಗ್ರ ವಹಿವಾಟು ಹೊಂದಿರುವ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳ ಅಥವಾ ಅವೆರೆಡರ ಹೊರಮುಖ ಪೂರೈಕೆಯ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ವಿವರಿಸಿದ ವಿಶೇಷ ವಿಧಾನಗಳನ್ನು ಪಾಲಿಸತಕ್ಕ ನೋಂದಾಯಿತ ವ್ಯಕ್ತಿಗಳ ಸಮೂಹವೆಂದು ಅಧಿಸೂಚಿಸುತ್ತದೆ.

2. ಸದರಿ ನೋಂದಾಯಿತ ವ್ಯಕ್ತಿಗಳು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರಡಿಯಲ್ಲಿ ಕೆಳಗಿನ ಕೋಷ್ಟಕ ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿದ ತ್ರೈಮಾಸಿಕದಲ್ಲಿ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವೆರೆಡರ ಹೊರಮುಖ ಪೂರೈಕೆಯ ವಿವರಗಳನ್ನು **ಜಿಎಸ್‌ಟಿಆರ್–1** ರಲ್ಲಿ ಕೆಳಗಿನ ಕೋಷ್ಟಕ ಅಂಕಣ(3) ರಲ್ಲಿ

ಅನುಗುಣವಾದ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯವರೆಗೆ **ಜಿಎಸ್‌ಟಿಆರ್–1** ರಲ್ಲಿ ವಿವರಗಳನ್ನು ಸಲ್ಲಿಸತಕ್ಕದ್ದು. ಅಂದರೆ:–

ಕೋಷ್ಟಕ

ಕ್ರ.ಸಂ	**ನಮೂನೆ ಜಿ.ಎಸ್.ಟಿ.ಆರ್–1** ರಲ್ಲಿ ವಿವರಗಳನ್ನು ಸಲ್ಲಿಸಲಾಗಿರುವಂತಹ ತ್ರೈಮಾಸಿಕ	**ನಮೂನೆ ಜಿ.ಎಸ್.ಟಿ.ಆರ್–1** ರಲ್ಲಿ ವಿವರಗಳನ್ನು ಸಲ್ಲಿಸುವುದಕ್ಕಾಗಿ ಕಾಲಾವಧಿ
(1)	(2)	(3)
1	ಏಪ್ರಿಲ್, 2020 ರಿಂದ ಜೂನ್, 2020	31ನೇ ಜುಲೈ 2020
2	ಜುಲೈ, 2020 ರಿಂದ ಸೆಪ್ಟಂಬರ್, 2020	31ನೇ ಅಕ್ಟೋಬರ್ 2020

3. ಏಪ್ರಿಲ್ 2020 ರಿಂದ ಸೆಪ್ಟಂಬರ್ 2020ರವರೆಗಿನ ತಿಂಗಳುಗಳಿಗಾಗಿ, ಪ್ರಕರಣ 38ರ ಉಪ ಪ್ರಕರಣ (2) ಅಥವಾ ಸಂಧರ್ಭಾನುಸಾರವಾಗಿ, ವಿವರಗಳನ್ನು ಅಥವಾ ರಿಟರ್ನ್‌ನನ್ನು ಸಲ್ಲಿಸಲು ಕಾಲಾವಧಿಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (13/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 07.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 50ರ ಉಪಪ್ರಕರಣ (1)ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಖ್ಯೆ.610, 2017ರ ಜೂನ್ 29ನೇ ದಿನದಂದು ಪ್ರಕಟಿಸಿದ ಕರ್ನಾಟಕ ಸರ್ಕಾರದ ಅಧಿಸೂಚನೆ (13/2017)ಸಂಖ್ಯೆ ಆಇ 47 ಸಿಎಸ್‌ಎಲ್ 2017, ದಿನಾಂಕ 2017ರ ಜೂನ್ 29ನೇ ಗೆ ಈ ಕೆಳಕಂಡ ತಿದ್ದುಪಡಿ ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯ ಮೊದಲನೆಯ ಕಂಡಿಕೆಯಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ :–

"ಪರಂತು, ಈ ಕೆಳಕಂಡ ಕೋಷ್ಟಕದ ಅಂಕಣ (2)ರಲ್ಲಿ ನಮೂದಾಗಿರುವ ವರ್ಗದ ನೋಂದಾಯಿತ ವ್ಯಕ್ತಿಗಳು ಯಾರು **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ಸಲ್ಲಿಸಬೇಕಾಗಿದ್ದು, ಆದರೆ ಆ ಸಲ್ಲಿಕೆಯನ್ನು ಕೆಳಗೆ ತಿಳಿಸಲಾಗಿರುವ ಕೋಷ್ಟಕದ ಅಂಕಣ (4)ರ ಅನುಗುಣವಾದ ನಮೂದಿನಲ್ಲಿ ತಿಳಿಸಲಾಗಿರುವ ತಿಂಗಳುಗಳಿಗೆ ತೆರಿಗೆ ಪಾವತಿಯೊಂದಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲಗೊಂಡಿದ್ದು, ಆದರೆ ಕೋಷ್ಟಕದ ಅಂಕಣ (5)ರ ಅನುಗುಣವಾದ

ನಮೂದಿನಲ್ಲಿ ತಿಳಿಸಿರುವಂತಹ ಷರತ್ತಿನ ಅನುಸಾರ ಸಲ್ಲಿಸಿದ್ದರೆ, ಸದರಿ ಕೋಷ್ಟಕದ ಅಂಕಣ (3)ರ ನಮೂದಿನಲ್ಲಿ ತಿಳಿಸಿರುವಂತೆ ವಾರ್ಷಿಕ ಬಡ್ಡಿ ದರವು ನಿಗಧಿಯಾಗುತ್ತದೆ. ಅಂದರೆ :–

ಕೋಷ್ಟಕ

ಕ್ರಮ ಸಂಖ್ಯೆ	ನೋಂದಾಯಿತ ವ್ಯಕ್ತಿಗಳ ವರ್ಗ	ಬಡ್ಡಿಯ ದರ	ತೆರಿಗೆ ಅವಧಿ	ಷರತ್ತು
(1)	(2)	(3)	(4)	(5)
1	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳಿಗೆ ಮೀರಿದ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾತರು	ನಿಗಧಿತ ದಿನಾಂಕದಿಂದ 15 ದಿನಗಳವರೆಗೆ ಯಾವುದೇ ಬಡ್ಡಿ ಪಾವತಿ ಇರುವುದಿಲ್ಲ, ಮತ್ತು ತದನಂತರ ಶೇಕಡ 9ರಂತೆ	ಫೆಬ್ರವರಿ 2020, ಮಾರ್ಚ್2020, ಏಪ್ರಿಲ್ 2020	**ನಮೂನೆ ಜಿಎಸ್‌ಟಿಆರ್–3ಬಿ**ಯನ್ನು 2020ರ ಜೂನ್ 24ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
2	ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗೆ ಮೀರಿದ ಮತ್ತು 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾತರು	ಶೂನ್ಯ	ಫೆಬ್ರವರಿ 2020, ಮಾರ್ಚ್2020	**ನಮೂನೆ ಜಿಎಸ್‌ಟಿಆರ್–3ಬಿ**ಯನ್ನು 2020ರ ಜೂನ್ 29ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
			ಏಪ್ರಿಲ್ 2020	**ನಮೂನೆ ಜಿಎಸ್‌ಟಿಆರ್–3ಬಿ**ಯನ್ನು 2020ರ ಜೂನ್ 30ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
3	ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳವರೆಗೆ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾತರು	ಶೂನ್ಯ	ಫೆಬ್ರವರಿ, 2020	**ನಮೂನೆ ಜಿಎಸ್‌ಟಿಆರ್–3ಬಿ**ಯನ್ನು 2020ರ ಜೂನ್ 30ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
			ಮಾರ್ಚ್, 2020	**ನಮೂನೆ ಜಿಎಸ್‌ಟಿಆರ್–3ಬಿ**ಯನ್ನು 2020ರ ಜುಲೈ 3ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
			ಏಪ್ರಿಲ್, 2020	**ನಮೂನೆ ಜಿಎಸ್‌ಟಿಆರ್–3ಬಿ**ಯನ್ನು 2020ರ ಜುಲೈ 6ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ.”.

2. ಈ ಅಧಿಸೂಚನೆಯು 2021ರ, ಮಾರ್ಚ್ 20ನೇ ದಿನಾಂಕದಂದು ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (14/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 07.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರ ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ - IVA, ಸಂಖ್ಯೆ 1553 ದಿನಾಂಕ 31ನೇ ಡಿಸೆಂಬರ್ 2018ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (29/2018) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 31ನೇ ಡಿಸೆಂಬರ್ 2018 ಗೆ ಈ ಕೆಳಕಂಡ ತಿದ್ದುಪಡಿ ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯ, ಎರಡನೆಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ :–

"ಮತ್ತೂ ಪರಂತು, ಈ ಕೆಳಕಂಡ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ತೆರಿಗೆಯ ಅವಧಿಗೆ, ಕೋಷ್ಟಕದ ಅಂಕಣ (2)ರ ಅನುಗುಣವಾದ ನಮೂದಿನಲ್ಲಿ ನಮೂದಾಗಿರುವ ವರ್ಗದ ನೋಂದಾಯಿತ ವ್ಯಕ್ತಿಗಳು **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲಗೊಂಡಿದ್ದು, ಆದರೆ ಕೋಷ್ಟಕದ ಅಂಕಣ (4)ರ ಅನುಗುಣವಾದ ನಮೂದಿನಲ್ಲಿ ತಿಳಿಸಿರುವಂತಹ ಷರತ್ತಿನ ಅನುಸಾರ ಸದರಿ ರಿಟರ್ನ್‌ಅನ್ನು ಸಲ್ಲಿಸಿದ್ದರೆ, ನೋಂದಾಯಿತ ವ್ಯಕ್ತಿಯು ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಿರುವ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ." ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	ನೋಂದಾಯಿತ ವ್ಯಕ್ತಿಗಳ ವರ್ಗ	ತೆರಿಗೆ ಅವಧಿ	ಷರತ್ತು
(1)	(2)	(3)	(4)
1	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳಿಗೆ ಮೀರಿದ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾತರು	ಫೆಬ್ರವರಿ 2020, ಮಾರ್ಚ್ 2020, ಏಪ್ರಿಲ್ 2020	ನಮೂನೆ ಜಿಎಸ್‌ಟಿಆರ್–3ಬಿಯನ್ನು 2020ರ ಜೂನ್ 24ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ.
2	ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗೆ ಮೀರಿದ ಮತ್ತು 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾತರು	ಫೆಬ್ರವರಿ, 2020, ಮತ್ತು ಮಾರ್ಚ್, 2020	ನಮೂನೆ ಜಿಎಸ್‌ಟಿಆರ್–3ಬಿಯನ್ನು 2020ರ ಜೂನ್ 29ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
		ಏಪ್ರಿಲ್ 2020	ನಮೂನೆ ಜಿಎಸ್‌ಟಿಆರ್–3ಬಿಯನ್ನು 2020ರ ಜೂನ್ 30ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
3	ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳವರೆಗೆ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾತರು	ಫೆಬ್ರವರಿ, 2020	ನಮೂನೆ ಜಿಎಸ್‌ಟಿಆರ್–3ಬಿಯನ್ನು 2020ರ ಜೂನ್ 30ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
		ಮಾರ್ಚ್, 2020	ನಮೂನೆ ಜಿಎಸ್‌ಟಿಆರ್–3ಬಿಯನ್ನು 2020ರ ಜುಲೈ 3ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ
		ಏಪ್ರಿಲ್, 2020	ನಮೂನೆ ಜಿಎಸ್‌ಟಿಆರ್–3ಬಿಯನ್ನು 2020ರ ಜುಲೈ 6ನೇ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ ಸಲ್ಲಿಸಿದ್ದಲ್ಲಿ.".

2. ಈ ಅಧಿಸೂಚನೆಯು 2021ರ, ಮಾರ್ಚ್ 20ನೇ ದಿನಾಂಕದಂದು ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (15/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 07.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA, ಸಂಖ್ಯೆ.177, 2018ರ ಜನವರಿ 23ನೇ ದಿನದಂದು ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (02/2018) ಸಂಖ್ಯೆ ಆಇ 47 ಸಿಎಸ್‌ಎಲ್ 2018, ದಿನಾಂಕ 2018ರ ಜನವರಿ 23ಕ್ಕೆ ಈ ಕೆಳಗಿನಂತೆ ಮುಂದುವರೆದು ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯ ಮೂರನೇ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ:–

"ಪರಂತು, ಮಾರ್ಚ್ 2020, ಏಪ್ರಿಲ್ 2020 ಮತ್ತು ಮೇ 2020 ತಿಂಗಳುಗಳಿಗೆ ಹಾಗೂ 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ತ್ರೈಮಾಸಿಕಕ್ಕೆ, ನಿಗದಿತ ದಿನಾಂಕದೊಳಗೆ ನಮೂನೆ **ಜಿಎಸ್‌ಟಿಆರ್–1**ರಲ್ಲಿ ಹೊರಮುಖ ಪೂರೈಕೆಯ ವಿವರಗಳನ್ನು ಅಂತಿಮ ದಿನದೊಳಗೆ ಸಲ್ಲಿಸಲು ವಿಫಲರಾದದ್ದಕ್ಕಾಗಿ, ಆದರೆ ನಮೂನೆ **ಜಿಎಸ್‌ಟಿಆರ್–1**ರಲ್ಲಿ ಸದರಿ ವಿವರಗಳನ್ನು 30ನೇ ಜೂನ್ 2020 ರಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸಿದ್ದರೆ, ನೋಂದಾಯಿತ ವ್ಯಕ್ತಿಯಿಂದ ಅಧಿನಿಯಮ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬದ ಶುಲ್ಕದ ಮೊತ್ತವನ್ನು ಸಹ ಮನ್ನಾ ಮಾಡುತ್ತದೆ."

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (16/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 07.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ದಿನಾಂಕ: 23ನೇ ಏಪ್ರಿಲ್ 2019 ರಲ್ಲಿ ಪ್ರಕಟಿಸಲಾದ ಕರ್ನಾಟಕ

ಸರ್ಕಾರದ ಅಧಿಸೂಚನೆ (08/2019) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 23ನೇ ಏಪ್ರಿಲ್, 2019 ಗೆ ಈ ಕೆಳಗಿನಂತೆ ಮುಂದುವರೆದು ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ:–

(i) ಎರಡನೆಯ ಕಂಡಿಕೆಯಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ :–

"ಪರಂತು ಸದರಿ ವ್ಯಕ್ತಿಗಳು 31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ತ್ರೈಮಾಸಿಕಕ್ಕೆ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು, 2017ರಡಿಯಲ್ಲಿ ಸ್ವಯಂನಿರ್ಧರಿಸಲಾದ ತೆರಿಗೆ ಪಾವತಿ ವಿವರಗಳನ್ನು ಒಳಗೊಂಡ **ನಮೂನೆ ಜಿಎಸ್‌ಟಿ ಸಿಎಂಪಿ–08**ನ್ನು 2020ರ ಜುಲೈ 7ನೇ ದಿನಾಂಕದವರೆಗೂ ಸಲ್ಲಿಸತಕ್ಕದ್ದು.";

(ii) ಮೂರನೆಯ ಕಂಡಿಕೆಯಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ :–

"ಪರಂತು ಸದರಿ ವ್ಯಕ್ತಿಗಳು 31 ಮಾರ್ಚ್ 2020ಕ್ಕೆ ಅಂತ್ಯವಾಗುವ ಹಣಕಾಸು ವರ್ಷಕ್ಕೆ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು, 2017ರಡಿಯಲ್ಲಿ **ನಮೂನೆ ಜಿಎಸ್‌ಟಿಆರ್–4**ನ್ನು ಜುಲೈ 2020ರ 15ನೇ ದಿನಾಂಕದವರೆಗೂ ಸಲ್ಲಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (17/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 20.04.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕದ ಅಧಿನಿಯಮ), (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 168ಎ ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಭಾರತವೂ ಸೇರಿದಂತೆ ಬಹಳಷ್ಟು ರಾಷ್ಟ್ರಗಳಲ್ಲಿ ಸಾಂಕ್ರಾಮಿಕ ರೋಗ ಕೋವಿಡ್–19 ಹರಡಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಕೆಳಕಂಡಂತೆ ಅಧಿಸೂಚಿಸುತ್ತದೆ:–

(i) ಯಾವುದೇ ಕ್ರಮಗಳನ್ನು ಪೂರ್ಣಗೊಳಿಸಲು ಅಥವಾ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ಯಾವುದೇ ಪ್ರಾಧಿಕಾರ/ಕಚೇರಿ ಅಥವಾ ಯಾವುದೇ ವ್ಯಕ್ತಿಯಿಂದ ಯಾವುದೇ ಕಾಲಮಿತಿಯನ್ನು ನಿರ್ದಿಷ್ಟಪಡಿಸಿದ್ದಲ್ಲಿ ಅಥವಾ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿದ್ದಲ್ಲಿ ಅಥವಾ ಅಧಿಸೂಚನೆ ಹೊರಡಿಸಿದ್ದಲ್ಲಿ, ಅದು 2020ರ ಮಾರ್ಚ್ 20ನೇ ದಿನದಿಂದ 2020ರ ಜೂನ್ 29ನೇ ದಿನಾಂಕದ ವರೆಗಿನ ಅವಧಿಯಲ್ಲಿ ಬರುತ್ತದೆಯಾದಲ್ಲಿ ಹಾಗೂ ಅಂತಹ ಕಾಲಮಿತಿಯೊಳಗೆ ಅಂತಹ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಿರಲಿಲ್ಲವಾದಲ್ಲಿ ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲವಾದಲ್ಲಿ, ಅಂತಹ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಲು ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ನಿಗದಿತವಾಗಿರುವ ಕಾಲಮಿತಿಯನ್ನು ಈ ಕೆಳಗಿನ ಉದ್ದೇಶಗಳನ್ನು ಒಳಗೊಂಡಂತೆ 2020ರ ಜೂನ್ 30ನೇ ದಿನಾಂಕದವರೆಗೆ ವಿಸ್ತರಿಸಲಾಗಿದೆ.

(ಎ) ಸದರಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವುದೇ ಪ್ರಾಧಿಕಾರ, ಕಚೇರಿ, ಆಯೋಗ ಅಥವಾ ನ್ಯಾಯಮಂಡಳಿ, ಈ ರೀತಿಯಾಗಿ ಯಾವುದೇ ಹೆಸರಿನಿಂದ ಕರೆಯಲ್ಪಡುವ ಸಂಸ್ಥೆಗಳಿಂದ ಅಥವಾ ಯಾವುದೇ ವ್ಯಕ್ತಿಯಿಂದ ಯಾವುದೇ ನಡಾವಳಿಗಳನ್ನು ಪೂರ್ಣಗೊಳಿಸಲು ಅಥವಾ ಯಾವುದೇ ಆದೇಶವನ್ನು ಜಾರಿಗೊಳಿಸಲು ಅಥವಾ ಯಾವುದೇ ನೋಟೀಸು, ತಿಳಿವಳಿಕೆ ಪತ್ರ, ಅಧಿಸೂಚನೆಗಳನ್ನು ನೀಡಲು ಅಥವಾ ಮಂಜೂರಾತಿ ಅಥವಾ ಅನುಮೋದನೆ ನೀಡಲು ಅಥವಾ ಅಂತಹ ಇತರೆ ಕಾರ್ಯಗಳನ್ನು ಪೂರ್ಣಗೊಳಿಸುವ ಸಲುವಾಗಿ ; ಅಥವಾ

(ಬಿ) ಮೇಲೆ ತಿಳಿಸಿದ ಸದರಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವುದೇ ಮನವಿಯನ್ನು ಸಲ್ಲಿಸಲು, ಉತ್ತರಿಸಲು ಅಥವಾ ಅರ್ಜಿಯನ್ನು ಸಲ್ಲಿಸಲು ಅಥವಾ ಯಾವುದೇ ವರದಿ, ದಾಖಲೆಗಳು, ಸಲ್ಲಿಕೆಗಳು, ತ:ಖ್ತೆಗಳು ಅಥವಾ ಅಂತಹ ಇತರೆ ಯಾವುದೇ ದಾಖಲೆಗಳು ಮುಂತಾದ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕರ್ತವ್ಯಗಳಿಗಾಗಿ;

ಆದರೆ, ಅಂತಹ ಕಾಲಮಿತಿಯ ವಿಸ್ತರಣೆಯು ಈ ಕೆಳಗೆ ತಿಳಿಸಿರುವಂತೆ ಸದರಿ ಕಾಯಿದೆಯ ಅಧಿನಿಯಮದ ಅನುಪಾಲನಾ ಕ್ರಮಗಳಿಗಾಗಿ ಅನ್ವಯಗೊಳ್ಳುವುದಿಲ್ಲ–

(ಎ) ಅಧ್ಯಾಯ IV ;

(ಬಿ) ಪ್ರಕರಣ 10ರ ಉಪಪ್ರಕರಣ(3), ಪ್ರಕರಣಗಳಾದ 25, 27, 31, 37, 47, 50, 69, 90, 122, 129

(ಸಿ) ಪ್ರಕರಣ 39, ಉಪಪ್ರಕರಣ (3), (4) ಮತ್ತು (5)ನ್ನು ಹೊರತುಪಡಿಸಿ;

(ಡಿ) ಪ್ರಕರಣ 68, ಇ–ವೇ ಬಿಲ್ಲಿಗೆ ಸಂಬಂಧಪಟ್ಟಂತೆ; ಹಾಗೂ

(ಇ) ಮೇಲಿನ (ಎ) ಯಿಂದ (ಡಿ) ರವರೆಗಿನ ಖಂಡಗಳ ಅಧಿನಿಯಮದಡಿಯಲ್ಲಿ ನಿರ್ದಿಷ್ಟಪಡಿಸಿದ ನಿಯಮಗಳು

(ii) ಕರ್ನಾಟಕ ಸರಕುಗಳು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 138ರ ಅಡಿಯಲ್ಲಿ ಹೊರತೆಗೆಯಲಾಗಿರುವಂತಹ ಇ–ವೇ ಬಿಲ್ಲಿಗೆ ಸಂಬಂಧಿಸಿದಂತೆ, ಅದರ ಮಾನ್ಯತೆಯ ಅವಧಿಯು 20ರ ಮಾರ್ಚ್ 2020ರಿಂದ 15ನೇ ಏಪ್ರಿಲ್ 2020ರ ಅವಧಿಯಲ್ಲಿ ಮುಕ್ತಾಯಗೊಳ್ಳುವುದಾದಲ್ಲಿ, ಅಂತಹ ಇ–ವೇ ಬಿಲ್ಲಿನ ಮಾನ್ಯತೆಯ ಅವಧಿಯನ್ನು 30 ಏಪ್ರಿಲ್ 2020ರವರೆಗೆ ವಿಸ್ತರಿಸಲಾಗಿದೆ ಎಂಬುದಾಗಿ ಪರಿಭಾವಿಸತಕ್ಕದ್ದು.

2. ಈ ಅಧಿಸೂಚನೆಯು 2020ರ ಮಾರ್ಚ್20ನೇ ದಿನಾಂಕದಂದು ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (18/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 07.05.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ರಾಜ್ಯಪತ್ರ, ಭಾಗ–IVA ಸಂಪುಟ 155, ಸಂಚಿಕೆ 15, ದಿನಾಂಕ 9ನೇ ಏಪ್ರಿಲ್ 2020ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (05/2020) ಸಂಖ್ಯೆ ಎಫ್‌ಡಿ 03 ಸಿಎಸ್‌ಎಲ್ 2020 ದಿನಾಂಕ 27ನೇ ಮಾರ್ಚ್ 2020ಗೆ ಈ ಕೆಳಗಿನಂತೆ ತಿದ್ದುಪಡಿಗಳನ್ನು ಮಾಡಿದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ

(i) ಮೊದಲನೆಯ ಕಂಡಿಕೆಯಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ :–

"ಪರಂತು ಸದರಿ ಅಧಿನಿಯಮದಡಿಯಲ್ಲಿ ಐಆರ್‌ಪಿ/ಆರ್‌ಪಿ ನೇಮಕಾತಿ ಮಾಡುವುದಕ್ಕೆ ಮೊದಲು ಎಲ್ಲಾ ತೆರಿಗೆ ಅವಧಿಗಳಿಗೆ ಪ್ರಕರಣ 37ರಡಿಯಲ್ಲಿ ತ:ಖ್ತೆಗಳನ್ನು ಹಾಗೂ ಪ್ರಕರಣ 39ರ ಅಡಿಯಲ್ಲಿ ಎಲ್ಲಾ ರಿಟರ್ನ್‌ಗಳನ್ನು ಸಲ್ಲಿಸಿದ ಕಾರ್ಪೋರೇಟ್ ಸಾಲಗಾರರನ್ನು ಸದರಿ ವರ್ಗದ ವ್ಯಕ್ತಿಗಳು ಒಳಗೊಳ್ಳುವುದಿಲ್ಲ.";

(ii) 2020ರ ಮಾರ್ಚ್ 21ನೇ ದಿನಾಂಕದಿಂದ ಜಾರಿಗೆ ಬಂದಿರುವಂತೆ, ಕಂಡಿಕೆ 2ಕ್ಕೆ, ಈ ಕೆಳಗಿನ ಕಂಡಿಕೆಯನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"2. ನೋಂದಣಿ.– ಸದರಿ ವರ್ಗದ ವ್ಯಕ್ತಿಗಳು, ಐಆರ್‌ಪಿ/ಆರ್‌ಪಿ, ಇವರನ್ನು ನೇಮಕ ಮಾಡಿದ ದಿನಾಂಕದಿಂದ ಜಾರಿಗೆ ಬರುವಂತೆ, ಕಾರ್ಪೊರೇಟ್ ಸಾಲಗಾರನ, ವಿಭಿನ್ನ ವ್ಯಕ್ತಿ ಎಂಬುದಾಗಿ ಪರಿಗಣಿಸತಕ್ಕದ್ದು ಮತ್ತು ಐಆರ್‌ಪಿ/ಆರ್‌ಪಿ ಇವರನ್ನು ನೇಮಕ ಮಾಡಿದ ದಿನಾಂಕದಿಂದ 30 ದಿನಗಳ ಒಳಗೆ ಅಥವಾ 2020ರ ಜೂನ್ 30ನೇ ದಿನಾಂಕದದೊಳಗೆ, ಇವುಗಳಲ್ಲಿ ಯಾವುದು ತದನಂತರದ್ದೋ, ಆ ದಿನಾಂಕದ ಒಳಗೆ ಕಾರ್ಪೊರೇಟ್ ಸಾಲಗಾರರು ಈ ಮೊದಲು ನೋಂದಣಿ ಮಾಡಿಸಿದ್ದಂತಹ ಪ್ರತಿಯೊಂದು ರಾಜ್ಯದಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೊಸ ನೋಂದಣಿಯನ್ನು ಪಡೆಯಲು ಬಾಧ್ಯರಾಗುತ್ತಾರೆ (ಇನ್ನು ಮುಂದೆ ಹೊಸ ನೋಂದಣಿ ಎಂದು ಉಲ್ಲೇಖಿಸಲಾಗಿದೆ)".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (19/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 07.05.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕ ಅಧಿನಿಯಮ 27) (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 168ಎ ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಖ್ಯೆ.140, 2020ರ ಏಪ್ರಿಲ್ 20ನೇ ದಿನದಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (17/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 ದಿನಾಂಕ 20ನೇ ಏಪ್ರಿಲ್ 2020ರಲ್ಲಿ ಈ ಕೆಳಗಿನಂತೆ ತಿದ್ದುಪಡಿಗಳನ್ನು ಮಾಡಿದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೆಯ ಕಂಡಿಕೆಯಲ್ಲಿ, ಖಂಡ (ii)ರಲ್ಲಿ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ :–

"ಪರಂತು ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು 2017ರ ನಿಯಮ 138ರ ಅಡಿಯಲ್ಲಿ 2020ರ ಮಾರ್ಚ್ 24ನೇ ತಾರೀಖಿನೊಳಗೆ ಹೊರತೆಗೆಯಲಾದ ಇ–ವೇ ಬಿಲ್ಲುಗಳ ಮಾನ್ಯತೆಯ ಅವಧಿಯು 20ನೇ ಮಾರ್ಚ್ 2020 ರಿಂದ 15ನೇ ಏಪ್ರಿಲ್ 2020ರ ಅವಧಿಯಲ್ಲಿ ಮುಕ್ತಾಯವಾಗುತ್ತಿದ್ದು, ಸದರಿ ಇ–ವೇ ಬಿಲ್ಲುಗಳಿಗೆ ಕಾಲಮಿತಿ ಅವಧಿಯನ್ನು 31ನೇ ಮೇ 2020 ವರೆಗೆ ವಿಸ್ತರಿಸಲಾಗಿರುತ್ತದೆ ಎಂದು ಪರಿಭಾವಿಸತಕ್ಕದ್ದು.".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (20/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 16.06.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕದ ಅಧಿನಿಯಮ 27), (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 168ಎ ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (13/2017) ಪ್ರಕರಣ 20 ರೊಂದಿಗೆ ಓದಲಾದ, ಭಾರತವೂ ಸೇರಿದಂತೆ ಬಹಳಷ್ಟು ರಾಷ್ಟ್ರಗಳಲ್ಲಿ ಸಾಂಕ್ರಾಮಿಕ ರೋಗ ಕೋವಿಡ್–19 ಹರಡಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಮರುಪಾವತಿಯ

ಪೂರ್ಣ ಅಥವಾ ಭಾಗಶ: ನಿರಾಕರಣೆಗಾಗಿ ನೀಡಿರುವ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ, ಸದರಿ ಅಧಿನಿಯಮದ ಪ್ರಕರಣ 54 ರ ಉಪಪ್ರಕರಣ 7ರೊಂದಿಗೆ ಒದಲಾದ ಉಪಪ್ರಕರಣ (5), 20ನೇ ಮಾರ್ಚ್ 2020 ರಿಂದ 29ನೇ ಜೂನ್ 2020ರ ಅವಧಿಯಲ್ಲಿನ ಪ್ರಕರಣಗಳಿಗೆ ಹೊರಡಿಸಬೇಕಾದ ಆದೇಶಗಳ ಸಂದರ್ಭಗಳಲ್ಲಿ, ಸದರಿ ಆದೇಶದ ಕಾಲಮಿತಿಯನ್ನು ನೋಂದಾಯಿತ ವ್ಯಕ್ತಿಯಿಂದ ನೋಟೀಸಿಗೆ ಸ್ವೀಕರಿಸಲಾಗುವ ಉತ್ತರಗಳ ದಿನಾಂಕದಿಂದ 15 ದಿವಸಗಳವರೆಗೆ ಅಥವಾ 30ನೇ ಜೂನ್ 2020ರವರೆಗೆ ಇವುಗಳಲ್ಲಿ ಯಾವುದು ನಂತರದ್ದಾಗಿರುತ್ತದೋ, ಅಲ್ಲಿಯವರೆವಗೂ ವಿಸ್ತರಿಸಲಾಗಿದೆ ಎಂದು ಈ ಮೂಲಕ ಅಧಿಸೂಚಿಸುತ್ತದೆ.

2. ಈ ಅಧಿಸೂಚನೆಯ 2020ರ ಮಾರ್ಚ್ 20ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (21/2020)

ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 16.06.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (ಕರ್ನಾಟಕ ಕಾಯ್ದೆ 27/2017) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಿದೆ) ಪ್ರಕರಣ 168ಎರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (13/2017) ಪ್ರಕರಣ 20 ರೊಂದಿಗೆ ಓದಲಾದ, ಪರಿಷತ್ತಿನ ಶಿಫಾರಿಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಖ್ಯೆ.140, 2020ರ ಏಪ್ರಿಲ್ 20ನೇ ದಿನದಂದು ಪ್ರಕಟಿಸಿದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 ದಿನಾಂಕ 20ನೇ ಏಪ್ರಿಲ್ 2020ಕ್ಕೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ, ಅಂದರೆ:–

ಮೇಲೆ ಹೇಳಿದ ಅಧಿಸೂಚನೆಯ ಮೊದಲನೆಯ ಕಂಡಿಕೆ, ಖಂಡ (ii)ರಲ್ಲಿ, ಪರಂತುಕಕ್ಕೆ, ಕೆಳಗಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:–

"ಪರಂತು ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು 2017ರ ನಿಯಮ 138 ರಡಿಯಲ್ಲಿ 24ನೇ ಮಾರ್ಚ್ 2020 ರಂದು ಹಾಗೂ ಅದಕ್ಕೂ ಮೊದಲು ಹೊರತೆಗೆಯಲಾದ ಇ–ವೇ ಬಿಲ್ಲುಗಳ ಮತ್ತು ಅವುಗಳ

ಮಾನ್ಯತೆಯ ಅವಧಿಯು, 20ನೇ ಮಾರ್ಚ್ 2020 ಹಾಗೂ ತದನಂತರ ಮುಕ್ತಾಯವಾಗಿದ್ದು, ಅಂತಹ ಇ–ವೇ ಬಿಲ್ಲುಗಳ ಮಾನ್ಯತೆಯ ಅವಧಿಯನ್ನು 30ನೇ ಜೂನ್ 2020ರವರೆಗೆ ವಿಸ್ತರಿಸಲಾಗಿದೆಯೆಂದು ಪರಿಭಾವಿಸತಕ್ಕದ್ದು."

2.ಈ ಅಧಿಸೂಚನೆಯ 2020ರ ಮೇ 31ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಮತ್ತು
ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (22/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 30.06.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (1)ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 50ರ ಉಪ ಪ್ರಕರಣ (1)ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 148ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA, ಸಂಖ್ಯೆ 610 ದಿನಾಂಕ 29ರ ಜೂನ್ 2017ರಂದು ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (13/2017) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 29ರ ಜೂನ್ 2017 ಗೆ ಮುಂದುವರೆದು ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯ ಮೊದಲನೆಯ ಕಂಡಿಕೆಯಲ್ಲಿ, ಮೊದಲನೆ ಪರಂತುಕಕ್ಕೆ, ಈ ಕೆಳಗಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು. ಅಂದರೆ :–

"ಪರಂತು, ಈ ಕೆಳಕಂಡ ಕೋಷ್ಟಕದ ಅಂಕಣ (2)ರಲ್ಲಿ ನಮೂದಾಗಿರುವ ವರ್ಗದ ನೋಂದಾಯಿತ ವ್ಯಕ್ತಿಗಳು ಯಾರು **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ಸಲ್ಲಿಸಬೇಕಾಗಿದ್ದು, ಆದರೆ ಆ ಸಲ್ಲಿಕೆಯನ್ನು ಕೆಳಗೆ ತಿಳಿಸಲಾಗಿರುವ ಕೋಷ್ಟಕದ ಅಂಕಣ (4)ರ ಅನುಗುಣವಾದ ನಮೂದಿನಲ್ಲಿ ತಿಳಿಸಲಾಗಿರುವ ಅವಧಿಗೆ ತೆರಿಗೆ ಪಾವತಿಯೊಂದಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲಗೊಂಡಿದ್ದಲ್ಲಿ, ಸದರಿ ಕೋಷ್ಟಕದ ಅಂಕಣ (3)ರ ನಮೂದಿನಲ್ಲಿ ತಿಳಿಸಿರುವಂತೆ ವಾರ್ಷಿಕ ಬಡ್ಡಿ ದರವು ನಿಗಧಿಯಾಗುತ್ತದೆ, ಅಂದರೆ:–

ಕೋಷ್ಟಕ

ಸಂಖ್ಯೆ (1)	ನೋಂದಾಯಿತ ವ್ಯಕ್ತಿಗಳ ವರ್ಗ (2)	ಬಡ್ಡಿದರ (3)	ತೆರಿಗೆ ಅವಧಿ (4)
1	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂ.ಗಿಂತ ಹೆಚ್ಚಿನ ಸಮಗ್ರ ವಹಿವಾಟು ಹೊಂದಿರುವ ತೆರಿಗೆ ಪಾವತಿದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳವರೆಗೆ ಶೂನ್ಯ ಮತ್ತು ನಂತರದ ಅವಧಿಗೆ ಅಂದರೆ 24ನೇ ಜೂನ್ 2020 ರವರೆಗೆ ಶೇಕಡ 9 ರಂತೆ	ಫೆಬ್ರವರಿ, 2020, ಮಾರ್ಚ್ 2020, ಏಪ್ರಿಲ್ 2020
2.	ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟು 5 ಕೋಟಿಗಳವರೆಗೆ ಸಮಗ್ರ ವಾರ್ಷಿಕ ವಹಿವಾಟು ಹೊಂದಿರುವ ತೆರಿಗೆ ಪಾವತಿದಾರರು.	2020ರ ಜೂನ್ 30ನೇ ದಿನದವರೆಗೆ ಶೂನ್ಯ ಮತ್ತು ಅದರ ನಂತರ ಸೆಪ್ಟೆಂಬರ್ 2020ರ 30ನೇ ದಿನದವರೆಗೆ ಶೇಕಡ 9 ರಂತೆ	ಫೆಬ್ರವರಿ, 2020
		2020ರ ಜುಲೈ 3ನೇ ದಿನಾಂಕದವರೆಗೆ ಶೂನ್ಯ ಮತ್ತು ನಂತರ ಸೆಪ್ಟೆಂಬರ್ 2020ರ 30ನೇ ದಿನದವರೆಗೆ ಶೇಕಡ 9 ರಂತೆ	ಮಾರ್ಚ್ 2020
		2020ರ ಜುಲೈ 6ನೇ ದಿನದವರೆಗೆ ಶೂನ್ಯ ಮತ್ತು ನಂತರ ಸೆಪ್ಟೆಂಬರ್ 2020ರ 30ನೇ ದಿನದವರೆಗೆ ಶೇಕಡ 9 ರಂತೆ	ಏಪ್ರಿಲ್ 2020
		2020ರ ಸೆಪ್ಟೆಂಬರ್ 12ನೇ ದಿನದವರೆಗೆ ಶೂನ್ಯ, ಮತ್ತು ನಂತರ ಸೆಪ್ಟೆಂಬರ್ 2020ರ 30ನೇ ದಿನದವರೆಗೆ ಶೇಕಡ 9 ರಂತೆ	ಮೇ 2020
		2020ರ ಸೆಪ್ಟೆಂಬರ್ 23ರವರೆಗೆ ಶೂನ್ಯ, ಮತ್ತು ನಂತರ ಸೆಪ್ಟೆಂಬರ್ 2020ರ 30 ನೇ ದಿನದವರೆಗೆ ಶೇಕಡ 9 ರಂತೆ	ಜೂನ್ 2020
		2020 ರ ಸೆಪ್ಟೆಂಬರ್ 23 ರವರೆಗೆ ಶೂನ್ಯ, ಮತ್ತು ನಂತರ 2020ರ ಸೆಪ್ಟೆಂಬರ್ 30ನೇ ದಿನದವರೆಗೆ ಶೇಕಡ 9 ರಂತೆ	ಜುಲೈ 2020

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (23/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 30.06.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ IVA, ಸಂಖ್ಯೆ 1553 ದಿನಾಂಕ 31ನೇ ಡಿಸೆಂಬರ್ 2018ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (29/2018) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 31ನೇ ಡಿಸೆಂಬರ್ 2018ಗೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ.–

(i) ಮೂರನೆಯ ಪರಂತುಕದಲ್ಲಿ, ಕೋಷ್ಟಕಕ್ಕೆ, ಈ ಕೆಳಗಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು. ಅಂದರೆ :–

"ಕೋಷ್ಟಕ

ಕ್ರಮ ಸಂಖ್ಯೆ	ನೊಂದಣಿದಾರರ ವರ್ಗ	ತೆರಿಗೆಯ ಅವಧಿ	ಷರತ್ತು
(1)	(2)	(3)	(4)
1	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂ.ಗಿಂತ ಹೆಚ್ಚಿನ ಸಮಗ್ರ ವಹಿವಾಟು ಹೊಂದಿರುವ ತೆರಿಗೆ ಪಾವತಿದಾರರು	ಫೆಬ್ರವರಿ, 2020 ಮಾರ್ಚ್, 2020 ಮತ್ತು ಏಪ್ರಿಲ್, 2020	ಮಾಸಿಕ ರಿಟರ್ನ್ **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ದಿನಾಂಕ 24ನೇ ಜೂನ್, 2020ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿದ್ದರೆ
2	ಹಿಂದಿನ ಹಣಕಾಸು ವರ್ಷದಲ್ಲಿ ಒಟ್ಟು 5 ಕೋಟಿಗಳವರೆಗೆ ಸಮಗ್ರ ವಾರ್ಷಿಕ ವಹಿವಾಟು ಹೊಂದಿರುವ ತೆರಿಗೆ ಪಾವತಿದಾರರು.	ಫೆಬ್ರವರಿ, 2020	ಮಾಸಿಕ ರಿಟರ್ನ್ **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ದಿನಾಂಕ 30ನೇ ಜೂನ್, 2020ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿದ್ದರೆ
		ಮಾರ್ಚ್, 2020	ಮಾಸಿಕ ರಿಟರ್ನ್ **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ದಿನಾಂಕ 3ನೇ ಜುಲೈ, 2020ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿದ್ದರೆ

		ಏಪ್ರಿಲ್, 2020	ಮಾಸಿಕ ರಿಟರ್ನ್ **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ದಿನಾಂಕ 6ನೇ ಜುಲೈ, 2020ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿದ್ದರೆ
		ಮೇ, 2020	ಮಾಸಿಕ ರಿಟರ್ನ್ **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ದಿನಾಂಕ 12ನೇ ಸೆಪ್ಟೆಂಬರ್, 2020ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿದ್ದರೆ
		ಜೂನ್, 2020	ಮಾಸಿಕ ರಿಟರ್ನ್ **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ದಿನಾಂಕ 23ನೇ ಸೆಪ್ಟೆಂಬರ್, 2020ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿದ್ದರೆ
		ಜುಲೈ, 2020	ಮಾಸಿಕ ರಿಟರ್ನ್ **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ದಿನಾಂಕ 27ನೇ ಸೆಪ್ಟೆಂಬರ್, 2020ರಂದು ಅಥವಾ ಅದಕ್ಕಿಂತ ಮೊದಲು ಸಲ್ಲಿಸಿದ್ದರೆ

(iii) ಮೂರನೆಯ ಪರಂತುಕದ ನಂತರ, ಈ ಕೆಳಕಂಡ ಪರಂತುಕಗಳನ್ನು ಸೇರಿಸತಕ್ಕದ್ದು, ಅಂದರೆ :–

"ಮತ್ತೂ ಪರಂತು, ಜುಲೈ ಮಾಹೆ–2017 ರಿಂದ ಜನವರಿ, 2020ರವರೆಗಿನ ಅವಧಿಗೆ ಮಾಸಿಕ ರಿರ್ಟನ್ ಅನ್ನು **ಜಿಎಸ್‌ಟಿಆರ್–3ಬಿ** ಯಲ್ಲಿ ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದ, ಆದರೆ ಸದರಿ ವಿವರಗಳನ್ನು ಮಾಸಿಕ ರಿರ್ಟನ್‌ನಲ್ಲಿ ದಿನಾಂಕ 1ನೇ ಜುಲೈ, 2020ರಿಂದ ದಿನಾಂಕ 30ನೇ ಸೆಪ್ಟೆಂಬರ್ 2020ರ ನಡುವಿನ ಅವಧಿಯಲ್ಲಿ ಸಲ್ಲಿಸಿದ್ದರೆ ಮಾತ್ರ, ನೋಂದಾಯಿತ ವ್ಯಕ್ತಿಯಿಂದ ಸದರಿ ಅಧಿನಿಯಮದ ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವನ್ನು ಇನ್ನೂರ ಐವತ್ತು ರೂಪಾಯಿಗಳ ಮೊತ್ತವನ್ನು ವೀರಿದಲ್ಲಿ ಮನ್ನಾ ಮಾಡುತ್ತದೆ:

ಮತ್ತೂ ಪರಂತು, ಜುಲೈ ಮಾಹೆ–2017 ರಿಂದ ಜನವರಿ, 2020ರವರೆಗಿನ ಅವಧಿಗೆ ನೋಂದಾಯಿತ ವ್ಯಕ್ತಿಯು ಮಾಸಿಕ ರಿರ್ಟನ್ ಅನ್ನು **ಜಿಎಸ್‌ಟಿಆರ್–3ಬಿ** ಯಲ್ಲಿ ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾಗಿದ್ದು, ಆದರೆ ಸದರಿ ವಿವರಗಳನ್ನು ಮಾಸಿಕ ರಿರ್ಟನ್‌ನಲ್ಲಿ ದಿನಾಂಕ 1ನೇ ಜುಲೈ, 2020ರಿಂದ ದಿನಾಂಕ 30ನೇ ಸೆಪ್ಟೆಂಬರ್ 2020ರ ನಡುವಿನ ಅವಧಿಯಲ್ಲಿ ಸಲ್ಲಿಸಿದ್ದು, ಸದರಿ ರಿಟರ್ನ್‌ನಲ್ಲಿ ಪಾವತಿಸಬೇಕಾದ ರಾಜ್ಯ ತೆರಿಗೆ ಮೊತ್ತ ಶೂನ್ಯವಾಗಿದ್ದರೆ, ಸದರಿ ಅಧಿನಿಯಮದ ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ.".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕವಿತ.ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (24/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 30.06.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ:177 ದಿನಾಂಕ: 23ನೇ ಜನವರಿ 2018 ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (02/2018) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 23ನೇ ಜನವರಿ, 2018ರಲ್ಲಿ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ :–

ಸದರಿ ಅಧಿಸೂಚನೆಯಲ್ಲಿ, ನಾಲ್ಕನೆಯ ಪರಂತುಕಕ್ಕೆ, ಈ ಕೆಳಗಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು. ಅಂದರೆ:–

" ಮತ್ತೂ ಪರಂತು, ಕೆಳಗಿನ ಕೋಷ್ಟಕದ ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿದ ಮಾಹೆಗೆ ಸರಕು ಅಥವಾ ಸೇವೆಗಳ ಅಥವಾ ಅವೆರೆಡರ ಹೊರಮುಖ ಪೂರೈಕೆಯ ವಿವರಗಳನ್ನು **ಜಿಎಸ್‌ಟಿಆರ್–1** ರಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಸಲ್ಲಿಸದೆ, ಆದರೆ ಸದರಿ ರಿಟರ್ನ್‌ನನ್ನು ಕೋಷ್ಟಕದ ಅಂಕಣ (3)ರಲ್ಲಿ ಅನುಗುಣವಾಗಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಸಲ್ಲಿಸಿದ್ದರೆ, ನೋಂದಾಯಿತ ವ್ಯಕ್ತಿಯಿಂದ ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವನ್ನು ಮನ್ನಾ ಮಾಡುತ್ತದೆ"

ಕೋಷ್ಟಕ

ಕ್ರಮ ಸಂಖ್ಯೆ (1)	ತಿಂಗಳು/ತ್ರೈಮಾಸಿಕ (2)	ದಿನಾಂಕಗಳು (3)
1	ಮಾರ್ಚ್, 2020	2020ರ ಜುಲೈ 10ನೇ ದಿನ
2	ಏಪ್ರಿಲ್, 2020	2020ರ ಜುಲೈ 24ನೇ ದಿನ
3	ಮೇ, 2020	2020ರ ಜುಲೈ 28ನೇ ದಿನ
4	ಜೂನ್, 2020	2020ರ ಆಗಸ್ಟ್ 05ನೇ ದಿನ
5	ಜನವರಿ ಇಂದ ಮಾರ್ಚ್, 2020	2020ರ ಜುಲೈ 17ನೇ ದಿನ
6	ಏಪ್ರಿಲ್ ಇಂದ ಜೂನ್, 2020	2020ರ ಆಗಸ್ಟ್ 03ನೇ ದಿನ"

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (25/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 06.07.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 168ಎರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯಪತ್ರಿಕೆ, ಭಾಗ–IVA ಸಂಖ್ಯೆ: 140 ದಿನಾಂಕ: 20ನೇ ಏಪ್ರಿಲ್ 2020ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2020) ಸಂಖ್ಯೆ: ಆಇ 03 ಸಿಎಸ್‌ಎಲ್ 2020 ದಿನಾಂಕ 20ನೇ ಏಪ್ರಿಲ್ 2020ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ :–

ಸದರಿ ಅಧಿಸೂಚನೆಯಲ್ಲಿ, ಮೊದಲನೆ ಕಂಡಿಕೆಯಲ್ಲಿ, ಖಂಡ (i) ರಲ್ಲಿ,–

(i) "2020ರ ಜೂನ್ 29ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ, "2020 ಆಗಸ್ಟ್ 30ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

(ii) "2020ರ ಜೂನ್ 30ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ, "2020ರ ಆಗಸ್ಟ್ 31ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (26/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 06.07.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 168ಎರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ:203 ದಿನಾಂಕ: 16ನೇ ಜೂನ್ 2020ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (20/2020) ಸಂಖ್ಯೆ: ಆಇ 03 ಸಿಎಸ್‌ಎಲ್ 2020 ದಿನಾಂಕ 16ನೇ ಜೂನ್ 2020ರಲ್ಲಿ ಈ ಕೆಳಗಿನಂತೆ ತಿದ್ದುಪಡಿಗಳನ್ನು ಮಾಡಿದೆ, ಅಂದರೆ :–

ಸದರಿ ಅಧಿಸೂಚನೆಯಲ್ಲಿ, ಮೊದಲನೆ ಕಂಡಿಕೆಯಲ್ಲಿ,–

(i) "2020ರ ಜೂನ್ 29ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ, "2020ರ ಆಗಸ್ಟ್ 30ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

(ii) "2020ರ ಜೂನ್ 30ನೇ ದಿನ" ಪದ, ಸಂಖ್ಯೆ ಮತ್ತು ಅಕ್ಷರಗಳಿಗಾಗಿ, "2020ರ ಆಗಸ್ಟ್ 31ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (27/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 16.07.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರೊಂದಿಗೆ ಓದಲಾದ ಸದರಿ ಅಧಿನಿಯಮದ ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA, ಸಂಖ್ಯೆ 1553 ದಿನಾಂಕ 31ನೇ ಡಿಸೆಂಬರ್ 2018ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (29/2018) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 31ನೇ ಡಿಸೆಂಬರ್ 2018ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೂರನೆಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ:–

" ಮತ್ತು ಪರಂತು, ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ತೆರಿಗೆಯ ಅವಧಿಗೆ, ಪರಂತುಕದ ಕೋಷ್ಟಕದ ಅಂಕಣ (2)ರಲ್ಲಿ ನಮೂದಾಗಿರುವ ವರ್ಗದ ನೋಂದಾಯಿತ ವ್ಯಕ್ತಿಗಳು ರಿಟರ್ನ್ ಅನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾಗಿದ್ದು, ಆದರೆ ಕೋಷ್ಟಕದ ಅಂಕಣ (4)ರ ಅನುಗುಣವಾದ ನಮೂದಿನಲ್ಲಿ ತಿಳಿಸಿರುವಂತಹ ಷರತ್ತಿನ ಅನುಸಾರ ಸದರಿ ರಿಟರ್ನ್ ಅನ್ನು 30ನೇ ಸೆಪ್ಟಂಬರ್ 2020 ರೊಳಗೆ ಸಲ್ಲಿಸಿದಲ್ಲಿ, ನೋಂದಾಯಿತ ವ್ಯಕ್ತಿಯಿಂದ ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಎರಡು ನೂರ ಐವತ್ತು ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವನ್ನು ಮನ್ನಾ ಮಾಡತಕ್ಕದ್ದು ಹಾಗೂ ಸದರಿ ರಿಟರ್ನ್ಸ್ ನಲ್ಲಿ ಪಾವತಿಸಬೇಕಾದ ಒಟ್ಟು ರಾಜ್ಯ ತೆರಿಗೆ ಮೊತ್ತ ಶೂನ್ಯವಾಗಿದ್ದಲ್ಲಿ, ಪೂರ್ಣವಾಗಿ ಮನ್ನಾ ಮಾಡತಕ್ಕದ್ದು.".

ಮತ್ತೂ ಪರಂತು ಮೇ 2020 ರಿಂದ ಜುಲೈ 2020 ತಿಂಗಳುಗಳಿಗಾಗಿ, ಹಿಂದಿನ ಆರ್ಥಿಕ ವರ್ಷದಲ್ಲಿ ಒಟ್ಟು ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ವಹಿವಾಟು ಹೊಂದಿರುವ ತೆರಿಗೆದಾರರು, **ನಮೂನೆ–ಜಿಎಸ್‌ಟಿಆರ್ 3ಬಿ** ಅನ್ನು ನಿಗದಿಪಡಿಸಿದ ಅವಧಿಯೊಳಗೆ ಸಲ್ಲಿಸಲು ವಿಫಲಗೊಂಡಲ್ಲಿ, ಆದರೆ ಸದರಿ ರಿಟರ್ನ್ಸ್‌ಅನ್ನು 30ನೇ ಸೆಪ್ಟಂಬರ್ 2020ರೊಳಗೆ ಸಲ್ಲಿಸಿದಲ್ಲಿ, ನೋಂದಾಯಿತ ವ್ಯಕ್ತಿಯಿಂದ ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಎರಡು ನೂರ ಐವತ್ತು ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವನ್ನು ಮನ್ನಾ ಮಾಡತಕ್ಕದ್ದು ಹಾಗೂ ಸದರಿ ರಿಟರ್ನ್ಸ್ ನಲ್ಲಿ ಪಾವತಿಸಬೇಕಾದ ಒಟ್ಟು ರಾಜ್ಯ ತೆರಿಗೆ ಮೊತ್ತ ಶೂನ್ಯವಾಗಿದ್ದಲ್ಲಿ, ಪೂರ್ಣವಾಗಿ ಮನ್ನಾ ಮಾಡತಕ್ಕದ್ದು.".

2. ಈ ಅಧಿಸೂಚನೆಯು 2020 ರ ಜುಲೈ 1ನೇ ದಿನದಿಂದ ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (28/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 16.07.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ:322 ದಿನಾಂಕ: 23ನೇ ಏಪ್ರಿಲ್ 2019ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (08/2019) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ: 23ನೇ ಏಪ್ರಿಲ್ 2019ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ, ಅಂದರೆ :–

ಸದರಿ ಅಧಿಸೂಚನೆಯಲ್ಲಿ, ಮೂರನೆಯ ಕಂಡಿಕೆಯಲ್ಲಿ, ಮೊದಲನೆಯ ಪರಂತುಕದಲ್ಲಿ, "2020ರ ಜುಲೈ 15ನೇ ದಿನ" ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳಿಗಾಗಿ, "2020ರ ಆಗಸ್ಟ್ 31ನೇ ದಿನ" ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (29/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 10.08.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 48ರ ಉಪನಿಯಮ 4ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಪುಟ 155, ಸಂಚಿಕೆ 15, ಸಂಖ್ಯೆ 1225, ದಿನಾಂಕ: 9ನೇ ಏಪ್ರಿಲ್ 2020 ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (07/2020) ಸಂಖ್ಯೆ. ಆಇ 03 ಸಿಎಸ್‌ಎಲ್ 2020 ದಿನಾಂಕ: 27ನೇ ಮಾರ್ಚ್ 2020ಗೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡಿದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೇ ಕಂಡಿಕೆಯಲ್ಲಿ,

(i) "ಉಪ–ನಿಯಮಗಳಲ್ಲಿ ಉಲ್ಲೇಖಿಸಲಾದ" ಪದಗಳ ಮೊದಲು "ವಿಶೇಷ ಆರ್ಥಿಕ ವಲಯ ಘಟಕ ಮತ್ತು" ಈ ಪದಗಳನ್ನು ಸೇರಿಸತಕ್ಕದ್ದು;

(ii) "ನೂರು ಕೋಟಿ ರೂಪಾಯಿಗಳು" ಪದಗಳಿಗೆ "ಐದು ನೂರು ಕೋಟಿ ರೂಪಾಯಿಗಳು" ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (30/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 31.08.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2019ರ (2019ರ ಕರ್ನಾಟಕದ ಅಧಿನಿಯಮ 23) ಪ್ರಕರಣ(1)ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2020ರ ಸೆಪ್ಟಂಬರ್ 1ನೇ ದಿನವನ್ನು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2019ರ (2019ರ ಕರ್ನಾಟಕ ಅಧಿನಿಯಮ 23) ಪ್ರಕರಣ 10ರ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (31/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 08.09.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 168ಎರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ: 322 ದಿನಾಂಕ: 23ನೇ ಏಪ್ರಿಲ್ 2019ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (08/2019) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 23ನೇ ಏಪ್ರಿಲ್ 2019ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೂರನೆಯ ಕಂಡಿಕೆಯಲ್ಲಿ, ಮೊದಲನೆಯ ಪರಂತುಕದಲ್ಲಿ, "2020ರ ಆಗಸ್ಟ್ 31ನೇ ದಿನ" ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳಿಗಾಗಿ, "2020ರ ಅಕ್ಟೋಬರ್ 31ನೇ ದಿನ" ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (32/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 26.09.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 168ಎರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ: 140 ದಿನಾಂಕ: 20ನೇ ಏಪ್ರಿಲ್ 2020ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2020) ಸಂಖ್ಯೆ: ಆಇ 03 ಸಿಎಸ್‌ಎಲ್ 2020 ದಿನಾಂಕ 20ನೇ ಏಪ್ರಿಲ್ 2020ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೆಯ ಕಂಡಿಕೆಯಲ್ಲಿ, ಖಂಡ (i)ರಲ್ಲಿ, 2020ರ ಸೆಪ್ಟಂಬರ್ 1ನೇ ದಿನದಿಂದ ಅನ್ವಯವಾಗುವಂತೆ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ:–

"ಪರಂತು ಯಾವುದೇ ಪ್ರಾಧಿಕಾರವು, ಯಾವುದೇ ಕ್ರಿಯೆಯನ್ನು ಪೂರ್ಣಗೊಳಿಸಲು ಅಥವಾ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ಕಾಲಮಿತಿಯನ್ನು ಅಧಿನಿಯಮದ ಪ್ರಕರಣ 171ರ ಅಡಿಯಲ್ಲಿ, 20ನೇ ದಿನ ಮಾರ್ಚ್ 2020 ರಿಂದ 29ನೇ ದಿನ ನವೆಂಬರ್ 2020ರವರೆಗೆ ನಿರ್ದಿಷ್ಟಪಡಿಸಲಾಗಿದ್ದು ಅಥವಾ ನಿಗಧಿಪಡಿಸಲಾಗಿದ್ದು ಅಥವಾ ಅಧಿಸೂಚಿಸಲಾಗಿದ್ದು, ಮತ್ತು ಅಂತಹ ಕ್ರಿಯೆಯ ಪೂರ್ಣಗೊಳಿಸುವಿಕೆ ಅಥವಾ ಅನುಸರಣೆಯನ್ನು ನಿಗಧಿತ ಸಮಯದೊಳಗೆ ಮಾಡದ್ದಿದ್ದಲ್ಲಿ, ಅಂತಹ ಕ್ರಿಯೆಯನ್ನು ಪೂರ್ಣಗೊಳಿಸುವ ಅಥವಾ ಅನುಸರಿಸುವ ಕಾಲಮಿತಿಯನ್ನು 30ನೇ ದಿನ ನವೆಂಬರ್ 2020 ರವರೆಗೆ ವಿಸ್ತರಿಸಲಾಗಿದೆ."

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (33/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 26.09.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 168ಎರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ: 140 ದಿನಾಂಕ: 20ನೇ ಏಪ್ರಿಲ್ 2020ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2020) ಸಂಖ್ಯೆ: ಆಇ 03 ಸಿಎಸ್‌ಎಲ್ 2020 ದಿನಾಂಕ 20ನೇ ಏಪ್ರಿಲ್ 2020ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೆಯ ಕಂಡಿಕೆಯಲ್ಲಿ, ಖಂಡ (i)ರಲ್ಲಿ, ಮೊದಲನೆ ಪರಂತುಕದ ನಂತರ, 2020ರ ಸೆಪ್ಟಂಬರ್ 21ನೇ ದಿನದಿಂದ ಅನ್ವಯವಾಗುವಂತೆ ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ:–

"ಪರಂತು, ಯಾವುದೇ ವ್ಯಕ್ತಿಯು ಮಂಜೂರಾತಿಗಾಗಿ ಭಾರತದಿಂದ ಕಳುಹಿಸಲಾಗುತ್ತಿರುವ ಅಥವಾ ಪಡೆದ ಸರಕಿನ ಮಾರಾಟ ಅಥವಾ ವಾಪಸ್ಸಾತಿಗೆ ಸಂಬಂಧಿಸಿದಂತೆ, ಯಾವುದೇ ಕ್ರಿಯೆಯನ್ನು ಪೂರ್ಣಗೊಳಿಸಲು ಅಥವಾ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ಕಾಲಮಿತಿಯನ್ನು, ಅಧಿನಿಯಮದ ಪ್ರಕರಣ 31ರ ಉಪ ಪ್ರಕರಣ 7ರಡಿಯಲ್ಲಿ, 20ನೇ ದಿನ ಮಾರ್ಚ್ 2020ರಿಂದ 30ನೇ ದಿನ ಅಕ್ಟೋಬರ್ 2020ವರೆಗೆ ನಿರ್ಧಿಷ್ಟಪಡಿಸಲಾಗಿದ್ದು ಅಥವಾ ನಿಗಧಿಪಡಿಸಲಾಗಿದ್ದು ಅಥವಾ ಅಧಿಸೂಚಿಸಲಾಗಿದ್ದು, ಮತ್ತು ಅಂತಹ ಕ್ರಿಯೆಯ ಪೂರ್ಣಗೊಳಿಸುವಿಕೆ ಅಥವಾ ಅನುಸರಣೆಯನ್ನು ನಿಗಧಿತ ಸಮಯದೊಳಗೆ ಮಾಡದ್ದಿದ್ದಲ್ಲಿ, ಅಂತಹ ಕ್ರಿಯೆಯನ್ನು ಪೂರ್ಣಗೊಳಿಸುವ ಅಥವಾ ಅನುಸರಿಸುವ ಕಾಲಮಿತಿಯನ್ನು 31ನೇ ದಿನ ಅಕ್ಟೋಬರ್ 2020 ರವರೆಗೆ ವಿಸ್ತರಿಸಲಾಗಿದೆ".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (34/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 26.09.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಸದರಿ ಅಧಿನಿಯಮದ ಪ್ರಕರಣ 148ರೊಂದಿಗೆ ಓದಲಾದ ಪ್ರಕರಣ 128ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ:1312 ದಿನಾಂಕ: 29ನೇ ಡಿಸೆಂಬರ್ 2017 ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (24/2017) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 29ನೇ ಡಿಸೆಂಬರ್ 2017ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ:–

(ii) 2020ರ ಸೆಪ್ಟಂಬರ್ 21ನೇ ದಿನದಿಂದ ಅನ್ವಯವಾಗುವಂತೆ, ಸೇರಿಸಲಾದ ಎರಡನೇ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ:–

"ಮತ್ತೂ ಪರಂತು ಜುಲೈ 2017 ರಿಂದ ಮಾರ್ಚ್ 2020 ರವರೆಗಿನ ತ್ರೈಮಾಸಗಳಿಗಾಗಿ **ನಮೂನೆ ಜಿಎಸ್‌ಟಿಆರ್–4** ರಲ್ಲಿ ರಿಟರ್ನ್ ನನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾಗಿದ್ದು, ಆದರೆ ಸದರಿ ರಿಟರ್ನ್‌ನನ್ನು 22ನೇ ಸೆಪ್ಟಂಬರ್ 2020 ರಿಂದ 31ನೇ ಅಕ್ಟೋಬರ್ 2020ರ ನಡುವಿನ ಅವಧಿಯಲ್ಲಿ ಸಲ್ಲಿಸಿದ್ದಲ್ಲಿ, ನೋಂದಾಯಿತ ವ್ಯಕ್ತಿಯಿಂದ ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಎರಡು ನೂರ ಐವತ್ತು

ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವನ್ನು ಮನ್ನಾ ಮಾಡತಕ್ಕದ್ದು ಹಾಗೂ ಸದರಿ ರಿಟರ್ನ್ಸ್ ನಲ್ಲಿ ಪಾವತಿಸಬೇಕಾದ ಒಟ್ಟು ಕೇಂದ್ರ ತೆರಿಗೆ ಮೊತ್ತ ಶೂನ್ಯವಾಗಿದ್ದಲ್ಲಿ, ಪೂರ್ಣವಾಗಿ ಮನ್ನಾ ಮಾಡತಕ್ಕದ್ದು.".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (35/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 26.09.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, **ನಮೂನೆ ಜಿಎಸ್‌ಟಿಆರ್–10**ರಲ್ಲಿ ರಿಟರ್ನ್ ಅನ್ನು ನಿಗದಿತ ದಿನಾಂಕದೊಳಗೆ, ಸಲ್ಲಿಸಲು ವಿಫಲರಾಗಿದ್ದು, ಆದರೆ ಸದರಿ ರಿಟರ್ನ್ಸ್ ಅನ್ನು 2020ರ ಸೆಪ್ಟಂಬರ್ 22ನೇ ದಿನಾಂಕದಿಂದ 2020ರ ಡಿಸೆಂಬರ್ 31ನೇ ದಿನಾಂಕದವರೆಗಿನ ಅವಧಿಯಲ್ಲಿ ಸಲ್ಲಿಸಿದಲ್ಲಿ, ನೊಂದಾಯಿತ ವ್ಯಕ್ತಿಗಳಿಗೆ ಸದರಿ ಅಧಿನಿಯಮದ ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕ ಮೊತ್ತ ಇನ್ನೂರ ಐವತ್ತು ರೂಪಾಯಿಗಳಿಗೆ ಮೀರಿದ ಮೊತ್ತವನ್ನು ಮನ್ನಾ ಮಾಡುತ್ತದೆ.".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ
(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ತಿದ್ದೋಲೆ
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 13.10.2020.

(1) ಕರ್ನಾಟಕ ವಿಶೇಷ ರಾಜ್ಯಪತ್ರಿಕೆ, ಭಾಗ IVA, ಸಂಖ್ಯೆ. 418ರಲ್ಲಿ 2020ರ ಸೆಪ್ಟೆಂಬರ್ 26ನೇ ದಿನದಂದು ಪ್ರಕಟಿಸಿದ ಸರ್ಕಾರದ ಅಧಿಸೂಚನೆ (34/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 ದಿನಾಂಕ: 26.09.2020ಕ್ಕೆ ಈ ಕೆಳಕಂಡಂತೆ ಸರಿಪಡಿಸಿದಂತೆ ಓದಿಕೊಳ್ಳತಕ್ಕದ್ದು, ಅಂದರೆ:–

(ಎ) ಎರಡನೆಯ ಕಂಡಿಕೆಯಲ್ಲಿ, "ಎರಡನೇ ಪರಂತುಕದ ನಂತರ" ಪದಗಳ ಮೊದಲು ಕಾಣಿಸಿಕೊಳ್ಳುವ "(ii)" ಅನ್ನು ಬಿಟ್ಟುಬಿಡತಕ್ಕದ್ದು;

(ಬಿ) ಈ ರೀತಿ ಸೇರಿಸಿದ ಪರಂತುಕದಲ್ಲಿ,–

(i) "ಮಾರ್ಚ್ 2020" ಪದಗಳು ಮತ್ತು ಸಂಖ್ಯೆಗಳನ್ನು "ಮಾರ್ಚ್ 2019" ಎಂದು ಓದಿಕೊಳ್ಳತಕ್ಕದ್ದು ; ಮತ್ತು

(ii) "22ರ" ಎಂಬ ಸಂಖ್ಯೆ ಮತ್ತು ಪದವನ್ನು "22ನೇ" ಎಂದು ಓದಿಕೊಳ್ಳತಕ್ಕದ್ದು.

(2) ಕರ್ನಾಟಕ ವಿಶೇಷ ರಾಜ್ಯಪತ್ರಿಕೆ ಭಾಗ IVA, ಸಂಖ್ಯೆ.419ರಲ್ಲಿ 2020ರ ಸೆಪ್ಟೆಂಬರ್ 26ನೇ ದಿನದಂದು ಪ್ರಕಟಿಸಿದ ಸರ್ಕಾರದ ಅಧಿಸೂಚನೆ (35/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 ದಿನಾಂಕ: 26.09.2020ರಲ್ಲಿ, "22ರ" ಎಂಬ ಸಂಖ್ಯೆ ಮತ್ತು ಪದವನ್ನು "22ನೇ" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (36/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 05.10.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ನಿಯಮ 48ರ ಉಪನಿಯಮ (4)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ರಾಜ್ಯ ಪತ್ರಿಕೆ, ಭಾಗ– IVA, ಸಂಪುಟ 155, ಸಂಚಿಕೆ 15, ಪುಟ 1225, ದಿನಾಂಕ: 9ನೇ ಏಪ್ರಿಲ್ 2020 ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (07/2020) ಸಂಖ್ಯೆ. ಆಇ 03 ಸಿಎಸ್‌ಎಲ್ 2020 (ಇ) ದಿನಾಂಕ: 27ನೇ ಮಾರ್ಚ್ 2020ಗೆ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೇ ಕಂಡಿಕೆಯಲ್ಲಿ,

(i) "ಒಂದು ಹಣಕಾಸು ವರ್ಷ" ಪದಗಳಿಗಾಗಿ "2017–18 ರಿಂದ ಯಾವುದೇ ಹಿಂದಿನ ಹಣಕಾಸು ವರ್ಷ" ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು.;

(ii) "ನೋಂದಾಯಿತ ವ್ಯಕ್ತಿಗೆ ಸರಕು ಅಥವಾ ಸೇವೆಗಳ ಅಥವಾ ಅವೆರೆಡರ" ಪದಗಳ ನಂತರ, "ಅಥವಾ ರಫ್ತಿಗಾಗಿ" ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (37/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 13.10.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 46ರ ಆರನೇ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಪುಟ 155, ಸಂಚಿಕೆ 15, ಪುಟ 1225, ದಿನಾಂಕ: 9ನೇ ಏಪ್ರಿಲ್ 2020 ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (08/2020) ಸಂಖ್ಯೆ. ಆಇ 03 ಸಿಎಸ್‌ಎಲ್ 2020(ಇ) ದಿನಾಂಕ: 27ನೇ ಮಾರ್ಚ್ 2020ಗೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ,

(i) ಮೊದಲನೇ ಕಂಡಿಕೆಯಲ್ಲಿ, "ಒಂದು ಹಣಕಾಸು ವರ್ಷ" ಪದಗಳಿಗಾಗಿ "2017–18 ರಿಂದ ಮುಂದಕ್ಕೆ ಯಾವುದೇ ಹಿಂದಿನ ಹಣಕಾಸು ವರ್ಷ" ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು.;

(ii) ಎರಡನೇ ಕಂಡಿಕೆಯಲ್ಲಿ, "ಅಕ್ಟೋಬರ್ 1ನೇ ದಿನ "ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳಿಗಾಗಿ "ಡಿಸೆಂಬರ್ 1ನೇ ದಿನ "ಸಂಖ್ಯೆಗಳು, ಅಕ್ಷರಗಳು ಮತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (38/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 13.10.2020.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮ, 2017ರ ನಿಯಮ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ಸರ್ಕಾರವು, ನಿಯಮ 48ರ ಉಪನಿಯಮ (4)ರಡಿಯಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ಅನ್ಯ ವಿಧಾನವನ್ನು ಹೊರತುಪಡಿಸಿ, ತೆರಿಗೆ ಬೆಲೆ

ಪಟ್ಟಿಯನ್ನು ಸಿದ್ದಪಡಿಸಿದ ನೋಂದಾಯಿತ ವ್ಯಕ್ತಿಗಳನ್ನು ಒಂದು ವರ್ಗದ ವ್ಯಕ್ತಗಳೆಂದು, ಸದರಿ ವ್ಯಕ್ತಿಗಳು ವಿಶೇಷ ವಿಧಾನವನ್ನು ಅನುಸರಿಸಿ 1ನೇ ಅಕ್ಟೋಬರ್ 2020ರ ದಿನದಿಂದ 31ನೇ ಅಕ್ಟೋಬರ್ 2020ರ ದಿನದ ನಡುವಿನ ಅವಧಿಯಲ್ಲಿ ತೆರಿಗೆ ಬೆಲೆ ಪಟ್ಟಿಯನ್ನು ಸಾಮಾನ್ಯ ಸರಕು ಮತ್ತು ಸೇವೆಗಳ ವಿದ್ಯುನ್ಮಾನ ಪೋರ್ಟಲ್‌ನಲ್ಲಿ ನಿರ್ದಿಷ್ಟಪಡಿಸಿರುವ ವಿವರಗಳೊಂದಿಗೆ **ನಮೂನೆ ಜಿಎಸ್‌ಟಿ ಐನ್‌ವಿ–01** ಅನ್ನು ಸಿದ್ದಪಡಿಸಿ ಅಂತಹ ಬೆಲೆಪಟ್ಟಿಯ ದಿನಾಂಕದ 30ದಿನಗಳೊಳಗಾಗಿ ಅಪ್ಲೋಡ್ ಮಾಡಿ, ಬೆಲೆ ಪಟ್ಟಿ ಉಲ್ಲೇಖ ಸಂಖ್ಯೆ (IRN) ಪಡೆಯಬೇಕು, ತಪ್ಪಿದಲ್ಲಿ ಅದನ್ನು ಬೆಲೆ ಪಟ್ಟಿಯೆಂದು ಪರಿಗಣಿಸತಕ್ಕದಲ್ಲವೆಂದು ಅಧಿಸೂಚಿಸಿದೆ.

2. ಈ ಅಧಿಸೂಚನೆಯು 2020ರ ಅಕ್ಟೋಬರ್ 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (39/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 27.10.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಹಿಂದಿನ ಹಣಕಾಸು ವರ್ಷದಲ್ಲಿ ಅಥವಾ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ.1.50 ಕೋಟಿಯವರೆಗಿನ ಸಮಗ್ರ ವಹಿವಾಟು ಹೊಂದಿರುವ ನೋಂದಾಯಿತ ವ್ಯಕ್ತಿಗಳನ್ನು, ಸರಕು ಅಥವಾ ಸೇವೆಗಳ ಅಥವಾ ಅವೆರೆಡರ ಹೊರಮುಖ ಪೂರೈಕೆಯ ವಿವರಗಳನ್ನು ಸಲ್ಲಿಸುವುದಕ್ಕಾಗಿ ಈ ಕೆಳಗೆ ವಿವರಿಸಿದ ವಿಶೇಷ ವಿಧಾನಗಳನ್ನು ಪಾಲಿಸತಕ್ಕ ನೋಂದಾಯಿತ ವ್ಯಕ್ತಿಗಳ ಸಮೂಹವೆಂದು ಅಧಿಸೂಚಿಸುತ್ತದೆ.

ಸದರಿ ನೋಂದಾಯಿತ ವ್ಯಕ್ತಿಗಳು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರಡಿಯಲ್ಲಿ ಕೆಳಗಿನ ಕೋಷ್ಟಕ ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿದ ತ್ರೈಮಾಸಿಕದಲ್ಲಿ ಮಾಡಿದ ಸರಕು ಅಥವಾ ಸೇವೆಗಳ ಅಥವಾ ಅವೆರೆಡರ ಹೊರಮುಖ ಪೂರೈಕೆಯ ವಿವರಗಳನ್ನು **ಜಿಎಸ್‌ಟಿಆರ್–1** ರಲ್ಲಿ ಕೆಳಗಿನ ಕೋಷ್ಟಕ ಅಂಕಣ(3) ರ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯವರೆಗೆ **ಜಿಎಸ್‌ಟಿಆರ್–1** ರಲ್ಲಿ ವಿವರಗಳನ್ನು ಸಲ್ಲಿಸತಕ್ಕದ್ದು. ಅಂದರೆ:–

ಕ್ರ.ಸಂ	**ನಮೂನೆ ಜಿ.ಎಸ್.ಟಿ.ಆರ್–1** ರಲ್ಲಿ ವಿವರಗಳನ್ನು ಸಲ್ಲಿಸಲಾಗಿರುವಂತಹ ತ್ರೈಮಾಸಿಕ	**ನಮೂನೆ ಜಿ.ಎಸ್.ಟಿ.ಆರ್–1** ರಲ್ಲಿ ವಿವರಗಳನ್ನು ಸಲ್ಲಿಸುವುದಕ್ಕಾಗಿ ಕಾಲಾವಧಿ
(1)	(2)	(3)
1	ಅಕ್ಟೋಬರ್, 2020 ರಿಂದ ಡಿಸೆಂಬರ್, 2020	13ನೇ ಜನವರಿ, 2021
2	ಜನವರಿ, 2021 ರಿಂದ ಮಾರ್ಚ್, 2021	13ನೇ ಏಪ್ರಿಲ್, 2021

ಅಕ್ಟೋಬರ್, 2020 ರಿಂದ ಮಾರ್ಚ್ 2021ರ ತಿಂಗಳುಗಳಿಗೆ, ಪ್ರಕರಣ 38ರ ಉಪಪ್ರಕರಣ (2), ವಿವರಗಳನ್ನು ಅಥವಾ ರಿಟರ್ನ್‌ನನ್ನು ಸಲ್ಲಿಸಲು ಸಂದರ್ಭಾನುಸಾರವಾಗಿ ಕಾಲಾವಧಿಯನ್ನು ಅಧಿಕೃತ ರಾಜ್ಯಪತ್ರದಲ್ಲಿ ನಂತರದಲ್ಲಿ ಅಧಿಸೂಚಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (40/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 27.10.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಖ್ಯೆ 908 ದಿನಾಂಕ: 16ನೇ ಅಕ್ಟೋಬರ್ 2019 ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (20/2019) ಸಂಖ್ಯೆ. ಆಇ 47 ಸಿಎಸ್‌ಎಲ್ 2017 ದಿನಾಂಕ: 16ನೇ ಅಕ್ಟೋಬರ್ 2019ಗೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಪ್ರಾರಂಭಿಕ ಕಂಡಿಕೆಯಲ್ಲಿ, "ಆರ್ಥಿಕ ವರ್ಷಗಳು 2017–18 ಮತ್ತು 2018–19" ಪದಗಳು ಮತ್ತು ಸಂಖ್ಯೆಗಳಿಗೆ, "ಆರ್ಥಿಕ ವರ್ಷಗಳು 2017–18, 2018–19 ಮತ್ತು 2019–20" ಪದಗಳು ಮತ್ತು ಸಂಖ್ಯೆಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (41/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 11.11.2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2020ರ (2020ರ ಕರ್ನಾಟಕದ ಅಧಿನಿಯಮ 20) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ(1)ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2020ರ ಮೇ 18ನೇ ದಿನವನ್ನು, ಸದರಿ ಅಧಿನಿಯಮದ ಪ್ರಕರಣ 11ರ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ
(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (42/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 11.11.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2020ರ (2020ರ ಕರ್ನಾಟಕದ ಅಧಿನಿಯಮ 20) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ(1)ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2020ರ ಜೂನ್ 30ನೇ ದಿನವನ್ನು, ಸದರಿ ಅಧಿನಿಯಮದ ಪ್ರಕರಣಗಳಾದ 2 ಮತ್ತು 13ರ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (43/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 19.11.2020

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2019ರ (2019ರ ಕರ್ನಾಟಕದ ಅಧಿನಿಯಮ 23) ಪ್ರಕರಣ(1)ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2020ರ ನವಂಬರ್ 10ನೇ ದಿನವನ್ನು, ಸದರಿ ಅಧಿನಿಯಮದ ಪ್ರಕರಣ 7ರ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (44/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 19.11.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27), (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 39ರ ಉಪಪ್ರಕರಣ (7)ರ ಪರಂತುಕದೊಂದಿಗೆ ಓದಲಾದ, ಸದರಿ ಅಧಿನಿಯಮದ ಪ್ರಕರಣ 39ರ ಉಪಪ್ರಕರಣ (1)ರ ಪರಂತುಕದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕೇಂದ್ರ ನಿಯಮ 13) ಪ್ರಕರಣ 14ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳನ್ನು ಹೊರತುಪಡಿಸಿ, ಹಿಂದಿನ ಹಣಕಾಸು ವರ್ಷದಲ್ಲಿ ಐದು ಕೋಟಿ ರೂಪಾಯಿಗಳವರೆಗೆ ಸಮಗ್ರ ವಹಿವಾಟು ಹೊಂದಿರುವ ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ನಿಯಮ 61ಎ ಉಪನಿಯಮ (1)ರ ಅಡಿಯಲ್ಲಿ ಪ್ರತಿ ತ್ರೈಮಾಸಿಕಕ್ಕೆ ರಿಟರ್ನ್‌ನನ್ನು ಸಲ್ಲಿಸಲು ಆಯ್ಕೆ ಮಾಡಿಕೊಂಡಿರುವವರನ್ನು ನೋಂದಾಯಿತ ವರ್ಗದ ವ್ಯಕ್ತಿಗಳೆಂದು, ಅಂಥ ವ್ಯಕ್ತಿಗಳು ಈ ಕೆಳಕಂಡ ಷರತ್ತುಗಳು ಮತ್ತು ನಿರ್ಬಂಧನೆಗಳಿಗೆ ಒಳಪಟ್ಟು, ಜನವರಿ 2021ರ ನಂತರದ ಪ್ರತಿ ತ್ರೈಮಾಸಿಕಕ್ಕೆ ರಿಟರ್ನ್‌ನನ್ನು ಸಲ್ಲಿಸಲು ಮತ್ತು ಪ್ರಕರಣ 39ರ ಉಪಪ್ರಕರಣ (7)ರ ಪರಂತುಕದ ಅನುಸಾರವಾಗಿ ಪ್ರತಿ ತಿಂಗಳ ತೆರಿಗೆ ಬಾಧ್ಯತೆಯನ್ನು ಪಾವತಿಸತಕ್ಕದೆಂದು ಈ ಮೂಲಕ ಅಧಿಸೂಚಿಸುತ್ತದೆ, ಅಂದರೆ :–

(i) ಅಂತಹ ಆಯ್ಕೆ ಮಾಡುವ ದಿನಾಂಕದ ಹಿಂದಿನ ತಿಂಗಳಿನವರೆಗೆ ಬಾಕಿಯಿರುವ ರಿಟರ್ನ್‌ನನ್ನು ಸಲ್ಲಿಸಿರಬೇಕು.

(ii) ಒಮ್ಮೆ ಅಂತಹ ಆಯ್ಕೆ ಮಾಡಿಕೊಂಡ ನಂತರ, ಅಂತಹ ಆಯ್ಕೆಯನ್ನು ಪರಿಷ್ಕರಿಸದ ಹೊರತು, ಅಂತಹ ಆಯ್ಕೆಯಲ್ಲಿಯೇ ಮುಂದಿನ ತೆರಿಗೆ ಅವಧಿಗಳಿಗೆ ರಿಟರ್ನ್‌ನನ್ನು ಸಲ್ಲಿಸುವುದನ್ನು ಮುಂದುವರೆಸಬೇಕು.

(2) ಒಂದು ಹಣಕಾಸು ವರ್ಷದಲ್ಲಿ ಒಂದು ತ್ರೈಮಾಸಿಕ ಅವಧಿಯಲ್ಲಿ, ಐದು ಕೋಟಿ ರೂಪಾಯಿಗಳ ಸಮಗ್ರ ವಹಿವಾಟನ್ನು ದಾಟಿದ ನೋಂದಾಯಿತ ವ್ಯಕ್ತಿಯು, ಮುಂದಿನ ತ್ರೈಮಾಸಿಕದ ಮೊದಲ ತಿಂಗಳಿನಿಂದ ತ್ರೈಮಾಸಿಕ ಆಧಾರದ ರೀತಿಯಲ್ಲಿ ರಿಟರ್ನ್‌ನನ್ನು ಸಲ್ಲಿಸಲು ಅರ್ಹರಿರುವುದಿಲ್ಲ.

(3) 2020ರ ಅಕ್ಟೋಬರ್ ಮಾಹೆಯ ತೆರಿಗೆ ಅವಧಿಗೆ ರಿಟರ್ನ್‌ನನ್ನು 2020ರ ನವೆಂಬರ್ 30ನೇ ದಿನಾಂಕದಂದು ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಿರುವ, ಈ ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿರುವ ನೋಂದಾಯಿತ ವ್ಯಕ್ತಿಗಳು ಸದರಿ ಅಧಿನಿಯಮದ ನಿಯಮ 61ಎರ ಉಪನಿಯಮ (1)ರಡಿ ಕೋಷ್ಟಕದ ಅಂಕಣ (3)ರಲ್ಲಿ ನಮೂದಿಸಿದಂತೆ ಮಾಸಿಕ ಅಥವಾ ತ್ರೈಮಾಸಿಕ ರಿಟರ್ನ್‌ನನ್ನು ಸಲ್ಲಿಸಲು ಆಯ್ಕೆ ಮಾಡಿಕೊಂಡಿರುತ್ತಾರೆಂದು ಪರಿಭಾವಿಸತಕ್ಕದ್ದು:–

ಕೋಷ್ಟಕ

ಕ್ರ ಸಂ.	ನೊಂದಾಯಿತ ವ್ಯಕ್ತಿಗಳ ವರ್ಗ	ಪರಿಭಾವಿತ ಆಯ್ಕೆ
(1)	(2)	(3)
1	ಪ್ರಸಕ್ತ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿವರೆಗಿನ ಸಮಗ್ರ ವಹಿವಾಟು ಹೊಂದಿರುವ, ನಮೂನೆ **ಜಿ.ಎಸ್.ಟಿ.ಆರ್–1**ನ್ನು ತ್ರೈಮಾಸಿಕ ಆಧಾರದಲ್ಲಿ ಸಲ್ಲಿಸಿದ ನೋಂದಾಯಿತ ವ್ಯಕ್ತಿಗಳು	ತ್ರೈಮಾಸಿಕ ರಿಟರ್ನ್
2	ಪ್ರಸಕ್ತ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿವರೆಗಿನ ಸಮಗ್ರ ವಹಿವಾಟು ಹೊಂದಿರುವ, ನಮೂನೆ **ಜಿ.ಎಸ್.ಟಿ.ಆರ್–1**ನ್ನು ಮಾಸಿಕ ಆಧಾರದಲ್ಲಿ ಸಲ್ಲಿಸಿದ ನೋಂದಾಯಿತ ವ್ಯಕ್ತಿಗಳು	ಮಾಸಿಕ ರಿಟರ್ನ್
3	ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗಿಂತ ಮೀರಿದ ಮತ್ತು 5 ಕೋಟಿ ರೂಪಾಯಿಗಳವರೆಗೆ ಸಮಗ್ರ ವಹಿವಾಟು ಹೊಂದಿರುವ ನೋಂದಾಯಿತ ವ್ಯಕ್ತಿಗಳು	ತ್ರೈಮಾಸಿಕ ರಿಟರ್ನ್

(4) ಸದರಿ ಕೋಷ್ಟಕದ ಅಂಕಣ(2)ರಲ್ಲಿ ಉಲ್ಲೇಖಿಸಿರುವ ನೋಂದಾಯಿತ ವ್ಯಕ್ತಿಗಳು, ಸಾಮಾನ್ಯ ಪೋರ್ಟಲ್ ಮುಖಾಂತರ ವಿದ್ಯುನ್ಮಾನ ರೀತಿಯಲ್ಲಿ ಪೂರ್ವ ನಿಯೋಜಿತ ಆಯ್ಕೆಯನ್ನು, 2020ರ ಡಿಸೆಂಬರ್ 5ನೇ ದಿನಾಂಕದಿಂದ 2021ರ ಜನವರಿ 31ನೇ ದಿನಾಂಕದ ಅವಧಿಯಲ್ಲಿ ಬದಲಾಯಿಸಿಕೊಳ್ಳಬಹುದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (45/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 19.11.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27), (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 39ರ ಉಪಪ್ರಕರಣ (7) ರೊಂದಿಗೆ ಓದಲಾದ, ಸದರಿ ಅಧಿನಿಯಮದ ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸದರಿ ಅಧಿನಿಯಮ ಪ್ರಕರಣ 39ರ ಉಪಪ್ರಕರಣ (1) ರ ಪರಂತುಕದ ಅನ್ವಯ ಅಧಿಸೂಚಿಸಿದ ನೋಂದಾಯಿತ ವ್ಯಕ್ತಿಗಳು, ಪ್ರತಿ ತ್ರೈಮಾಸಿಕ ಅಥವಾ ಅದರ ಭಾಗವಾರು ರಿಟರ್ನ್‌ನನ್ನು ಸಲ್ಲಿಸುವ ಆಯ್ಕೆ ಮಾಡಿಕೊಂಡಿರುವ ನೋಂದಾಯಿತ ವರ್ಗದ ವ್ಯಕ್ತಿಗಳೆಂದು, ಸದರಿ ವ್ಯಕ್ತಿಗಳು ತ್ರೈಮಾಸಿಕದ ಮೊದಲ ತಿಂಗಳಲ್ಲಿ ಅಥವಾ ಎರಡನೇ ತಿಂಗಳಲ್ಲಿ ಅಥವಾ ಅವೆರೆಡು ತಿಂಗಳುಗಳಲ್ಲಿ ವಿಶೇಷವಾದ ವಿಧಾನವನ್ನು ಅನುಸರಿಸತಕ್ಕವರೆಂದು, ಸದರಿ ಅಧಿನಿಯಮದ ಪ್ರಕರಣ 39ರ ಉಪಪ್ರಕರಣ (7)ರ ಪರಂತುಕದ ಅನ್ವಯ ಬಾಕಿಯಿರುವ ತೆರಿಗೆಯನ್ನು ಸದರಿ ವ್ಯಕ್ತಿಗಳು ಕೆಳಕಂಡ ಮೊತ್ತದ ಸಮಾನ ಮೊತ್ತವನ್ನು ವಿದ್ಯುದ್ಮಾನ ನಗದು ಖಾತೆಗೆ ಜಮೆ ಮಾಡಬಹುದು ಎಂದು ಅಧಿಸೂಚಿಸಿದೆ.

(i) ಹಿಂದಿನ ತ್ರೈಮಾಸಿಕಕ್ಕೆ ಸಲ್ಲಿಸಿದ ತ್ರೈಮಾಸಿಕ ರಿಟರ್ನ್‌ನಲ್ಲಿ ಪಾವತಿಸಿದ ತೆರಿಗೆ ಬಾಧ್ಯತೆಯ ಮೊತ್ತದ ಮೂವತ್ತೈದು ಪ್ರತಿಶತದ ತೆರಿಗೆ ಮೊತ್ತವನ್ನು ವಿದ್ಯುದ್ಮಾನ ನಗದು ಖಾತೆಗೆ ಖರ್ಚಾಗಿ ಪಾವತಿಸುವುದು; ಅಥವಾ

(ii) ರಿಟರ್ನ್‌ನನ್ನು ಮಾಸಿಕವಾಗಿ ಸಲ್ಲಿಸಿದ್ದರೆ, ತಕ್ಷಣದ ಹಿಂದಿನ ತ್ರೈಮಾಸಿಕದ ಕೊನೆಯ ತಿಂಗಳ ರಿಟರ್ನ್‌ನಲ್ಲಿ ಪಾವತಿಸಿದ ತೆರಿಗೆ ಬಾಧ್ಯತೆಯನ್ನು ವಿದ್ಯುದ್ಮಾನ ನಗದು ಖಾತೆಯಲ್ಲಿ ಖರ್ಚಾಗಿ ಪಾವತಿಸುವುದು:

ಪರಂತು ಅಂತಹ ಮೊತ್ತ ಠೇವಣಿ ಮಾಡುವ ಅಗತ್ಯವಿರುವುದಿಲ್ಲ–

(ಎ) ತ್ರೈಮಾಸಿಕದ ಮೊದಲ ತಿಂಗಳ ರಿಟರ್ನ್‌ನಲ್ಲಿ ವಿದ್ಯುನ್ಮಾನ ನಗದು ಖಾತೆ ಅಥವಾ ವಿದ್ಯುನ್ಮಾನ ಜಮಾ ಖಾತೆಯಲ್ಲಿ ಉಳಿಕೆಯು ತೆರಿಗೆ ಬಾಧ್ಯತೆಗೆ ಸಾಕಷ್ಟು ಇದ್ದರೆ ಅಥವಾ ತೆರಿಗೆ ಬಾಧ್ಯತೆ ಶೂನ್ಯವಾಗಿದ್ದರೆ;

(ಬಿ) ತ್ರೈಮಾಸಿಕದ ಎರಡನೇ ತಿಂಗಳ ರಿಟರ್ನ್‌ನಲ್ಲಿ ವಿದ್ಯುದ್ಮಾನ ನಗದು ಖಾತೆ ಅಥವಾ ವಿದ್ಯುದ್ಮಾನ ಜಮಾ ಖಾತೆಯಲ್ಲಿ ಉಳಿಕೆಯು ತ್ರೈಮಾಸಿಕದ ಮೊದಲ ಮತ್ತು ಎರಡನೇ ತಿಂಗಳ ಒಟ್ಟು ತೆರಿಗೆ ಬಾಧ್ಯತೆಗೆ ಸಾಕಷ್ಟು ಇದ್ದರೆ ಅಥವಾ ತೆರಿಗೆ ಬಾಧ್ಯತೆ ಶೂನ್ಯವಾಗಿದ್ದರೆ;

ಪರಂತು ಮುಂದುವರೆದು, ನೋಂದಾಯಿತ ವ್ಯಕ್ತಿಯು ಅವನ ಹಿಂದಿನ ತಿಂಗಳ ಸಂಪೂರ್ಣ ತೆರಿಗೆ ಅವಧಿಯ ರಿಟರ್ನ್‌ನ್ನು ಸಲ್ಲಿಸದ ಹೊರತು ಸದರಿ ವಿಶೇಷ ವಿಧಾನಕ್ಕೆ ಅರ್ಹರಾಗಿರುವುದಿಲ್ಲ.

ವಿವರಣೆ– ಈ ಅಧಿಸೂಚನೆಯ ಉದ್ದೇಶಗಳಿಗಾಗಿ "ಸಂಪೂರ್ಣ ತೆರಿಗೆ ಅವಧಿ" ಪದಾವಳಿಯು ಒಬ್ಬ ವ್ಯಕ್ತಿ ನೋಂದಾಯಿತನಾದ ತೆರಿಗೆ ಅವಧಿಯ ಮೊದಲ ದಿನದಿಂದ ತೆರಿಗೆ ಅವಧಿಯ ಕೊನೆಯ ದಿನದವರೆಗೆ ಎಂದು ಅರ್ಥೈಸುವುದು.

2.ಈ ಅಧಿಸೂಚನೆಯು 2021 ರ ಜನವರಿ 1ನೇ ದಿನದಿಂದಲೇ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (46/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 19.11.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 48ರ ಉಪ ನಿಯಮ (4)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ರಾಜ್ಯ ಪತ್ರಿಕೆ, ಭಾಗ– IVA, ಸಂಪುಟ 155, ಸಂಚಿಕೆ 15, ಸಂಖ್ಯೆ 1225, ದಿನಾಂಕ: 9ನೇ ಏಪ್ರಿಲ್ 2020 ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (07/2020) ಸಂಖ್ಯೆ. ಆಇ 03 ಸಿಎಸ್‌ಎಲ್ 2020(ಇ) ದಿನಾಂಕ: 27ನೇ ಮಾರ್ಚ್ 2020ಗೆ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೇ ಕಂಡಿಕೆಯಲ್ಲಿ, 2021ರ ಜನವರಿ 1ನೇ ದಿನಾಂಕದಿಂದ ಜಾರಿಗೆ ಬರುವಂತೆ, "ಐದು ನೂರು ಕೋಟಿ ರೂಪಾಯಿಗಳು" ಪದಗಳಿಗಾಗಿ "ಒಂದು ನೂರು ಕೋಟಿ ರೂಪಾಯಿಗಳು" ಪದಗಳನ್ನುಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (47/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 08.12.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ದಿನಾಂಕ 27ನೇ ಮಾರ್ಚ್, 2020 ರಲ್ಲಿ ಕರ್ನಾಟಕದ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಪುಟ–155, ಸಂಚಿಕೆ 15, ಸಂಖ್ಯೆ 1225 ಮತ್ತು 1226, ದಿನಾಂಕ 9ನೇ ಏಪ್ರಿಲ್ 2020ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ.08/2020 ಆಇ 03 ಸಿಎಸ್‌ಎಲ್ 2020(ಇ), ದಿನಾಂಕ 27ನೇ ಮಾರ್ಚ್, 2020 ರಲ್ಲಿನ ಉಪಬಂಧದ ಅನುಸರಣೆಯನ್ನು ದಿನಾಂಕ 01ನೇ ಡಿಸೆಂಬರ್ 2020ರಿಂದ 31ನೇ ಮಾರ್ಚ್ 2021ರ ನಡುವಿನ ಅವಧಿಯಲ್ಲಿ ಯಾವುದೇ ನೋಂದಾಯಿತ ವ್ಯಕ್ತಿಯು, 1ನೇ ಏಪ್ರಿಲ್, 2021ರಿಂದ ಸದರಿ ಅಧಿಸೂಚನೆಯ ಉಪಬಂಧಗಳನ್ನು ಅನುಸರಣೆ ಮಾಡುವ ಷರತ್ತಿಗೆ ಒಳಪಟ್ಟು, ನೋಂದಾಯಿತ ವ್ಯಕ್ತಿಯಿಂದ ಸದರಿ ಅಧಿನಿಯಮದ ಪ್ರಕರಣ 125ರಡಿ ಪಾವತಿಸಬೇಕಾಗುವ ದಂಡದ ಮೊತ್ತವನ್ನು ಮನ್ನಾ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (48/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 19.12.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 168ಎರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ: 140, ದಿನಾಂಕ: 20ನೇ ಏಪ್ರಿಲ್ 2020ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2020) ಸಂಖ್ಯೆ: ಆಇ 03 ಸಿಎಸ್‌ಎಲ್ 2020 ದಿನಾಂಕ 20ನೇ ಏಪ್ರಿಲ್ 2020ಕ್ಕೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಮಾಡಿದೆ, ಅಂದರೆ :–

ಸದರಿ ಅಧಿಸೂಚನೆಯಲ್ಲಿ, ಮೊದಲನೆ ಕಂಡಿಕೆಯಲ್ಲಿ, ಪರಂತುಕದ ಖಂಡ (i) ರಲ್ಲಿ,–

(i) "2020ರ ನವೆಂಬರ್ 29ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ, "2021ರ ಮಾರ್ಚ್ 30ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

(ii) "2020ರ ನವೆಂಬರ್ 30ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳಿಗಾಗಿ, "2021ರ ಮಾರ್ಚ್ 31ನೇ ದಿನ" ಪದಗಳು, ಸಂಖ್ಯೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

3. ಸದರಿ ಅಧಿಸೂಚನೆಯು, 2020 ಡಿಸೆಂಬರ್ 1ನೇ ದಿನಾಂಕದಿಂದಲೇ ಜಾರಿಗೆ ಬಂದಿರುತ್ತದೆ ಎಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (49/2020)
ಸಂಖ್ಯೆ.ಆಇ 03 ಸಿಎಸ್‌ಎಲ್ 2020, ಬೆಂಗಳೂರು, ದಿನಾಂಕ: 30.12.2020.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2020ರ (2020ರ ಕರ್ನಾಟಕದ ಅಧಿನಿಯಮ 20) (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಪ್ರಕರಣ(1)ರ ಉಪಪ್ರಕರಣ (2)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2021ರ ಜನವರಿ 1ನೇ ದಿನವನ್ನು, ಸದರಿ ಅಧಿನಿಯಮದ ಪ್ರಕರಣಗಳಾದ 3, 4, 5, 6, 7, 8 ,9, 10 ಮತ್ತು 14ನೇ ಉಪಬಂಧಗಳು ಜಾರಿಗೆ ಬರುವ ದಿನಾಂಕವನ್ನಾಗಿ, ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (01/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 05.03.2021.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 25ರ ಉಪಪ್ರಕರಣ (6ಡಿ)ಯ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ಕರ್ನಾಟಕ ರಾಜ್ಯಪತ್ರ, ಭಾಗ– IVA, ಸಂಚಿಕೆ 15 ಪುಟ ಸಂಖ್ಯೆ.1226, 2020ರ ಏಪ್ರಿಲ್ 2ನೇ ದಿನದಂದು ಪ್ರಕಟಿಸಿದ ಕರ್ನಾಟಕ ಸರ್ಕಾರದ ಅಧಿಸೂಚನೆ (09/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 ದಿನಾಂಕ: 09–04–2020 ನ್ನು

ರದ್ದುಪಡಿಸಿ, ಅಂತಹ ರದ್ದುಪಡಿಸುವಿಕೆಗೆ ಮುನ್ನ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಪ್ರಕರಣ 25ರ ಉಪಪ್ರಕರಣ 6(ಬಿ) ಅಥವಾ 6(ಸಿ)ರಡಿಯ ಉಪಬಂಧಗಳು, ಈ ಕೆಳಕಂಡ ವ್ಯಕ್ತಿಗಳಿಗೆ ಅನ್ವಯಿಸುವುದಿಲ್ಲವೆಂದು ಈ ಮೂಲಕ ಅಧಿಸೂಚಿಸುತ್ತದೆ:–

1. ಭಾರತದ ಪ್ರಜೆ ಅಲ್ಲದ ವ್ಯಕ್ತಿ; ಅಥವಾ
2. ಕೇಂದ್ರ ಅಥವಾ ರಾಜ್ಯ ಸರ್ಕಾರಿ ಇಲಾಖೆಗಳು ಅಥವಾ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಇಲಾಖೆ; ಅಥವಾ
3. ಒಂದು ಸ್ಥಳೀಯ ಪ್ರಾಧಿಕಾರ; ಅಥವಾ
4. ಒಂದು ಶಾಸನಬದ್ಧ ಸಂಸ್ಥೆ; ಅಥವಾ
5. ಒಂದು ಸಾರ್ವಜನಿಕ ವಲಯದ ಉದ್ಯಮ; ಅಥವಾ
6. ಸದರಿ ಅಧಿನಿಯಮದ ಪ್ರಕರಣ 25ರ ಉಪಪ್ರಕರಣ (9)ರ ಉಪಬಂಧಗಳ ಅಡಿಯಲ್ಲಿ ನೋಂದಣಿಗಾಗಿ ಅರ್ಜಿ ಸಲ್ಲಿಸುವಂತಹ ಒಬ್ಬ ವ್ಯಕ್ತಿ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)
ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (02/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 20.03.2021.

ಕರ್ನಾಟಕ ಸರಕು ಮತ್ತು ಸೇವೆಗಳ ನಿಯಮಗಳು, 2017ರ ನಿಯಮ 48ರ ಉಪನಿಯಮ (4)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ಕರ್ನಾಟಕ ರಾಜ್ಯಪತ್ರದ ಭಾಗ– IVA ಸಂಪುಟ 155, ಸಂಚಿಕೆ 15 ಪುಟ 1225, 2020ರ ಏಪ್ರಿಲ್ 9ನೇ ದಿನದಂದು ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (07/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 (ಇ) ದಿನಾಂಕ 27ನೇ ಮಾರ್ಚ್ 2020ಕ್ಕೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೆ ಕಂಡಿಕೆಯಲ್ಲಿ 2021ರ ಏಪ್ರಿಲ್ 1ನೇ ದಿನಾಂಕದಿಂದ ಅನ್ವಯವಾಗುವಂತೆ, "ಒಂದು ನೂರು ಕೋಟಿ ರೂಪಾಯಿಗಳು" ಎಂಬ ಪದಗಳ ಬದಲಾಗಿ "ಐವತ್ತು ಕೋಟಿ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಸಿ.ಟಿ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (03/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 12.04.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕದ ವಿಶೇಷ ರಾಜ್ಯಪತ್ರಿಕೆ, ಭಾಗ–IVA ಸಂಖ್ಯೆ 664 ದಿನಾಂಕ 8ನೇ ಡಿಸೆಂಬರ್ 2020ರಲ್ಲಿ ಪ್ರಕಟಿತವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (47/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020, ದಿನಾಂಕ 8ನೇ ಡಿಸೆಂಬರ್ 2020ಕ್ಕೆ ಈ ಕೆಳಗಿನಂತೆ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ:–

(iii) ಮೊದಲನೆ ಕಂಡಿಕೆಯಲ್ಲಿ, "ಮಾರ್ಚ್ 31ನೇ ದಿನ" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "ಜೂನ್ 30ನೇ ದಿನ" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಮೊದಲನೆ ಕಂಡಿಕೆಯಲ್ಲಿ, "ಏಪ್ರಿಲ್ 01ನೇ ದಿನ" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "ಜುಲೈ 1ನೇ ದಿನ" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (04/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 06.05.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಸದರಿ ಅಧಿನಿಯಮದ ಪ್ರಕರಣ 148ರೊಂದಿಗೆ ಓದಲಾದ ಪ್ರಕರಣ 50ರ ಉಪಪ್ರಕರಣ (1)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA, ಸಂಖ್ಯೆ 610 ದಿನಾಂಕ 29ನೇ ಜೂನ್ 2017ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಪ್ರಧಾನ ಅಧಿಸೂಚನೆ ಸಂಖ್ಯೆ (13/2017) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 29ನೇ ಜೂನ್ 2017ಗೆ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೆಯ ಕಂಡಿಕೆಯಲ್ಲಿ, ಮೊದಲ ಪರಂತುಕದಲ್ಲಿ, ಕೋಷ್ಟಕದಲ್ಲಿ ಕ್ರಮ ಸಂಖ್ಯೆ 2ರ ನಂತರ, ಈ ಕೆಳಗಿನಂತೆ ಸೇರಿಸತಕ್ಕದ್ದು, ಅಂದರೆ :–

(1)	(2)	(3)	(4)
"3.	ಹಿಂದಿನ ಹಣಕಾಸು ಸಾಲಿನಲ್ಲಿ 5 ಕೋಟಿ ರೂಪಾಯಿಗಳಿಗೆ ಮೀರಿದ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್, 2021, ಏಪ್ರಿಲ್, 2021
4	ಹಿಂದಿನ ಹಣಕಾಸು ಸಾಲಿನಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 15 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್, 2021, ಏಪ್ರಿಲ್, 2021
5	ಹಿಂದಿನ ಹಣಕಾಸು ಸಾಲಿನಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರ ಪರಂತುಕದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 15 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್, 2021, ಏಪ್ರಿಲ್, 2021
6	ಪ್ರಕರಣ 39ರ ಉಪಪ್ರಕರಣ (2) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 15 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್, 2021 ಕ್ಕೆ ಅಂತ್ಯಗೊಳ್ಳುವ ತ್ರೈಮಾಸಿಕಕ್ಕೆ.".

2. ಈ ಅಧಿಸೂಚನೆಯು 2021ರ ಏಪ್ರಿಲ್ 18ನೇ ದಿನಾಂಕದಂದು ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (05/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 06.05.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ IVA, ಸಂಖ್ಯೆ 1553 ದಿನಾಂಕ 31ನೇ ಡಿಸೆಂಬರ್ 2018ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (29/2018) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 31ನೇ ಡಿಸೆಂಬರ್ 2018ಗೆ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯ, ಏಳನೆಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ಈ ಕೆಳಕಂಡ ಕೋಷ್ಟಕದ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿದ ತೆರಿಗೆಯ ಅವಧಿಗೆ, ಕೋಷ್ಟಕದ ಅಂಕಣ (2)ರ ಅನುಗುಣವಾದ ನಮೂದಿನಲ್ಲಿ ನಮೂದಾಗಿರುವ ವರ್ಗದ ನೋಂದಾಯಿತ ವ್ಯಕ್ತಿಗಳು **ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲಗೊಂಡಿದ್ದಲ್ಲಿ, ನೋಂದಾಯಿತ ವ್ಯಕ್ತಿಯು ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಿರುವ ವಿಳಂಬ ಶುಲ್ಕದ ಮೊತ್ತವನ್ನು ಕೋಷ್ಟಕದ ಅಂಕಣ (4)ರ ಅನುಗುಣವಾದ ನಮೂದಿನಲ್ಲಿ ತಿಳಿಸಿರುವಂತಹ ಅವಧಿಗೆ ಮನ್ನಾ ಮಾಡಲಾಗುತ್ತದೆ." ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ	ನೋಂದಾಯಿತ ವ್ಯಕ್ತಿಗಳ ವರ್ಗ	ತೆರಿಗೆ ಅವಧಿ	ಯಾವ ಅವಧಿಗೆ ವಿಳಂಬ ಶುಲ್ಕವನ್ನು ಮನ್ನಾ ಮಾಡಿದೆ.
(1)	(2)	(3)	(4)
1	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳಿಗೆ ಮೀರಿದ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾರರು	ಮಾರ್ಚ್, 2021 ಮತ್ತು ಏಪ್ರಿಲ್, 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ 15 ದಿನಗಳು
2	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ಮಾರ್ಚ್, 2021 ಮತ್ತು ಏಪ್ರಿಲ್, 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ 30 ದಿನಗಳು
3	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರ ಪರಂತುಕದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ	ಜನವರಿ – ಮಾರ್ಚ್, 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ 30 ದಿನಗಳು.".

	ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು		

2. ಈ ಅಧಿಸೂಚನೆಯು 2021ರ ಏಪ್ರಿಲ್ 20ನೇ ದಿನಾಂಕದಂದು ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (06/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 06.05.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ 322 ದಿನಾಂಕ: 23ನೇ ಏಪ್ರಿಲ್ 2019 ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (08/2019) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 23ನೇ ಏಪ್ರಿಲ್, 2019ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೂರನೆಯ ಕಂಡಿಕೆಯಲ್ಲಿ, ಮೊದಲನೆ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಪರಂತು ಮುಂದುವರೆದು, ಸದರಿ ವ್ಯಕ್ತಿಗಳು 2020ರ ಮಾರ್ಚ್ 31ನೇ ದಿನಾಂಕಕ್ಕೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ನಿಯಮಗಳು, 2017ರ **ನಮೂನೆ ಜಿಎಸ್‌ಟಿಆರ್–4**ರಲ್ಲಿ ರಿಟರ್ನ್‌ನನ್ನು 2021ರ ಮೇ 31ನೇ ದಿನಾಂಕದವರೆಗೆ ಸಲ್ಲಿಸತಕ್ಕದ್ದು.".

2. ಈ ಅಧಿಸೂಚನೆಯು 2021ರ ಏಪ್ರಿಲ್ 30ನೇ ದಿನಾಂಕದಿಂದ ಜಾರಿಗೆ ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (07/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 06.05.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕದ ಅಧಿನಿಯಮ 27), (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 168ಎರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (13/2017) ಪ್ರಕರಣ 20 ರೊಂದಿಗೆ ಓದಲಾದ, ಭಾರತದಾದ್ಯಂತ ಅನೇಕ ಭಾಗಗಳಲ್ಲಿ ಸಾಂಕ್ರಾಮಿಕ ರೋಗ ಕೋವಿಡ್–19 ಹರಡಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಈ ಮೂಲಕ ಕೆಳಕಂಡಂತೆ ಅಧಿಸೂಚಿಸುತ್ತದೆ:–

(i) ಯಾವುದೇ ಕ್ರಮಗಳನ್ನು ಪೂರ್ಣಗೊಳಿಸಲು ಅಥವಾ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ಯಾವುದೇ ಪ್ರಾಧಿಕಾರ/ಕಚೇರಿ ಅಥವಾ ಯಾವುದೇ ವ್ಯಕ್ತಿಯಿಂದ ಯಾವುದೇ ಕಾಲಮಿತಿಯನ್ನು ನಿರ್ದಿಷ್ಟಪಡಿಸಿದ್ದಲ್ಲಿ ಅಥವಾ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿದ್ದಲ್ಲಿ ಅಥವಾ ಅಧಿಸೂಚನೆ ಹೊರಡಿಸಿದ್ದಲ್ಲಿ, ಅದು 2021ರ ಏಪ್ರಿಲ್, 15ನೇ ದಿನದಿಂದ 2021ರ ಮೇ 30ನೇ ದಿನಾಂಕದ ವರೆಗಿನ ಅವಧಿಯಲ್ಲಿ ಬರುತ್ತದೆಯಾದಲ್ಲಿ ಹಾಗೂ ಅಂತಹ ಕಾಲಮಿತಿಯೊಳಗೆ ಅಂತಹ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಿರಲಿಲ್ಲವಾದಲ್ಲಿ ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲವಾದಲ್ಲಿ, ಅಂತಹ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಲು ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ನಿಗದಿತವಾಗಿರುವ ಕಾಲಮಿತಿಯನ್ನು ಈ ಕೆಳಗಿನ ಉದ್ದೇಶಗಳನ್ನು ಒಳಗೊಂಡಂತೆ 2021ರ ಮೇ 31ನೇ ದಿನಾಂಕದವರೆಗೆ ವಿಸ್ತರಿಸಲಾಗಿದೆ,–

(ಎ) ಸದರಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವುದೇ ಪ್ರಾಧಿಕಾರ, ಕಚೇರಿ, ಆಯೋಗ ಅಥವಾ ನ್ಯಾಯಮಂಡಳಿ, ಈ ರೀತಿಯಾಗಿ ಯಾವುದೇ ಹೆಸರಿನಿಂದ ಕರೆಯಲ್ಪಡುವ ಸಂಸ್ಥೆಗಳಿಂದ ಅಥವಾ ಯಾವುದೇ ವ್ಯಕ್ತಿಯಿಂದ ಯಾವುದೇ ನಡಾವಳಿಗಳನ್ನು ಪೂರ್ಣಗೊಳಿಸಲು ಅಥವಾ ಯಾವುದೇ ಆದೇಶವನ್ನು ಜಾರಿಗೊಳಿಸಲು ಅಥವಾ ಯಾವುದೇ ನೋಟೀಸು, ತಿಳಿವಳಿಕೆ ಪತ್ರ, ಅಧಿಸೂಚನೆಗಳನ್ನು ನೀಡಲು ಅಥವಾ ಮಂಜೂರಾತಿ ಅಥವಾ ಅನುಮೋದನೆ ನೀಡಲು ಅಥವಾ ಅಂತಹ ಇತರೆ ಕಾರ್ಯಗಳನ್ನು ಪೂರ್ಣಗೊಳಿಸುವ ಸಲುವಾಗಿ ; ಅಥವಾ

(ಬಿ) ಮೇಲೆ ತಿಳಿಸಿದ ಸದರಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಯಾವುದೇ ಮನವಿಯನ್ನು ಸಲ್ಲಿಸಲು, ಉತ್ತರಿಸಲು ಅಥವಾ ಅರ್ಜಿಯನ್ನು ಸಲ್ಲಿಸಲು ಅಥವಾ ಯಾವುದೇ ವರದಿ, ದಾಖಲೆಗಳು, ಸಲ್ಲಿಕೆಗಳು, ತ:ಖ್ತೆಗಳು ಅಥವಾ ಅಂತಹ ಇತರೆ ಯಾವುದೇ ದಾಖಲೆಗಳು ಮುಂತಾದ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕರ್ತವ್ಯಗಳಿಗಾಗಿ;

ಆದರೆ, ಅಂತಹ ಕಾಲಮಿತಿಯ ವಿಸ್ತರಣೆಯು ಈ ಕೆಳಗೆ ತಿಳಿಸಿರುವಂತೆ ಸದರಿ ಕಾಯಿದೆಯ ಅಧಿನಿಯಮದ ಅನುಪಾಲನಾ ಕ್ರಮಗಳಿಗಾಗಿ ಅನ್ವಯಗೊಳ್ಳುವುದಿಲ್ಲ:–

(ಎ) ಅಧ್ಯಾಯ IV ;

(ಬಿ) ಪ್ರಕರಣ 10ರ ಉಪಪ್ರಕರಣ(3), ಪ್ರಕರಣಗಳು 25, 27, 31, 37, 47, 50, 69, 90, 122, 129

(ಸಿ) ಪ್ರಕರಣ 39, ಉಪಪ್ರಕರಣ (3), (4) ಮತ್ತು (5)ನ್ನು ಹೊರತುಪಡಿಸಿ ;
(ಡಿ) ಪ್ರಕರಣ 68, ಇ–ವೇ ಬಿಲ್ಲಿಗೆ ಸಂಬಂಧಪಟ್ಟಂತೆ ; ಹಾಗೂ

(ಇ) ಮೇಲಿನ (ಎ) ಯಿಂದ (ಡಿ) ರವರೆಗಿನ ಖಂಡಗಳ ಅಧಿನಿಯಮದಡಿಯಲ್ಲಿ ನಿರ್ದಿಷ್ಟಪಡಿಸಿದ ನಿಯಮಗಳು:

ಪರಂತು, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು 2017ರ ಉಪನಿಯಮ 9 ರಡಿಯಲ್ಲಿ, ಎಲ್ಲಿ ಯಾವುದೇ ಪ್ರಾಧಿಕಾರ/ಕಚೇರಿ ಅಥವಾ ಯಾವುದೇ ವ್ಯಕ್ತಿಯಿಂದ ಯಾವುದೇ ಕ್ರಮಗಳನ್ನು ಪೂರ್ಣಗೊಳಿಸಲು ಅಥವಾ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ಯಾವುದೇ ಕಾಲಮಿತಿಯನ್ನು ನಿರ್ದಿಷ್ಟಪಡಿಸಿದ್ದಲ್ಲಿ ಅಥವಾ ಅಧಿಸೂಚಿಸಿದ್ದಲ್ಲಿ, 2021ರ ಮೇ, 01ನೇ ದಿನದಿಂದ 2021ರ ಮೇ 31ನೇ ದಿನಾಂಕದ ವರೆಗಿನ ಅವಧಿಯಲ್ಲಿ ಬರುತ್ತದೆಯಾದಲ್ಲಿ ಹಾಗೂ ಅಂತಹ ಕಾಲಮಿತಿಯೊಳಗೆ ಅಂತಹ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಿರಲಿಲ್ಲವಾದಲ್ಲಿ ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲವಾದಲ್ಲಿ, ಅಂತಹ ಕ್ರಮಗಳನ್ನು ಪೂರ್ಣಗೊಳಿಸಲು ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ನಿಗದಿತವಾಗಿರುವ ಕಾಲಮಿತಿಯನ್ನು 2021ರ ಜೂನ್ 15ನೇ ದಿನಾಂಕದವರೆಗೆ ವಿಸ್ತರಿಸಲಾಗಿದೆ;

(ii) ಯಾವುದೇ ಪ್ರಕರಣಗಳಲ್ಲಿ ಮರುಪಾವತಿಯ ಪೂರ್ಣ ಅಥವಾ ಭಾಗಶ: ನಿರಾಕರಣೆಗಾಗಿ ನೀಡಿರುವ ಸೂಚನಾ ಪತ್ರಕ್ಕೆ ಸಂಬಂಧಿಸಿದಂತೆ, ಸದರಿ ಅಧಿನಿಯಮದ ಉಪಪ್ರಕರಣ (5)ರೊಂದಿಗೆ ಓದಲಾದ ಪ್ರಕರಣ 54ರ ಉಪಪ್ರಕರಣ 7ರ ಉಪಬಂಧಗಳ ಅಡಿಯಲ್ಲಿ 2021ರ ಏಪ್ರಿಲ್ 15ನೇ ದಿನಾಂಕದಿಂದ 2021ರ ಮೇ 30ನೇ ದಿನಾಂಕದ ಅವಧಿಯಲ್ಲಿನ ಪ್ರಕರಣಗಳಿಗೆ ಆದೇಶಗಳನ್ನು ಹೊರಡಿಸಬೇಕಾದ ಸಂದರ್ಭಗಳಲ್ಲಿ, ಸದರಿ ಆದೇಶಗಳನ್ನು ಹೊರಡಿಸಲು ಕಾಲಮಿತಿಯನ್ನು ನೋಂದಾಯಿತ ವ್ಯಕ್ತಿಯಿಂದ ಸ್ವೀಕರಿಸಲಾಗುವ ಉತ್ತರಗಳ ದಿನಾಂಕದಿಂದ 15 ದಿವಸಗಳವರೆಗೆ ಅಥವಾ 2021ರ ಮೇ 31ನೇ ದಿನಾಂಕದವರೆಗೆ ಇವುಗಳಲ್ಲಿ ಯಾವುದು ತದನಂತರದ್ದಾಗಿರುತ್ತದೋ, ಅಲ್ಲಿಯವರೆವಿಗೂ ವಿಸ್ತರಿಸಲಾಗಿದೆ.

2. ಈ ಅಧಿಸೂಚನೆಯು 2021ರ ಏಪ್ರಿಲ್ 15ನೇ ದಿನಾಂಕದಂದು ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (08/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) ಸದರಿ ಅಧಿನಿಯಮದ ಪ್ರಕರಣ 148ರೊಂದಿಗೆ ಓದಲಾದ ಪ್ರಕರಣ 50ರ ಉಪಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA, ಸಂಖ್ಯೆ 610 ದಿನಾಂಕ 29ರ ಜೂನ್ 2017ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (13/2019) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 29ರ ಜೂನ್ 2017ಗೆ ಈ ಕೆಳಕಂಡ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೆಯ ಕಂಡಿಕೆಯಲ್ಲಿ ಮೊದಲ ಪರಂತುಕದಲ್ಲಿ,:–

(i) **"ನಮೂನೆ ಜಿಎಸ್‌ಟಿಆರ್–3ಬಿ** ಅನ್ನು ತೆರಿಗೆ ಪಾವತಿಯೊಂದಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದ" ಎಂಬ ಪದಗಳು, ಅಕ್ಷರಗಳು, ಮತ್ತು ಸಂಖ್ಯೆಗಳ ಬದಲಾಗಿ "ತೆರಿಗೆ ಪಾವತಿಸಲು ಬಾಧ್ಯರಾಗಿದ್ದು, ಹಾಗೆ ಮಾಡಲು ವಿಫಲರಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಕೋಷ್ಟಕದಲ್ಲಿ, ಅಂಕಣ 4 ರಲ್ಲಿ, ಶೀರ್ಷಿಕೆಯಲ್ಲಿ, "ತೆರಿಗೆ ಅವಧಿ" ಎಂಬ ಪದಗಳ ಬದಲಾಗಿ "ತಿಂಗಳು/ತ್ರೈಮಾಸಿಕ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) ಕೋಷ್ಟಕದಲ್ಲಿ, ಕ್ರಮ ಸಂಖ್ಯೆ 4,5,6 ಮತ್ತು 7ಕ್ಕೆ, ಈ ಕೆಳಗಿನಂತೆ ಪ್ರತಿಯೋಜಿಸತಕ್ಕದ್ದು, ಅಂದರೆ:–

1	2	3	4
"4	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳಿಗೆ ಮೀರಿದ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್2021, ಏಪ್ರಿಲ್ 2021 ಮತ್ತು ಮೇ 2021
5	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 45 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್, 2021
		ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 30 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಏಪ್ರಿಲ್, 2021
		ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 15 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮೇ, 2021

6	ಹಿಂದಿನ ಹಣಕಾಸು ಸಾಲಿನಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರ ಪರಂತುಕದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 45 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್, 2021
		ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 30 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಏಪ್ರಿಲ್, 2021
		ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 15 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮೇ, 2021
7	ಪ್ರಕರಣ 39ರ ಉಪಪ್ರಕರಣ (2) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ನಿಗದಿತ ದಿನಾಂಕದಿಂದ ಮೊದಲ 15 ದಿನಗಳಿಗೆ ಶೂನ್ಯ, ನಂತರದ 45 ದಿನಗಳಿಗೆ ಶೇಕಡ 9ರಂತೆ ಮತ್ತು ತದನಂತರ ಶೇಕಡ 18ರಂತೆ	ಮಾರ್ಚ್ 2021ಕ್ಕೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ".

2. ಈ ಅಧಿಸೂಚನೆಯು 2021ರ ಮೇ 18ನೇ ದಿನಾಂಕದಂದು ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (09/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA, ಸಂಖ್ಯೆ 1553 ದಿನಾಂಕ 31ನೇ ಡಿಸೆಂಬರ್ 2018ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (29/2018) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 31ನೇ ಡಿಸೆಂಬರ್ 2018ಗೆ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ, ಅಂದರೆ:–

ಸದರಿ ಅಧಿಸೂಚನೆಯಲ್ಲಿ,–

(i) ಎಂಟನೆಯ ಪರಂತುಕದಲ್ಲಿ, 2021ರ ಮೇ 20ನೇ ದಿನಾಂಕದಿಂದ ಅನ್ವಯವಾಗುವಂತೆ, ಕೋಷ್ಟಕಕ್ಕೆ, ಈ ಕೆಳಗಿನ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು. ಅಂದರೆ :–

"ಕೋಷ್ಟಕ

ಕ್ರಮ ಸಂಖ್ಯೆ (1)	ನೋಂದಾಯಿತ ವ್ಯಕ್ತಿಗಳ ವರ್ಗ (2)	ತೆರಿಗೆ ಅವಧಿ (3)	ಯಾವ ಅವಧಿಗೆ ವಿಳಂಬ ಶುಲ್ಕವನ್ನು ಮನ್ನಾ ಮಾಡಿದೆ. (4)
1	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳಿಗೆ ಮೀರಿದ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾರರು	ಮಾರ್ಚ್, 2021, ಏಪ್ರಿಲ್, 2021 ಮತ್ತು ಮೇ, 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ ಹದಿನೈದು ದಿನಗಳು
2	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ಮಾರ್ಚ್, 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ ಅರವತ್ತು ದಿನಗಳು
		ಏಪ್ರಿಲ್, 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ ನಲವತ್ತೈದು ದಿನಗಳು
		ಮೇ, 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ ಮೂವತ್ತೈದು ದಿನಗಳು
3	ಹಿಂದಿನ ಹಣಕಾಸು ವರ್ಷದಲ್ಲಿ 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ, ಪ್ರಕರಣ 39ರ ಉಪಪ್ರಕರಣ (1) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಿಟರ್ನ್‌ನನ್ನು ಸಲ್ಲಿಸಲು ಬಾಧ್ಯರಾದ ತೆರಿಗೆದಾರರು	ಜನವರಿ – ಮಾರ್ಚ್ 2021	ರಿಟರ್ನ್‌ನನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ ಅರವತ್ತು ದಿನಗಳು.";

(ii) ಎಂಟನೆಯ ಪರಂತುಕದ ನಂತರ, ಕೆಳಗಿನ ಪರಂತುಕಗಳನ್ನು ಸೇರಿಸತಕ್ಕದ್ದು. ಅಂದರೆ:–

"ಮತ್ತು ಪರಂತು, ಜುಲೈ 2017 ರಿಂದ ಏಪ್ರಿಲ್ 2021ರವರೆಗಿನ ಅವಧಿಗಳಿಗೆ/ ತ್ರೈಮಾಸಿಕಕ್ಕೆ, **ನಮೂನೆ ಜಿಎಸ್ ಟಿಆರ್–3ಬಿ** ಯಲ್ಲಿ ರಿಟರ್ನ್‌ನನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದ, ಆದರೆ ಸದರಿ ರಿಟರ್ನ್ ಅನ್ನು 2021ರ ಜೂನ್ 1ನೇ ದಿನಾಂಕದಿಂದ 2021ರ ಆಗಸ್ಟ್ 31ನೇ ದಿನಾಂಕದ ನಡುವಿನ ಅವಧಿಯೊಳಗೆ ಸಲ್ಲಿಸಿದ ನೋಂದಾಯಿತ ವ್ಯಕ್ತಿಗಳಿಗೆ, ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತ ಐನೂರು ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವು ಮನ್ನಾ ಆಗತಕ್ಕದ್ದು:

ಮತ್ತು ಪರಂತು, ಜುಲೈ 2017 ರಿಂದ ಏಪ್ರಿಲ್ 2021ರವರೆಗಿನ ಅವಧಿಗಳಿಗೆ/ ತ್ರೈಮಾಸಿಕಕ್ಕೆ, **ನಮೂನೆ ಜಿಎಸ್ ಟಿಆರ್–3ಬಿ** ಯಲ್ಲಿ ರಿಟರ್ನ್‌ನನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದ, ಆದರೆ ಸದರಿ ರಿಟರ್ನ್ ಅನ್ನು 2021ರ ಜೂನ್ 1ನೇ ದಿನಾಂಕದಿಂದ 2021ರ ಆಗಸ್ಟ್ 31ನೇ ದಿನಾಂಕದ ನಡುವಿನ ಅವಧಿಯೊಳಗೆ ಸಲ್ಲಿಸಿದ್ದು, ಸದರಿ ರಿಟರ್ನ್ಸ್‌ನಲ್ಲಿ ಪಾವತಿಸಬೇಕಾದ ಒಟ್ಟು ರಾಜ್ಯ ತೆರಿಗೆ ಮೊತ್ತ ಶೂನ್ಯವಾಗಿದ್ದರೆ, ನೋಂದಾಯಿತ ವ್ಯಕ್ತಿಗಳಿಗೆ, ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತ ಎರಡು ನೂರ ಐನೂರು ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವು ಮನ್ನಾ ಆಗತಕ್ಕದ್ದು:

ಮತ್ತು ಪರಂತು, ಜೂನ್, 2021ರ ನಂತರದ ತೆರಿಗೆ ಅವಧಿಗೆ ಅಥವಾ ಜೂನ್, 2021ಕ್ಕೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ, **ನಮೂನೆ ಜಿಎಸ್‌ಟಿಆರ್–3ಬಿ** ಯಲ್ಲಿ ರಿಟರ್ನ್‌ನನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದ, ಕೋಷ್ಟಕದ ಅಂಕಣ (2)ರ ಸಂಬಂಧಿಸಿದ ನಮೂದಿನಲ್ಲಿ ನಮೂದಾಗಿರುವ ವರ್ಗದ ನೋಂದಾಯಿತ ವ್ಯಕ್ತಿಗಳಿಂದ ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತ ಕೋಷ್ಟಕ (3) ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವು ಅಥವಾ ಸಂದರ್ಭಾನುಸಾರವಾಗಿ ಮನ್ನಾ ಆಗತಕ್ಕದ್ದು. ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ (1)	ನೋಂದಾಯಿತ ವ್ಯಕ್ತಿಗಳ ವರ್ಗ (2)	ಮೊತ್ತ (3)
1	ನೋಂದಾಯಿತ ವ್ಯಕ್ತಿಗಳು ಸಲ್ಲಿಸಿದ ರಿಟರ್ನ್ಸ್‌ನಲ್ಲಿ ಪಾವತಿಸಬೇಕಾದ ಒಟ್ಟು ರಾಜ್ಯ ತೆರಿಗೆ ಮೊತ್ತ ಶೂನ್ಯವಾಗಿದ್ದರೆ,	ಎರಡು ನೂರ ಐವತ್ತು ರೂಪಾಯಿಗಳು
2	ಕ್ರಮ ಸಂಖ್ಯೆ 1 ರಲ್ಲಿ ಒಳಗೊಂಡಿರುವವರನ್ನು ಹೊರತುಪಡಿಸಿ, ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳು	ಒಂದು ಸಾವಿರ ರೂಪಾಯಿಗಳು
3	ಕ್ರಮ ಸಂಖ್ಯೆ 1 ರಲ್ಲಿ ಒಳಗೊಂಡಿರುವವರನ್ನು ಹೊರತುಪಡಿಸಿ, ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗೆ ಮೀರಿದ ಮತ್ತು 5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ತೆರಿಗೆದಾತರು	ಎರಡು ಸಾವಿರದ ಐನೂರು ರೂಪಾಯಿಗಳು".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (10/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ:177 ದಿನಾಂಕ: 23ನೇ ಜನವರಿ 2018 ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (02/2018) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 23ನೇ ಜನವರಿ, 2018ಗೆ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ನಾಲ್ಕನೆಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:–

"ಮತ್ತು ಪರಂತು, ಜೂನ್, 2021ರ ನಂತರದ ತೆರಿಗೆ ಅವಧಿಗೆ ಅಥವಾ ಜೂನ್, 2021ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ನಂತರಕ್ಕೆ, ಸಂದರ್ಭಾನುಸಾರವಾಗಿ, **ನಮೂನೆ ಜಿಎಸ್‌ಟಿಆರ್–1** ಯಲ್ಲಿ ಹೊರಮುಖ ಪೂರೈಕೆಯ ವಿವರಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದ, ಕೋಷ್ಟಕದ ಅಂಕಣ (2)ರ ಸಂಬಂಧಿಸಿದ ನಮೂದಿನಲ್ಲಿ ನಮೂದಾಗಿರುವ ವರ್ಗದ ನೋಂದಾಯಿತ ವ್ಯಕ್ತಿಗಳಿಂದ, ಪ್ರಕರಣ 47ರಡಿಯಲ್ಲಿ ಪಾವತಿಸಬೇಕಾದ ಒಟ್ಟು ವಿಳಂಬ ಶುಲ್ಕದ ಮೊತ್ತ ಕೋಷ್ಟಕ (3) ರಲ್ಲಿ ನಿರ್ದಿಷ್ಟಪಡಿಸಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವು ಮನ್ನಾ ಆಗತಕ್ಕದ್ದು. ಅಂದರೆ:–

ಕೋಷ್ಟಕ

ಕ್ರಮ ಸಂಖ್ಯೆ (1)	ನೋಂದಾಯಿತ ವ್ಯಕ್ತಿಗಳ ವರ್ಗ (2)	ಮೊತ್ತ (3)
1	ತೆರಿಗೆ ಅವಧಿಗೆ ಶೂನ್ಯ ಹೊರಮುಖ ಪೂರೈಕೆಯನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳು	ಎರಡು ನೂರ ಐವತ್ತು ರೂಪಾಯಿಗಳು
2	ಕ್ರಮ ಸಂಖ್ಯೆ 1 ರಲ್ಲಿ ಒಳಗೊಂಡಿರುವವರನ್ನು ಹೊರತುಪಡಿಸಿ, ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳು	ಒಂದು ಸಾವಿರ ರೂಪಾಯಿಗಳು
3	ಕ್ರಮ ಸಂಖ್ಯೆ 1 ರಲ್ಲಿ ಒಳಗೊಂಡಿರುವವರನ್ನು ಹೊರತುಪಡಿಸಿ, ಹಿಂದಿನ ಹಣಕಾಸು ವರ್ಷದಲ್ಲಿ 1.5 ಕೋಟಿ ರೂಪಾಯಿಗಳಿಗೆ	ಎರಡು ಸಾವಿರದ ಐನೂರು

	ಮೀರಿದ ಹಾಗೂ 5 ಕೋಟಿವರೆಗಿನ ಸಮಗ್ರ ವಹಿವಾಟನ್ನು ಹೊಂದಿರುವ ನೋಂದಾಯಿತ ವ್ಯಕ್ತಿಗಳು	ರೂಪಾಯಿಗಳು".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (11/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ:1312 ದಿನಾಂಕ: 29ನೇ ಡಿಸೆಂಬರ್ 2017 ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (24/2017) ಸಂಖ್ಯೆ: ಆಇ 47 ಸಿಎಸ್‌ಎಲ್ 2017 ದಿನಾಂಕ 29ನೇ ಡಿಸೆಂಬರ್ 2017ರಲ್ಲಿ ಈ ಕೆಳಗಿನಂತೆ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ನಾಲ್ಕನೆಯ ಪರಂತುಕದ ನಂತರ, ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು. ಅಂದರೆ:–

"ಮತ್ತು ಪರಂತು 2021–22ರ ನಂತರದ ಹಣಕಾಸು ವರ್ಷಕ್ಕೆ, **ನಮೂನೆ ಜಿಎಸ್‌ಟಿಆರ್–4** ರಲ್ಲಿ ರಿಟರ್ನ್‌ನನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದ ನೋಂದಾಯಿತ ವ್ಯಕ್ತಿಯಿಂದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ಒಟ್ಟು ವಿಳಂಬ ಶುಲ್ಕದ ಮೊತ್ತವು ಮನ್ನಾ ಆಗತಕ್ಕದ್ದು –

(i) ಸದರಿ ರಿಟರ್ನ್ಸ್‌ನಲ್ಲಿ ಪಾವತಿಸಬೇಕಾದ ಒಟ್ಟು ರಾಜ್ಯ ತೆರಿಗೆ ಮೊತ್ತ ಶೂನ್ಯವಾಗಿದ್ದರೆ ಎರಡು ನೂರ ಐವತ್ತು ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವು;

(ii) ಖಂಡ (i) ರಲ್ಲಿ ಒಳಗೊಂಡಿರುವವರನ್ನು ಹೊರತುಪಡಿಸಿದ ನೋಂದಾಯಿತ ವ್ಯಕ್ತಿಗಳಿಂದ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತವು.".

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (12/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಸದರಿ ಅಧಿನಿಯಮದ ಪ್ರಕರಣ 51ರ ಉಪಬಂಧಗಳ ಅಡಿಯಲ್ಲಿ ತೆರಿಗೆಯನ್ನು ಮೂಲದಲ್ಲೇ ಕಟಾವುಗೊಳಿಸಿ ಜೂನ್, 2021ರ ನಂತರದ ಅವಧಿಗೆ **ನಮೂನೆ–ಜಿಎಸ್‌ಟಿಆರ್–7** ಅನ್ನು ನಿಗದಿತ ಅವಧಿಯೊಳಗೆ ಸಲ್ಲಿಸಲು ವಿಫಲರಾದ ಯಾವುದೇ ನೋಂದಾಯಿತ ವ್ಯಕ್ತಿಯಿಂದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕದ ಮೊತ್ತವು ಅಂಥ ವಿಫಲತೆ ಮುಂದುವರೆದಂತಹ ಪ್ರತಿ ದಿನಕ್ಕಾಗಿ ಇಪ್ಪತ್ತೈದು ರೂಪಾಯಿಗಳ ಮೊತ್ತವನ್ನು ಮೀರಿದ ಹೆಚ್ಚಿನ ಮೊತ್ತವು ಮನ್ನಾ ಆಗತಕ್ಕದ್ದು:

ಪರಂತು ಜೂನ್, 2021ರ ನಂತರದ ಅವಧಿಗೆ **ನಮೂನೆ–ಜಿಎಸ್‌ಟಿಆರ್–7** ಅನ್ನು ನಿಗದಿತ ಅವಧಿಯೊಳಗೆ ಸಲ್ಲಿಸಲು ವಿಫಲರಾದ ಅಂಥ ನೋಂದಾಯಿತ ವ್ಯಕ್ತಿಯಿಂದ, ಸದರಿ ಅಧಿನಿಯಮದ ಪ್ರಕರಣ 47ರ ಅಡಿಯಲ್ಲಿ ಪಾವತಿಸಬೇಕಾದ ವಿಳಂಬ ಶುಲ್ಕ ಒಂದು ಸಾವಿರ ರೂಪಾಯಿಗಳ ಮೊತ್ತವನ್ನು ಮೀರಿದ ಮೊತ್ತವು ಮನ್ನಾ ಆಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (13/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳು, 2017ರ ನಿಯಮ 48ರ ಉಪನಿಯಮ 4ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA, ಸಂಪುಟ 155, ಸಂಚಿಕೆ 15, ಸಂಖ್ಯೆ 1225, ದಿನಾಂಕ: 9ನೇ ಏಪ್ರಿಲ್ 2020 ರಂದು ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (07/2020) ಸಂಖ್ಯೆ. ಆಇ 03 ಸಿಎಸ್‌ಎಲ್ 2020 (ಇ) ದಿನಾಂಕ: 27ನೇ ಮಾರ್ಚ್ 2020ರಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೇ ಕಂಡಿಕೆಯಲ್ಲಿ, "ಅಧಿಸೂಚಿಸಿರುವ ನೋಂದಾಯಿತ ವ್ಯಕ್ತಿಯನ್ನು ಹೊರತುಪಡಿಸಿ "ಎಂಬ ಪದಗಳ ನಂತರ "ಒಂದು ಸರ್ಕಾರಿ ಇಲಾಖೆ, ಒಂದು ಸ್ಥಳೀಯ ಪ್ರಾಧಿಕಾರ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (14/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ 2017ರ (13/2017) ಪ್ರಕರಣ 20 ರೊಂದಿಗೆ ಓದಲಾದ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27), (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮಗಳು ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 168ಎ ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯಪತ್ರಿಕೆ ಭಾಗ IVA, ಸಂಖ್ಯೆ 519 ದಿನಾಂಕ 6ನೇ ಮೇ 2021ರಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ (07/2021) ಸಂಖ್ಯೆ ಆಇ 16 ಸಿಎಸ್‌ಎಲ್ 2021 ದಿನಾಂಕ 6ನೇ ಮೇ 2021ರಲ್ಲಿ ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೊದಲನೆ ಕಂಡಿಕೆಯಲ್ಲಿ,–

(i) ಖಂಡ (i) ರಲ್ಲಿ, –

ಎ. "2021ರ ಮೇ 30ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "2021ರ ಜೂನ್ 29ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.
ಬಿ. "2021ರ ಮೇ 31ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "2021ರ ಜೂನ್ 30ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಖಂಡ (i) ರ ಪರಂತುಕದಲ್ಲಿ,–

ಎ. "2021ರ ಮೇ 31ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "2021ರ ಜೂನ್ 30ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.
ಬಿ. "2021ರ ಜೂನ್ 15ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "2021ರ ಜುಲೈ 15ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) ಖಂಡ (ii) ರಲ್ಲಿ,–

ಎ. "2021ರ ಮೇ 30ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "2021ರ ಜೂನ್ 29ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.
ಬಿ. "2021ರ ಮೇ 31ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "2021ರ ಜೂನ್ 30ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

2. ಈ ಅಧಿಸೂಚನೆಯ 2021ರ ಮೇ 30ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (15/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 04.06.2021.

ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017 ಕರ್ನಾಟಕದ ಅಧಿನಿಯಮ 27) ಪ್ರಕರಣ 148ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯಪತ್ರಿಕೆ, ಭಾಗ– IVA, ಸಂಖ್ಯೆ.322, 2019ರ ಏಪ್ರಿಲ್ 23ನೇ ದಿನದಂದು ಪ್ರಕಟಿಸಿದ ಕರ್ನಾಟಕ ಸರ್ಕಾರದ ಅಧಿಸೂಚನೆ (08/2019) ಸಂಖ್ಯೆ ಆಇ 47 ಸಿಎಸ್‌ಎಲ್ 2017 ದಿನಾಂಕ 23ನೇ ಏಪ್ರಿಲ್ 2019ರಲ್ಲಿ, ಈ ಕೆಳಕಂಡ ಮುಂದುವರೆದ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ. ಅಂದರೆ:–

ಸದರಿ ಅಧಿಸೂಚನೆಯಲ್ಲಿ, ಮೂರನೆಯ ಕಂಡಿಕೆಯಲ್ಲಿ, ಎರಡನೆಯ ಪರಂತುಕದಲ್ಲಿ, "2021ರ ಮೇ 31ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳ ಬದಲಾಗಿ "2021ರ ಜುಲೈ 31ನೇ ದಿನವನ್ನು" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

2. ಈ ಅಧಿಸೂಚನೆಯು 2021ರ ಮೇ 31ನೇ ದಿನಾಂಕದಂದು ಬಂದಿರುವುದೆಂದು ಪರಿಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (16/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 09.07.2021.

ಕರ್ನಾಟಕ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ ಸದರಿ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ಮತ್ತು ಕರ್ನಾಟಕ ವಿಶೇಷ ರಾಜ್ಯಪತ್ರಿಕೆ, ಭಾಗ– IVA, ಸಂಖ್ಯೆ. 664, 2020ರ ಡಿಸೆಂಬರ್ 8ನೇ ದಿನದಂದು ಪ್ರಕಟಿಸಿದ ಕರ್ನಾಟಕ ಸರ್ಕಾರದ ಅಧಿಸೂಚನೆ (47/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 ದಿನಾಂಕ 08ನೇ ಡಿಸೆಂಬರ್ 2020ರನ್ನು ರದ್ದುಪಡಿಸಿ, ಅಂತಹ ರದ್ದುಪಡಿಸುವಿಕೆಗೆ ಮುನ್ನಾ ಮಾಡಿರುವ ಅಥವಾ ಮಾಡದೇ ಇರುವ ಕಾರ್ಯಗಳಿಗೆ ಸಂಬಂಧಿಸುವುದನ್ನು ಉಳಿದು, ಕರ್ನಾಟಕ ರಾಜ್ಯಪತ್ರ, ಸಂಪುಟ 155, ಸಂಚಿಕೆ 15 2020ರ ಏಪ್ರಿಲ್ 9ನೇ ದಿನದಂದು ಪ್ರಕಟವಾದ ಕರ್ನಾಟಕ ಸರ್ಕಾರದ ಅಧಿಸೂಚನೆ (08/2020) ಸಂಖ್ಯೆ ಆಇ 03 ಸಿಎಸ್‌ಎಲ್ 2020 (ಇ) ದಿನಾಂಕ 27ನೇ ಮಾರ್ಚ್ 2020ರ ಉಪಬಂಧದ ಅನುಸರಣೆಯನ್ನು ದಿನಾಂಕ 2020ರ ಡಿಸೆಂಬರ್ 1ನೇ ದಿನಾಂಕದಿಂದ 2021ರ ಸೆಪ್ಟೆಂಬರ್ 30ನೇ ದಿನಾಂಕದ ನಡುವಿನ ಅವಧಿಯಲ್ಲಿ ಮಾಡಲು ವಿಫಲರಾದ ಯಾವುದೇ ನೋಂದಾಯಿತ ವ್ಯಕ್ತಿಯಿಂದ ಸದರಿ ಅಧಿನಿಯಮದ ಪ್ರಕರಣ 125ರಡಿ ಪಾವತಿಸಬೇಕಾಗುವ ದಂಡದ ಮೊತ್ತವನ್ನು ಈ ಮೂಲಕ ಮನ್ನಾ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

(ಧರ್ಮಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರಭಾರ)
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (17/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 01.09.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕ ಅಧಿನಿಯಮ 27) ಪ್ರಕರಣ 128ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ–IVA ಸಂಖ್ಯೆ:1553 ದಿನಾಂಕ 31ನೇ ಡಿಸೆಂಬರ್ 2018ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (29/2018) ಸಂಖ್ಯೆ:ಆಇ 47 ಸಿಎಸ್‌ಎಲ್ 2017, ದಿನಾಂಕ 31ನೇ ಡಿಸೆಂಬರ್ 2018ಗೆ ಈ ಕೆಳಗಿನಂತೆ ಮುಂದುವರಿದ ತಿದ್ದುಪಡಿಗಳನ್ನು ಮಾಡಿದೆ ಅಂದರೆ :–

ಸದರಿ ಅಧಿಸೂಚನೆಯಲ್ಲಿ, ಒಂಬತ್ತು ಮತ್ತು ಹತ್ತನೆಯ ಪರಂತುಕದಲ್ಲಿ, "2021ರ ಆಗಸ್ಟ್ 31ನೇ ದಿನ" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳು ಎಲ್ಲಿ ಸಂಭವಿಸಿದರೂ "2021ರ ನವೆಂಬರ್ 31ನೇ ದಿನ" ಎಂಬ ಸಂಖ್ಯೆಗಳು, ಅಕ್ಷರಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ,

(ಕವಿತಾ ಎಲ್.)
ಸರ್ಕಾರದ ಅಧೀನ ಕಾರ್ಯಾದರ್ಶಿ,
ಆರ್ಥಿಕ ಇಲಾಖೆ (ವಾ.ತೆ.–1)

ಕರ್ನಾಟಕ ಸರ್ಕಾರ
ಆರ್ಥಿಕ ಸಚಿವಾಲಯ

ಅಧಿಸೂಚನೆ (18/2021)
ಸಂಖ್ಯೆ.ಆಇ 16 ಸಿಎಸ್‌ಎಲ್ 2021, ಬೆಂಗಳೂರು, ದಿನಾಂಕ: 01.09.2021.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ (2017ರ ಕರ್ನಾಟಕದ ಅಧಿನಿಯಮ 27) (ಇನ್ನು ಮುಂದೆ ಈ ಅಧಿಸೂಚನೆಯಲ್ಲಿ "ಸದರಿ ಅಧಿನಿಯಮ" ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 168ಎ ರೊಂದಿಗೆ ಓದಲಾದ ಏಕೀಕೃತ ತೆರಿಗೆ ಕಾಯ್ದೆ, 2017ರ ಪ್ರಕರಣ 20ರ (2017ರ ಅಧಿನಿಯಮ 13) ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA , ಸಂಖ್ಯೆ:140 ದಿನಾಂಕ 20ನೇ ಏಪ್ರಿಲ್ 2020ರ ಏಪ್ರಿಲ್ 20ನೇ ದಿನಾಂಕದಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (17/2020) ಸಂಖ್ಯೆ:ಆಇ 03 ಸಿಎಸ್‌ಎಲ್ 2020 ದಿನಾಂಕ 20ನೇ ಏಪ್ರಿಲ್ 2020 ಅನ್ನು ಮತ್ತು ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ, ಭಾಗ– IVA ಸಂಖ್ಯೆ 519 ದಿನಾಂಕ 6ನೇ ಮೇ 2021ರಲ್ಲಿ ಪ್ರಕಟಿಸಲಾದ ಕರ್ನಾಟಕ ಸರ್ಕಾರದ ಅಧಿಸೂಚನೆ (07/2021) ಸಂಖ್ಯೆ:ಅಇ 16 ಸಿಎಸ್‌ಎಲ್ 2021 ದಿನಾಂಕ 6ನೇ ಮೇ 2021 ಅನ್ನು ಭಾಗಶಃ ಮಾರ್ಪಡಿಸಿ ಅಧಿಸೂಚಿಸುವುದೇನೆಂದರೆ, ಸದರಿ ಅಧಿನಿಯಮದ ಪ್ರಕರಣ 29ರ ಉಪ–ಪ್ರಕರಣ (2)ರ ಉಪಖಂಡ (ಬಿ) ಅಥವಾ (ಸಿ)ರಡಿ ನೋಂದಣಿ ರದ್ದುಗೊಳಿಸಿದ ಮತ್ತು ಪ್ರಕರಣ 30ರ ಉಪ–

